ನಿಲುವಳಿ ಸೂಚನೆಗೆ ಅನುಮತಿನ್ನು ತಡೆಹಿಡಿದು, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಡಿ.ಕೆ. ಶಿವಕುಮಾರ್ ಹಾಗೂ ಇನ್ನಿತರು ಸದಸ್ಯರು, ಇವತ್ತೇನು ಈ ವಿಷಯ ಇಲ್ಲಿ ಪ್ರಸ್ತಾಪಿಸಲಿಕ್ಕೆ ಅವಕಾಶಬೇಕೆಂದು ಹೇಳುತ್ತಿದ್ದಾರೆ. ಈ ನಿಲುವಳಿ ಸೂಚನೆಯನ್ನು ರೂಲ್ 69ಗೆ ಪರಿವರ್ತನೆ ಮಾಡಿ ನಿಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

4. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ISKCON ಸಂಸ್ಥೆ ನಡೆಸುತ್ತಿರುವ ಅಕ್ಷರ ದಾಸೋಹ ಕಾರ್ಯಕ್ರಮದ ಬಗ್ಗೆ

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಬಹಳ ಸಂತೋಷ. Because this is a matter of public interest. It is not in the role of Government, it is a common man's topic. ಇವತ್ತು ನಾವು ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದೊಂದು ಸಂವಿಧಾನವಾಗಿ ಮಾನ್ಯತೆ ಪಡೆದಂಥ ಅಧಿಕೃತ ಜನರ ವೇದಿಕೆ ನಮ್ಮ ವಿಧಾನ ಸಭೆ. ಇಲ್ಲಿ ಇಂಥ ವಿಚಾರವನ್ನು ನಾವು ಪ್ರಸ್ತಾಪ ಮಾಡಲಿಲ್ಲವೆಂದರೆ, ಕೆಲವು ವಿಚಾರಗಳು ನೇರವಾಗಿ ಸರ್ಕಾರಕ್ಕೆ ಸಂಬಂಧಪಡದೇ ಇರಬಹುದು. ಆದರೆ, ಇದು ಎಲ್ಲಾ ಜನರ ಹಿತ ಇದರಲ್ಲಿರುವಂಥ ವಿಚಾರ. ಇಲ್ಲಿ Government's reply is not important. ಸರ್ಕಾರ ಇದರ ಬಗ್ಗೆ ಉತ್ತರ ಕೊಟ್ಟು ಬಿಟ್ಟುಬಿಡಬಹುದು. ಇದರ ಆಗು ಹೋಗುಗಳು, ಇದರ ಬದುಕು ಏನಾಗುತ್ತದೆ, ಇದು ಮುಂದಕ್ಕೆ ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದೆ ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ, ಇದು ದೇಶದ ಸ್ವಾಭಿಮಾನದ ಪ್ರಶ್ನೆ. ನಮ್ಮ ನಾಗರೀಕರು ರಾತ್ರೋರಾತ್ರಿ ನಮ್ಮದೇ ಆದಂಥ ಚಿತ್ರಣ ಮಾಡಲಿಕ್ಕೆ ತಯಾರಿಲ್ಲ. ಏಕೆಂದರೆ, ಪಾಪ ಒಳ್ಳೆಯ ಕೆಲಸ ಮಾಡುವವರನ್ನು ನಾವು ಈ ಸಂದರ್ಭದಲ್ಲಿ ಅಭಿನಂದಿಸಲೇಬೇಕು. ಕೆಲವು ಸಂದರ್ಭದಲ್ಲಿ ಒಳ್ಳೆಯ ಕೆಲಸವಾಗಿದೆ. ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ನನ್ನ ಮೂಲ ವಿಚಾರ ಏನೆಂದರೆ, ನಾವು ಅಂದರೆ ಸರ್ಕಾರದ ಕಾರ್ಯಕ್ರಮ ಮಾಡಿದ್ದೇವೆ. ಸರ್ಕಾರ ಕಾರ್ಯಕ್ರಮ ಮಾಡುವಾಗ ಸರಕಾರದ ಹಣ ತೆಗೆದುಕೊಂಡು, ನಿನ್ನೆ ನಮ್ಮ ಸ್ನೇಹಿತರು ಈ ಬಗ್ಗೆ ಒಂದು ಪ್ರಶ್ನೆ ಕೇಳಿದ್ದರು. ಅದರಲ್ಲಿ ಯಾರ್‍ಯಾರು ಮಾಡುತ್ತಿದ್ದಾರೆ, ಏನೇನು ಮಾಡುತ್ತಿದ್ದಾರೆ ಈ ಬಗ್ಗೆ ಪಟ್ಟಿ ಕೊಡಿ ಎಂದು ಕೇಳಿದ್ದಾರೆ. ಆ ಉತ್ತರದ ಪಟ್ಟಿಯಲ್ಲಿ ಅನೇಕ ಜನರು ಇದ್ದಾರೆ. ಪಾಪ ಅವರೆಲ್ಲ ಬಹಳ ಗೌರವದಿಂದ

ಈ ಕೆಲಸ ಮಾಡುತ್ತಿದ್ದಾರೆ. ಎಷ್ಟು ದುಡ್ಡು ಕೊಡುತ್ತೇವೆಯೋ ಅಷ್ಟರಲ್ಲಿ ಈ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಲಕ್ಷಾಂತರ ಹೆಣ್ಣು ಮಕ್ಕಳು, ವಿಧವೆಯರು, ಮನೆಯಲ್ಲಿರುವಂಥ ಹೆಣ್ಣು ಮಕ್ಕಳು, ಬಹಳ ಜನಕ್ಕೆ ಒಂದು ಶಾಲೆಯಲ್ಲಿ ಸುಮಾರು 3–4 ಜನ ಆ ಶಾಲೆಯಲ್ಲಿ ಕೆಲಸ ಮಾಡುವಂತೆ ಸರ್ಕಾರವೇ ತೀರ್ಮಾನ ಮಾಡಿ, ಕೆಲವು ಕಂಡೀಷನ್ ಹಾಕಿ, ಇಂತಿಂಥವರಿಗೆ ಅವಕಾಶ ಕೊಡಬೇಕೆಂದು ಮಾಡಿದರು.

ಒಂದು ಬಹಳ ಮುಖ್ಯವಾದ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಅದಮ್ಯ ಚೇತನ ಮತ್ತು ಬೇರೆ ಸಂಸ್ಥೆಯವರು 2 ಮತ್ತು 3 ರೂಪಾಯಿಗೆ ಊಟ ಕೊಡುತ್ತಾರೆ. ಆದರೆ, ಇವರದು ಒಂದು ಊಟಕ್ಕೆ 6 ರೂಪಾಯಿ. ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಹಣ ಇದಕ್ಕಾಗಿ ಇವರಿಗೆ ಸೇರುತ್ತದೆ. ಮತ್ತೆ ಎಸ್‌ಡಿಎಂಸಿ ಕಡೆಯಿಂದಲೂ ಕೂಡ ಹಣ ಕಲೆಕ್ಟ್ ಮಾಡುತ್ತಿದ್ದಾರೆ.

ಶ್ರೀ ಎಂ. ಶ್ರೀನಿವಾಸ್: ಇವರಿಗೆ ಬಿಡಿಎದವರು ಜಮೀನನ್ನು ಫ್ರೀಯಾಗಿ ಕೊಟ್ಟಿದ್ದಾರೆ. ಈ ವಿಷಯವನ್ನು ನಿಮಗೆ ಜ್ಞಾಪಿಸಿದೆ.

ಶ್ರೀ ಡಿ.ಕೆ. ಶಿವಕುಮಾರ್: ಇವರ ರಿಯರ್ ಎಸ್ಟೇಟ್ ದಂಧೆ ಬಗ್ಗೆ ಕೂಡ ಅಮೇಲೆ ಬರುತ್ತೇನೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಆದೇಶ ನನ್ನ ಹತ್ತಿರ ಇದೆ. ನಾವು ಇವರಿಗೆ ಮುಂಚಿತವಾಗಿ ಕೊಟ್ಟಿರಬಹುದು. ಆದರೆ, ಇದಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್‌ನಲ್ಲಿ ಏನಿದೆ ಎಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ಇಸ್ಕಾನ್ ಸಂಸ್ಥೆ ಎನ್ನತಕ್ಕಂಥದು ಕೃಷ್ಣನ ವಿಚಾರಕ್ಕೆ ಸಂಬಂಧಪಟ್ಟಂತ ಒಂದು ಧಾರ್ಮಿಕ ಸಂಸ್ಥೆಯಾಗಿದ್ದು, ಕೃಷ್ಣ ಲೀಲೆ ಬಗ್ಗೆ ಪ್ರಚಾರ ಮಾಡುತ್ತಿದ್ದಾರೆ, ಅವರದೆ ಆದ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತಿರುವುದು ನಮಗೆಲ್ಲಾ ಸಂತೋಷದ ವಿಷಯ. ಇದನ್ನು ಎನ್‌ಜಿಒ ಗಳಿಗೆ ಕೊಡಬೇಕಾದಾಗ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್‌ನಲ್ಲಿ ಏನು ಹೇಳುತ್ತಾರೆಂದರೆ, "A voluntary agency should not discriminate in any manner on the basis of religion, caste, creed and should not use the program for propagation of any religious practice." ಇದನ್ನು 2006ರಲ್ಲಿ ಕೇಂದ್ರ ಸರ್ಕಾರ ಮಾಡಿದಂಥ ಗೈಡ್‌ಲೈನ್ಸ್. ಇನ್ನೊಂದು ಕಡೆ ಸರ್ಕಾರ ಏನು ಹೇಳುತ್ತದೆಂದರೆ, ಯಾವುದೇ ಎಸ್‌ಡಿಎಂಸಿ ಅಥವಾ ತಂದೆ–ತಾಯಿಗಳ ಹತ್ತಿರ ನೀವು ಹಣ ಕಲೆಕ್ಟ್ ಮಾಡಬಾರದೆಂದು ಪ್ರತಿಯೊಂದು ಮಗುವಿಗೆ ಎಷ್ಟು ಹಣ ಇರಬೇಕೆಂಬುದರ ಬಗ್ಗೆ ಕೂಡ ಕಂಡೀಷನ್ ಕೂಡ ಹಾಕಿದ್ದಾರೆ. ಸರ್ಕಾರಿ

ಪ್ರೈಮರಿ ಶಾಲೆಯಿಂದ ಎಂ. ಶ್ರೀನಿವಾಸ್ ಎಂಬುವರಿಂದ ಮತ್ತೆ ಎಸ್‌ಡಿಎಂಸಿ ಶಾಲೆಯವರು ನೀಡಿರುವ ಮಾಹಿತಿಯನ್ನು ನಾನು ನಿಮಗೆ ಕಳುಹಿಸಿ ಕೊಡುತ್ತೇನೆ. ಇವತ್ತಿನ ದಿವಸ ಇವರುಗಳು ಶಾಲೆಗಳಿಂದ ಹಣವನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಮಕ್ಕಳಿಂದ, ಎಸ್‌ಡಿಎಂಸಿ ಯಿಂದ ಮತ್ತೆ ಸರ್ಕಾರದ ಕಡೆಯಿಂದ ಹಾಗೂ ಇನ್ನೊಂದು ಕಡೆ ಹೊರ ದೇಶಗಳಿಂದ ಹಾಗೂ ನಮ್ಮ ರಾಜ್ಯದ ಎಲ್ಲಾ ಕಾರ್ಪೋರೇಟರ್‌ಗಳಿಂದ ಕೋಟ್ಯಾಂತರ ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಸಣ್ಣ ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ಇವರು ದೇಣಿಗೆಯನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಇವರಿಗೆ ಫಾರಿನ್‌ನಿಂದ ಹಣ ಬರುತ್ತಿದೆ. ಅಮೇರಿಕಾದಿಂದಲೂ ಕೂಡ ಬೇಕಾದಷ್ಟು ಹಣ ಬರುತ್ತಿದೆ. ಅಲ್ಲಿಂದ ಇದರ ಬಗ್ಗೆ ಡೀಟೇಲ್ಸ್‌ನ್ನು ತರಿಸಿ ಕೊಂಡಿದ್ದೇನೆ. ಇವರು ಅಲ್ಲಿ ಫೈಲ್ ಮಾಡಿರತಕ್ಕಂಥ ಅಫಿಡವಿಟ್ ಮತ್ತು ಇನ್‌ಕಂ ಟ್ಯಾಕ್ಸ್ ಫೈಲ್ ಮಾಡಿರುವ ಮಾಹಿತಿಗಳೆಲ್ಲವನ್ನು ನಾನು ತರಿಸಿದ್ದೇನೆ. ಮಾನ್ಯ ಸುರೇಶ್ ಕುಮಾರ್‌ರವರು ಇದರ ಬಗ್ಗೆ ಸ್ವಲ್ಪ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. Akshaya Pathre Foundation, USA, Known as TFBMFEF, #92, Monteve Alve, ಎಂದು ಅಮೇರಿಕಾದಲ್ಲಿನ ಒಂದು ವಿಳಾಸ ಇದೆ. ಮಧು ಶ್ರೀಧರ್ ಎಂಬುವರು ಅಲ್ಲಿ ಪ್ರೆಸಿಡೆಂಟ್ ಆಗಿದ್ದಾರೆ. ಅಲ್ಲಿ 2001ರಲ್ಲಿ ಈ ಸಂಸ್ಥೆ ಪ್ರಾರಂಭವಾಯಿತ್ತೆಂದು ಇದರಲ್ಲಿ ಹೇಳಿದ್ದಾರೆ. ಈ ರೀತಿ ಹೇಳಿ 21,45,297 ಲಕ್ಷ ಡಾಲರ್ ಹಣವನ್ನು ಕಲೆಕ್ಟ್ ಮಾಡಲಾಗಿದೆ. It has been collected there. ಈ ಹಣ ಕಲೆಕ್ಟ್ ಮಾಡುವಾಗ ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರ ಹಣ ನೀಡುತ್ತಿರುವ ಬಗ್ಗೆ ಎಲ್ಲಿಯೂ ಕೂಡ ಹೇಳಿಲ್ಲ. ಇದೊಂದು ಭಾರತ ಸರ್ಕಾರದ ಕಾರ್ಯಕ್ರಮವೆಂದು ಹಾಗೂ ಇದಕ್ಕೆ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ದುಡ್ಡು ಕೊಡುತ್ತಿದೆ ಎಂದು ಮತ್ತು ಬೆಂಗಳೂರಿನಲ್ಲಿ ಕಾರ್ಪೋರೇಟರ್‌ಗಳು ದುಡ್ಡು ಕೊಡುತ್ತಿದ್ದಾರೆಂದು ಎಲ್ಲಿಯೂ ಕೂಡ ಹೇಳಿಲ್ಲ. ಇಷ್ಟು ಹಣವನ್ನು ಕಲೆಕ್ಟ್ ಮಾಡಿದ್ದಾರೆ. ಇದಕ್ಕೆ ಟೋಟಲ್ ರೆವಿನ್ಯೂ 21,20,140 ಡಾಲರ್ ಬಂದಿದೆ. This is one year I am telling. ಇದರಲ್ಲಿ 15,96,200 ಡಾಲರ್ ಮಾತ್ರ ಖರ್ಚಾಗಿದೆ. 75% of the amount collected is n America. It has been spend for the expenditure of Party, Dinner, Marketing ಮತ್ತು ಯಾವುದೊಂದು ಹೆಣ್ಣು ಮಗಳಿಗೆ 37 ಲಕ್ಷ ರೂಪಾಯಿ ಸಂಬಳ ಕೊಡುತ್ತಿದ್ದಾರಂತೆ. ಇವರು ಅಮೇರಿಕಾದಲ್ಲಿ ಫೈಲ್ ಮಾಡಿರುವಂಥ ಆಡಿಟ್ ಶೀಟ್ ನನ್ನ ಹತ್ತಿರ ಇದೆ. ಮತ್ತೆ ಅಮೇರಿಕಾದಲ್ಲಿ

ಫೈಲ್ ಮಾಡಿರುವಂಥ Income Tax Papers ನನ್ನ ಹತ್ತಿರ ಇದೆ. ಅಂದರೆ, ಒಂದು ವರ್ಷಕ್ಕೆ 5.23,963 ಡಾಲರ್ ನಷ್ಟು ಹಣ ಇಲ್ಲಿಗೆ ಬಂದಿದೆ. ಇಲ್ಲಿ ಸುಮಾರು 7500 ಸಂಸ್ಥೆಗಳು ಇವರಿಗೆ ಹಣವನ್ನು ಕೊಟ್ಟಿದ್ದಾರೆ. ಮೋಹನ್‌ದಾಸ್ ಪೈ ರವರು ಬಹಳ ದೊಡ್ಡ ಹೃದಯ ಶ್ರೀಮಂತಿಕೆಯನ್ನು ಹೊಂದಿರುವಂಥವರು ಅವರ ಬಗ್ಗೆ ನನಗೆ ಅಪಾರವಾದಂಥ ಗೌರವ ಇದೆ. ಅವರು ಕೂಡ ಏನು ಅಪೇಕ್ಷೆ ಇಲ್ಲದೆ ಬೇಕಾದಷ್ಟು ಹಣವನ್ನು ಮಾಡಿ ಕೆಲವು ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಕೆಲವು ಸಮಯದಲ್ಲಿ ಟ್ರಸ್ಟಿ ಎಂದು ಅವರನ್ನು ಕೂಡ ತೆಗೆದುಕೊಂಡಿದ್ದಾರೆ. ಅಮೇರಿಕಾದಲ್ಲಿನ ಸಂಸ್ಥೆಯಿಂದ ತಂದಿರುವ ದಾಖಲೆ ಬಗ್ಗೆ ನಾನು ಹೇಳುತ್ತಿದ್ದೇನೆ. Marketing Executiveಗೆ 75 ಸಾವಿರ ಕೊಡುತ್ತಿದ್ದಾರೆ. ಮತ್ತೆ ಏನೇನು exemption ಪಡೆದುಕೊಂಡಿದ್ದಾರೆಯೋ ಆ ಮಾಹಿತಿಯೆಲ್ಲ ನನಗೆ ಸಿಕ್ಕಿದೆ. ಈ ಎಲ್ಲಾ ಪೇಪರ್‌ಗಳೆಲ್ಲವನ್ನು ನಾನು ನಿಮಗೆ ಕಳುಹಿಸಿ ಕೊಡುತ್ತೇನೆ. ಇದು ಯಾವ ರೀತಿಯಾಗಿದೆ ಎಂದರೆ, ಈಗ ಒಂದು ಶ್ಲೋಕದ ಅರ್ಥ ಮಾತ್ರ ಹೇಳುತ್ತೇನೆ. ನಾನು ಸಂಸ್ಕೃತ ಶ್ಲೋಕವನ್ನು ಹೇಳಿದರೆ ಅವರೇಕೋ ಬೇಜಾರು ಮಾಡಿಕೊಳ್ಳುತ್ತಾರೆ. ಆದ್ದರಿಂದ, ಅದರ ಅರ್ಥ ಮಾತ್ರ ಹೇಳುತ್ತೇನೆ.

ಶ್ರೀ ಬಿ.ಎನ್ ಬಚ್ಚೇಗೌಡ: ಅವರು ಇಷ್ಟೆಲ್ಲಾ information collect ಮಾಡಿದ್ದಾರೆ, I appreciate you. ಏಕೆಂದರೆ, ಅವರು ಅಮೇರಿಕಾದಿಂದ ಆಡಿಟ್ ವರದಿಯನ್ನು ತರಿಸಿ ಇಲ್ಲಿ ಹೇಳುತ್ತಿದ್ದೀರಿ. Really you have done a very good work.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ತಾವು ಹೊಗಳುತ್ತಿದ್ದೀರಿ ಅಥವಾ ನೈಜವಾಗಿ ಹೇಳುತ್ತಿದ್ದೀರಾ?

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಶಿವಕುಮಾರ್‌ರವರು ಮತ್ತು ನಾವು ನೈಜ ಸ್ನೇಹಿತರು.

ಶ್ರೀ ಡಿ.ಕೆ. ಶಿವಕುಮಾರ್: With all love. He has lot of love towards me. ನಾನು ಅದನ್ನು ರಿಸೀವ್ ಮಾಡಿಕೊಳ್ಳುತ್ತೇನೆ. ಅವರು ಹಿರಿಯರು ಆದ್ದರಿಂದ, ಅವರು ಹೇಳುವುದನ್ನು ನಾನು ರಿಸೀವ್ ಮಾಡಿಕೊಳ್ಳುತ್ತೇನೆ. ಒಂದು ಶ್ಲೋಕ ಇದೆ, ಬಹುಶಃ ಇದು ಬಹಳ ಜನರಿಗೆ ಗೊತ್ತಿದೆ. ಗುಡ್ಡಕ್ಕಿಂತ ಬೆಟ್ಟ ದೊಡ್ಡದಂತೆ, ಬೆಟ್ಟಕ್ಕಿಂತ ಪರ್ವತ ದೊಡ್ಡದಂತೆ, ಪರ್ವತಕ್ಕಿಂತ ಸಮುದ್ರ ದೊಡ್ಡದಂತೆ, ಸಮುದ್ರಕ್ಕಿಂತ ಆಕಾಶ ದೊಡ್ಡದಂತೆ, ಆಕಾಶಕ್ಕಿಂತ ದೊಡ್ಡದು ದುರಾಸೆಯಂತೆ. The greed has started there. 200, 300, 500 ಮಕ್ಕಳಿಗೆ

ಅಡಿಗೆ ಮಾಡಿಸಿ ಅದನ್ನೆಲ್ಲಾ ನಮಗೆ ತೋರಿಸಿ, ಒಳ್ಳೆಯ ಕೆಲಸ, ಕಾರ್ಯಕ್ರಮ ಮಾಡುತ್ತಿದ್ದೇವೆಂದು ಹೇಳಿ ಹೊರಟ್ಟಂಥವರು ಇವತ್ತಿನ ದಿವಸ 10 ಲಕ್ಷ ಜನರ ಹತ್ತಿರ, ಸರ್ಕಾರದಿಂದ ಮತ್ತು ಹೊರಗಡೆ ದೇಶದಿಂದ ಹಣ ಕಲೆಕ್ಟ್ ಮಾಡಿ, ಬೇರೆಯವರು 3 ರೂಪಾಯಿಗೆ ಊಟ ಕೊಡುತ್ತಿದ್ದಾರೆ. ಆದರೆ, ನಾವು 6 ರೂಪಾಯಿಗೆ ಊಟ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇಂಡಿಯಾದಲ್ಲಿ ಪ್ರತಿಯೊಂದು ಮಗುವಿಗೆ cost of expenditure 42 ಪೈಸೆ ಆಗುತ್ತಿದೆಯಂತೆ. ಅಂದರೆ, ಇದು ಪ್ರಚಾರ ಮತ್ತು ಜಾಹೀರಾತಿಗಾಗಿ ಆಗುವ ಖರ್ಚಿನ ಬಗ್ಗೆ ಹೇಳಿದ್ದಾರೆ. ಇದು ಒಂದು ವರ್ಷಕ್ಕೆ 13 ಕೋಟಿ ರೂಪಾಯಿ ಆಗುತ್ತಿದೆ. ಇಂಡಿಯಾದಲ್ಲಿ 11 ತಿಂಗಳಿಗೆ ಲೆಕ್ಕ ಹಾಕಿಕೊಂಡು ಪ್ರತಿಯೊಂದು ಮಗುವಿಗೆ 42 ಪೈಸೆಯಂತೆ 10 ಲಕ್ಷ ವಿದ್ಯಾರ್ಥಿಗಳಿಗೆ ಲೆಕ್ಕ ಹಾಕಿಕೊಂಡರೆ, 12.47 ಕೋಟಿ ರೂಪಾಯಿ ಕೇವಲ ಜಾಹಿರಾತಿಗಾಗಿ ಖರ್ಚು ಮಾಡಲಾಗುತ್ತಿದೆ. ಆದ್ದರಿಂದ ಈ ಬಗ್ಗೆ ನಾನು ಪ್ರಶ್ನೆ ಕೇಳಬೇಕೆ ಅಥವಾ ಬೇಡವೆ? ಇದರ ಬಗ್ಗೆ ಚರ್ಚೆಯಾಗಬೇಕೇ ಅಥವಾ ಬೇಡವೆ ಎನ್ನತಕ್ಕಂಥದ್ದು ಇಲ್ಲಿ ದೊಡ್ಡ ಒಂದು ಪ್ರಶ್ನೆಯಾಗಿದೆ. ಚೈತನ್ಯದಾಸ್ ಎಂಬುವವರು ನನ್ನ ಹತ್ತಿರ ಬಂದಿದ್ದರು. ಅವರು ಟ್ರಸ್ಟ್ ಮಾಡಿಕೊಂಡು ಅದಕ್ಕೆ Vice President ಆಗಿದ್ದು, ಆ ಟ್ರಸ್ಟ್‌ಗೆ ಇಬ್ಬರು co-brothers ಅಂದರೆ, ಅವರು ಮತ್ತು ಅವರ ತಮ್ಮ ಇಬ್ಬರು ಸಿಸ್ಟರ್ಸ್‌ನ್ನು ಮದುವೆ ಮಾಡಿಕೊಂಡಿದ್ದಾರೆ. ಮಧು ಪಂಡಿತ್ ದಾಸ್ ಎಂಬುವವರು ಕೇರಳದಿಂದ ಇಲ್ಲಿಗೆ ಬಂದು ದೇವಸ್ಥಾನ ಮಾಡಿಕೊಂಡಿದ್ದಾರೆ. ಅವರು ಕೇರಳದಿಂದ ಇಲ್ಲಿಗೆ ಬಂದು ದೇವಸ್ಥಾನವನ್ನು ಟೇಕ್ ಓವರ್ ಮಾಡಿರತಕ್ಕಂಥದ್ದು, ಮತ್ತೆ ಅಲ್ಲಿ ಕೇಸ್ ನಡೆದಿರತಕ್ಕಂಥದ್ದು ಮತ್ತು ಬೇರೆ ಬೇರೆ ವಿಚಾರಗಳೆಲ್ಲವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇದರ ಬಗ್ಗೆ ಕೋರ್ಟ್‌ನಲ್ಲಿ ಲಿಟಿಗೇಷನ್ ಇದೆ. ಇದರ ಬಗ್ಗೆ ಕೋರ್ಟ್‌ನಲ್ಲಿ ಏನು ಬೇಕಾದರು ತೀರ್ಮಾನ ಮಾಡಿಕೊಳ್ಳಲಿ. ಅದು ನಮಗೆ ಬೇಡ. This is Central Government and State Government Programme. It is a Government Programme. ಇಂಥ ಕಾರ್ಯಕ್ರಮಗಳಿಗೆ ಹಣ ಕಲೆಕ್ಟ್ ಮಾಡುವುದಕ್ಕೆ ಅವಕಾಶ ಇದೆಯೇ? Whether we have given permission to these people to collect any money, raise fund from any one? This is No. 1 question. ಇದರ ಬಗ್ಗೆ ಜನರಲ್ ಆಗಿ ಹೇಳುತ್ತಿದ್ದೇನೆ. ಏಕೆಂದರೆ, ಪಕ್ಕದಲ್ಲಿ ವಿಕಾಸ ಸೌಧ ಕಟ್ಟಬೇಕೆಂಬ ಪ್ರಯತ್ನ ನಡೆಯಿತು.

ಅದನ್ನು ಕಟ್ಟುವುದಕ್ಕೆ ಬೇಕಾದಷ್ಟು ಕಾಂಪಿಟೇಶನ್ ನಡೆಯಿತು. L & T ಯವರು ನಮಗೆ ಬೇಕು ಶಿರ್ಕೆಯವರು ನಮಗೆ ಬೇಕು, ಏಕೆಂದರೆ it is a prestigious project. ನಾನು ಕಟ್ಟಬೇಕು. 100 ಕೋಟಿ ರೂ.ಗಳಿಗೆ ವಿಕಾಸಸೌಧವನ್ನು ಕಟ್ಟಲು ಕೊಡಲಾಯಿತು. ಅವರಿಗೆ ಗೊತ್ತಿದೆ 100 ಕೋಟಿ ರೂ.ಗಳು ಆದರೂ ಚಿಂತೆಯಿಲ್ಲ. ನನಗೆ ಹೆಸರು ಬೇಕು ಎಂದು ಹೇಳಿ, ಆ ಬಿಡ್‌ನ್ನು ತೆಗೆದುಕೊಂಡರು. ಅದು ಜಾಸ್ತಿಯಾಯಿತೊ ಕಡಿಮೆ ಆಯಿತೋ ಅದು ಬೇರೆ ವಿಚಾರ. They are the contractors. ಒಳ್ಳೆಯ ಕೆಲಸ ಮಾಡಬೇಕು, ಒಳ್ಳೆಯ ಹೆಸರು ಪಡೆದುಕೊಳ್ಳಬೇಕೆಂದು can he collect funds from the public? Is he allowed to collect funds from the Public? ಹೊಸಕೋಟೆಯಲ್ಲಿ ಒಂದು ಒಳ್ಳೆಯ ಹಾಸ್ಪಿಟಲ್ ಕಟ್ಟಬೇಕು. ನಾನು ಕಂಟ್ರಾಕ್ಟರ್ ಹತ್ತಿರ ಹಣ ತೆಗೆದುಕೊಂಡು ಸರ್ಕಾರದಿಂದ ದುಡ್ಡು ತೆಗೆದುಕೊಂಡು, ನಾನು ಮಾಡಬೇಕೆಂದು ಹೇಳಿ, ನನ್ನ ಕೈಯಿಂದ ದುಡ್ಡು ಹಾಕಿ ಮಾಡುವುದು ಅದು ಬೇರೆ ವಿಚಾರ. ನಮ್ಮ ಊರಿನಲ್ಲಿ ಹಾಸ್ಪಿಟಲ್‌ನ್ನು ಕಟ್ಟುತ್ತಿದ್ದೇನೆ, ಸರ್ಕಾರಕ್ಕೋಸ್ಕರ ಕಟ್ಟಿ ಜನರಿಗೋಸ್ಕರ ಬಿಡುತ್ತಿದ್ದೇನೆ, ನಾನು ಕಂಟ್ರಾಕ್ಟರ್ ಆಗಿದ್ದೀನಿ, ನನಗೆ ದುಡ್ಡು ಕೊಡಿ ಕೊಡಿ ಎಂದು ಭಿಕ್ಷೆ ಬೇಡುವುದಕ್ಕಾಗುತ್ತದೆಯೇ? Will the Government of Karnataka allow? Can this be possible? ನಾನು ಟ್ರಸ್ಟ್ ನಡೆಸುತ್ತಿದ್ದೇನೆ, ಬೇಕಾದಷ್ಟು ಜನರು Educational Institutionಗಳನ್ನು ನಡೆಸುತ್ತಿದ್ದಾರೆ. ಒಳ್ಳೆಯ ಕೆಲಸವನ್ನು ಮಾಡಲಿ, ಆ ಟ್ರಸ್ಟ್ ನಡೆಸುವಂಥವರು, any charitable institution ನಡೆಸುವಂಥವರು.

ಶ್ರೀ ಬಿ.ಎನ್. ಬಚ್ಚೇಗೌಡ: ಟ್ರಸ್ಟ್–ಮೋಸ ಈ ದೇಶದಲ್ಲಿ. ಆ ಟ್ರಸ್ಟ್ ಆಕ್ಟ್ ಅನ್ನು ತೆಗೆಯಬೇಕು. ಟ್ರಸ್ಟ್ ಹೆಸರಿನಲ್ಲಿ they are looting this country. It is breach of trust, it is not trust. ಸಾವಿರಾರು ಎಕರೆ ಇಟ್ಟುಕೊಂಡು, ಬೇನಾಮಿ transactions ಮಾಡಿಕೊಂಡು ಹೇಳಿಕೊಳ್ಳುವಂಥವರು ಈ ದೇಶದಲ್ಲಿ ಇದ್ದಾರೆ. The very Trust Act ಮೋಸ. Trust ಬಹಳ ಒಳ್ಳೆಯದು ಎಂದು you just believe. Instead of quoting 'Society', 'Trust' ಎಂದು ಕೋಟ್ ಮಾಡುತ್ತಾರೆ. What is the intention? ಟ್ರಸ್ಟ್ ಹೆಸರನ್ನು ಇಟ್ಟುಕೊಂಡು ಅದನ್ನು ಹೊಡೆದುಕೊಳ್ಳುವುದಕ್ಕೆ. That is the 'Trust' now.

ಶ್ರೀ ಡಿ.ಕೆ. ಶಿವಕುಮಾರ್: ಟ್ರಸ್ಟ್ ಅಂದರೆ, it should be trustworthy. ಇಲ್ಲಿ thirsty ಆಗಿ ಬಿಟ್ಟಿದೆ. It has become thirsty. That is the problem.

ಶ್ರೀ ಬಿ.ಎನ್. ಬಚ್ಚೇಗೌಡ: 2–4 ಸಾವಿರ ಎಕರೆ ಜಮೀನು ಇಟ್ಟುಕೊಳ್ಳುವುದು, ಟ್ರಸ್ಟ್ ಹೆಸರು ಇಟ್ಟುಕೊಳ್ಳುವುದು, ಈ ದೇಶದಲ್ಲಿ ನೋಡುತ್ತಿದ್ದೇವೆ, ನಾನು ಕೂಡ advocate.

ಶ್ರೀ ಟಿ.ಬಿ. ಜಯಚಂದ್ರ: ತಾವು ಮಂತ್ರಿಗಳು, Trust Act ನಲ್ಲಿ ಇಂತಹ ವ್ಯವಹಾರವೆಲ್ಲಾ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ: ಹೌದು, ಅದು ನಿಮಗೂ ಗೊತ್ತು.

ಶ್ರೀ ಟಿ.ಬಿ. ಜಯಚಂದ್ರ: ಆ Trust Act ಅನ್ನು ತೆಗೆಯುವುದಕ್ಕಿಂತ make it accountable. Come out with the legislation or a resolution to the Government of India.

Sri B.N. Bachegowda: This is my intention, I am just expressing. ಅವರು ಏನು ಮಾಡುತ್ತಿದ್ದಾರೆಂದು, we are seeing this.

Sri T.B. Jayachandra: I understand your concern and your commitment also. Please do it. As a minister you are making a statement. Be bound by that. Come out with some positive response.

ಶ್ರೀ ಬಿ.ಎನ್. ಬಚ್ಚೇಗೌಡ: ನಾನೇನು ಮಾಡುವುದಕ್ಕಾಗುತ್ತದೆ? I am just expressing. ನಾನೊಬ್ಬ ಏನು ಮಾಡುವುದಕ್ಕಾಗುತ್ತದೆ? ಈ ದೇಶದಲ್ಲಿ ನಡೆಯುವ ವ್ಯವಹಾರ, ಈ ವ್ಯವಸ್ಥೆಗೆ ನಾನೇನು ಮಾಡುವುದಕ್ಕಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: Trust Act ನಲ್ಲಿ ಸಾಕಷ್ಟು ಅಕ್ರಮ ಹಣ, ಆಸ್ತಿಗಳನ್ನು ಮಾಡಿ ಅದನ್ನು ಇಟ್ಟುಕೊಂಡಿರುತ್ತಾರೆ. Accountable ಇಲ್ಲ, ಆ accountability ತರುವಂಥ ರೀತಿಯಲ್ಲಿ ನೀವು ಒಂದು ಮಸೂದೆಯನ್ನು ತನ್ನಿ, ನಾವು ಮಾಡಿಕೊಡೋಣ. ಅದು ಆ ಕಡೆ ಈ ಕಡೆ ಎರಡು ಕಡೆ ಅಪ್ಲೈ ಆಗುವಂಥದ್ದು.

ಶ್ರೀ ಬಿ.ಎನ್. ಬಚ್ಚೇಗೌಡ: ಕೇಂದ್ರ ಸರ್ಕಾರ ತರುವಂಥ ಮಸೂದೆ ಇದು. Central Act.

ಶ್ರೀ ಟಿ.ಬಿ. ಜಯಚಂದ್ರ: I know. ಈ ಮಸೂದೆ ತರುವುದಕ್ಕೆ ಆಗದಿದ್ದರೆ, come out with a resolution of this House.

ಶ್ರೀ ಬಿ.ಎನ್. ಬಚ್ಚೇಗೌಡ: ಅಯಿತು.

ಶ್ರೀ ಡಿ.ಕೆ. ಶಿವಕುಮಾರ್: ನಾವು ಟ್ರಸ್ಟ್‌ಗಳನ್ನು ಮಾಡಿದ್ದೇವೆ, ನಾನು ಸ್ಕೂಲ್ ನಡೆಸುತ್ತಿದ್ದೇನೆ. ಚ್ಯಾರಿಟಬಲ್ ಕೆಲಸ ಮಾಡಬೇಕೆಂದು ಹೊರಬರುತ್ತೇವೆ. ಈ ಪ್ರಯತ್ನವನ್ನು ನಮ್ಮ friends ಎಲ್ಲಾ ಮಾಡುತ್ತಿದ್ದಾರೆ. Will the Government of Karnataka or any Government allow to collect funds, donations? When there is a Government Scheme, when there is a policy, when the Government is involved,can we do it? ಯಾವುದಾದರೊಂದು ಚಾರಿಟಬಲ್ ಸಂಸ್ಥೆ business ಮಾಡುವುದಕ್ಕೆ ಅವಕಾಶ ಇದೆಯಾ? ಏಕೆಂದರೆ, ಕನಕಪುರ ರೋಡಿನಲ್ಲಿ, ನಮ್ಮ ಸ್ನೇಹಿತರು ಅದರ ಬಗ್ಗೆ ಪ್ರಸ್ತಾಪ ಮಾಡಿದರು. ನಮ್ಮ ಸರ್ಕಾರವೇ, ಪಾಪ ಮಾನ್ಯ ರಾಮಕೃಷ್ಣ ಹೆಗಡೆಯವರು ದೊಡ್ಡ ಮನಸ್ಸು ಮಾಡಿ ಅವತ್ತಿನ ಕಾಲದಲ್ಲಿ ಬೆಂಗಳೂರಿನಲ್ಲಿ ಇಸ್ಕಾನ್ ಕಟ್ಟಲಿ ಎಂದು ಕೊಟ್ಟರು. ಬಹಳ ವೈಭವಯುತವಾಗಿ ಕಟ್ಟಿದ್ದಾರೆ. It has become a very tourism place. ಅದಕ್ಕೆ ಯಾರ್‍ಯಾರು ಜನ ಸಹಾಯ ಮಾಡಿದರು, ಯಾರ್‍ಯಾರು ದಾನ ಮಾಡಿದರು, ಯಾರ್‍ಯಾರು ನಮಗೆ ಶಕ್ತಿಯನ್ನು ಕೊಟ್ಟರು, ನಾವು ಈ ಸಂದರ್ಭದಲ್ಲಿ ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸ ಬೇಕಾಗುತ್ತದೆ. ಏಕೆಂದರೆ, ಒಳ್ಳೆಯ ದೇವಸ್ಥಾನ ಬೆಂಗಳೂರಿಗೆ ಬಂದಿದೆ. ಅದಾದ ಮೇಲೆ 2001ರಲ್ಲಿ ನಾವೆಲ್ಲಾ ಕ್ಯಾಬಿನೆಲ್‌ನಲ್ಲಿದ್ದಾಗ ಮಾನ್ಯ ಶ್ರೀಕಂಠಯ್ಯನವರು ಕಂದಾಯ ಮಂತ್ರಿಯಾಗಿದ್ದರು, ಆಗ ಅಲ್ಲಿ ಒಂದು Thempl Park ಕೃಷ್ಣಲೀಲೆ ಪಾರ್ಕ್ ಮಾಡುತ್ತೇವೆಂದು ಒಂದು ಪ್ರಪೋಸಲ್ ಬಂತು. ಆ ಸಂದರ್ಭದಲ್ಲಿ ನಾವು ಒಂದು ಜಾಗವನ್ನು ಕೊಟ್ಟಿರುತ್ತೇವೆ. 28-30 ಎಕರೆ ಜಾಗವನ್ನು ಯಶವಂತಪುರದಲ್ಲಿ ಕೊಡಲಾಯಿತು.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ): ಮಾನ್ಯ ಉಪಾಧ್ಯಕ್ಷರೆ, 28 ಎಕರೆ ಜಮೀನನ್ನು ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಕೊಟ್ಟಿದ್ದು, ಆಗ ಇದೊಂದು ಒಳ್ಳೆಯ ಇಸ್ಕಾನ್ ಸಂಸ್ಥೆ ಎಂದು ಅಡಿಷನಲ್ ತೊಂದರೆ ಆದಾಗ ಕೂಡ ಆರೂವರೆ ಎಕರೆ ಜಮೀನನ್ನು ದೇವಸ್ಥಾನಕ್ಕೆ ನಾವು ಕೊಟ್ಟಿರುತ್ತೇವೆ. ನಾವು ಕೂಡ ಆಗ ಸಪೋರ್ಟ್ ಮಾಡಿರುವಂಥ ಒಂದು ಒಳ್ಳೆಯ ಸಂಸ್ಥೆ ಅದು.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ, ಒಳ್ಳೆಯದನ್ನು ಮಾಡಲಿ ಎಂದು ಕೊಟ್ಟಿರುತ್ತೀರಿ. ಅದು ಆದ ಮೇಲೆ ಮಾನ್ಯ ಧರ್ಮಸಿಂಗ್‌ರವರ ಸಮಯ ಬಂತು. Lease deed became a sale deed. ಇದು ಬಹಳ

ಸಂತೋಷ. ಅವರಿಗೆ ಏನೇನೋ ಕಂಡಿಷನ್ ಬೇಕಾಗಿತ್ತು ಅದನ್ನು ಮಾಡಿಕೊಂಡು ಕಟ್ಟಿದರು ಕಟ್ಟಲಿ. ಅದೇ ಸಮಯದಲ್ಲಿ ಅದರ ಪಕ್ಕದಲ್ಲಿ ಒಂದು ಪ್ರಾಪರ್ಟಿ ಇತ್ತು, KAIDB ಅಥವಾ KSFC ಯಿಂದ ಅದು ಆಕ್ಷನ್ ಆಯಿತು. ಅದರಲ್ಲಿ ಬಹಳ ಜನ participate ಮಾಡಿದರು. ನಮ್ಮ ಸ್ನೇಹಿತರುಗಳು participate ಮಾಡಿದರು. ಆಗ ನಮಗೆ ಟೆಲಿಫೋನ್‌ಗಳು, ನಿಮ್ಮ ಸ್ನೇಹಿತರಿಗೆ ಹೇಳಿ, ಒಂದು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಯಾರೂ ಬಿಡ್ ಮಾಡುವುದು ಬೇಡ, ಏನೋ ಒಂದು ಅದನ್ನು ಬಿಟ್ಟು ಕೊಟ್ಟು ಬಿಡೋಣ. ಅಲ್ಲಿ ಕೃಷ್ಣ ಲೀಲೆ ಪಾರ್ಕ್ ಮಾಡುತ್ತಿದ್ದಾರೆ, ಸರ್ಕಾರದವರು ಜಾಗವನ್ನು ಕೊಟ್ಟಿದ್ದಾರೆ, ಆ ಜಾಗವು ಸೇರಿದರೆ ಒಂದು' international tourism place ಆಗುತ್ತದೆಂದು ಹೇಳಿದಾಗ ಅವರೆಲ್ಲರೂ ಬಿಟ್ಟರು. ಅವರು India Heritage Trust ಎಂದು ಒಂದು ಸಂಸ್ಥೆಯನ್ನು ಮಾಡಿ ಅದಕ್ಕೆ ಟ್ರಸ್ಟ್ ಹೆಸರು ತೆಗೆದುಕೊಂಡರು. ಬಹಳ ಸಂತೋಷ. ಏನೋ ಮಾಡುತ್ತಿದ್ದಾರೆ, ಒಳ್ಳೆಯದಾಗಲಿ ಎಂದು. ಅದನ್ನು ನೋಡಿದರೆ ಮುಂದೆ ಆರು ತಿಂಗಳಾಯಿತು. ಅವರು ಬಿ.ಡಿ.ಎ.ಗೆ 2000 ಅಪಾರ್ಟ್‌ಮೆಂಟ್‌ಗೆ ಅರ್ಜಿ ಹಾಕಿ ಪರ್ಮಿಷನ್ ತೆಗೆದುಕೊಂಡರು. ಮೆ: ಇಸ್ಕಾನ್ ಚಾರಿಟೀಸ್ ಮತ್ತು ಇಂಡಿಯಾ ಹೆರಿಟೇಜ್ ಸಂಸ್ಥೆಯವರಿಗೆ ಅನುಮೋದನೆ ಕೊಡಲಾಗಿದೆ ಎಂದು ಎಷ್ಟೋ ಲಕ್ಷ Sq.Ft. ಗೆ ಇಷ್ಟೊಂದು ಮನೆ ಕಟ್ಟುವುದಕ್ಕೆಂದು ಹೇಳಿ ಇಲ್ಲಿ ಒಂದು ಪ್ಲಾನ್ ಇದೆ ಎಂದು ಹೇಳಿ ಬೆಂಗಳೂರಿನ ಕನಕಪುರ ರೋಡಿನಲ್ಲಿ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದರು, ಆ ಅಪಾರ್ಟ್‌ಮೆಂಟ್‌ಗಳನ್ನು ಮಾರಿ ಬಿಟ್ಟರು. ಅದು ಆದ ಮೇಲೆ, ಇಲ್ಲಿ ಒಂದು ಊಟಕ್ಕೆ 3 ರೂ.ಗಳು ಉಳಿಯುತ್ತಿತ್ತು, ದೊಡ್ಡ ದೊಡ್ಡ ಮಹಾನುಭಾವರೆಲ್ಲರೂ ಸೇರಿ ದುಡ್ಡು ಕೊಟ್ಟಿದ್ದೀರಲ್ಲಾ? ದೇವನಹಳ್ಳಿ ಏರ್‌ಪೋರ್ಟ್ ಹತ್ತಿರ 'created exclusively for those who know this. Nothing like this. Heritage Devanahally City, a project by Residency Group, India Heritage Trust' ಎಂದು ಹೇಳಿ, 100 acres Villas, ಇನ್ನೊಂದು ಕಡೆ Beach Resort, Chennai, ತಿರುಪತಿ, ಜೈಪುರದಲ್ಲಿ, ಕೋವಲಂಬೀಚ್, ರೆಸಾರ್ಟ್, ಮಧುರಿನಲ್ಲಿ 90 ಎಕರೆ, ಶ್ರೀರಂಗಪಟ್ಟಣದಲ್ಲಿ ಅಂದರೆ ನೈಸ್ ರೋಡ್ ಪಕ್ಕದಲ್ಲಿ 150 ಎಕರೆ, ಅದು ಯಾರ ಹೆಸರಿನಲ್ಲಿ ಎಂದರೆ, ಟ್ರಸ್ಟ್ ಇರುತ್ತದಲ್ಲಾ, in the personal name of the Vice President, ಚಂದ್ರಶೇಖರನ ಹೆಸರಿನಲ್ಲಿ ನನ್ನ ಹತ್ತಿರ RTC ಇದೆ. I have an RTC. He is a Co-brother.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಇದೇ ಸಂಸ್ಥೆಯವರು un-authorize ಆಗಿ 60 ಎಕರೆ ಎಂದು ಹೇಳಿ 200 ಎಕರೆಯವರೆಗೆ ಬೌಂಡರಿ ಹಾಕಿಕೊಂಡಿದ್ದಾರೆನ್ನುವ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ, ದೇಸ್ಥಾನಕ್ಕೆ ಒಂದು ಹೆಸರು. ಪ್ರಾಪರ್ಟಿ ಮಾಡುವುದಕ್ಕೆ ಒಂದು ಪರ್ಸನಲ್ ಹೆಸರು ಇದಕ್ಕೆ ಒಂದು ವಿಲ್ ಮಾಡಬೇಕಲ್ಲವೆ? ಆ ಟ್ರಸ್ಟಿ ಯಾರು ಎಂದರೆ ಆ ಟ್ರಸ್ಟಿನಲ್ಲಿ ಯಾರ್‍ಯಾರು ಇದ್ದಾರೆಂದರೆ, ತಾನು ಮತ್ತು ತನ್ನ Co-brother ಇರುತ್ತಾರೆ.

ಆ ಟ್ರಸ್ಟ್‌ನಲ್ಲಿ ಯಾರಿದ್ದಾರೆಂದರೆ, ಅವರು ಮತ್ತು ಅವರ co-brother. Turstನ ರಿಜಿಸ್ಟ್ರೇಷನ್ ಇದೆ. ಯಾರಪ್ಪಾ ಅಂದರೆ ಮಧು ಪಂಡಿತ್ ಛೇರ್ಮನ್, ಅವರ ಇನ್ನೊಬ್ಬ co-brother ಇಬ್ಬರು Vice-Chairman ಅಂತೆ. ಇವರಿಬ್ಬರನ್ನು ಬಿಟ್ಟರೆ ಇವರಾದರೆ ಅವರು ಅವರು ಸತ್ತರೆ ಇವರು. ಬೇರೆ 3–3– ಹಾಗೂ 4–4– ಜನರನ್ನು 3–3 ವರ್ಷಕ್ಕೊಮ್ಮೆ ತೆಗೆದುಕೊಳ್ಳಬಹುದಂತೆ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಟ್ರಸ್ಟ್‌ನಲ್ಲಿ ಯಾರ ಜೊತೆಯಲ್ಲಿ ಜಾಸ್ತಿ ಟ್ರಸ್ಟ್ ಇರುತ್ತದೆಯೋ, ವಿಶ್ವಾಸ ಇರುತ್ತದೆಯೋ ಅವರನ್ನೆ ಟ್ರಸ್ಟಿಗಳನ್ನಾಗಿ ಮಾಡಿಕೊಳ್ಳುವುದು, ಅಲ್ಲವೇ? ಅದಕೋಸ್ಕರವೇ ಅವರು ಮಾಡಿ ಕೊಂಡಿರುವುದು.

ಶ್ರೀ ಡಿ.ಕೆ. ಶಿವಕುಮಾರ್: I agree with you. ನಾನು ಇಲ್ಲವೆಂದು ಹೇಳುತ್ತಿಲ್ಲ. ಅಮೇಲೆ main temple ಇದೆಯಲ್ಲಾ, ಅದರದು ಒಂದು ಬಣ್ಣ ತಯಾರಾಗಿದೆ. ಮಧುಪಂಡಿತ್‌ದಾಸ್, ಚಲಪತಿದಾಸ್ co-brother ಇನ್ನೊಬ್ಬರು Jain Sanghaದ adopted son. ಇನ್ನೊಬ್ಬ ಚಿತ್ತರಂಗದಾಸ್ ಅವರ ಒಬ್ಬ adopted son ಇನ್ನೊಬ್ಬ ಭಕ್ತಿಲಾಲ್‌ದೇವಿ, ಶ್ರೀ ಮಧುಪಂಡಿತ್ wife ಇನ್ನೊಂದು ಚಲಪತಿದಾಸ್‌ರವರ wife. ಅವರು ದೇವರ ಕೆಲಸವನ್ನು ಮಾಡಲಿ.

"ಧರ್ಮ, ಯಾವುದಾದರೂ ತತ್ವ ಒಂದೇ,
ನಾಮ ನೂರಾದರೂ ದೈವ ಒಂದೇ,
ಪೂಜೆ ಯಾವುದಾದರೂ ಭಾವ ಒಂದೇ, ಭಕ್ತಿ ಒಂದೇ,
ಕರ್ಮ ಹಲವಾದರೂ ನಿಷ್ಠೆ ಒಂದೇ,
ದೇವನೊಬ್ಬ ನಾಮ ಹಲವು."

ಅವರು ಯಾವುದೇ ಹೆಸರಿನಲ್ಲಿ ಮಾಡಿಕೊಳ್ಳಲಿ, ನಾನು ಬೇಡವೆಂದು ಹೇಳುವುದಿಲ್ಲ. ಧರ್ಮದ ಕೆಲಸವನ್ನು ಮಾಡಲಿ, ಅವರು ಧರ್ಮವನ್ನು ಧರ್ಮದಿಂದ ಬೇಕಾದಷ್ಟು ಅವರಿಗೆ ನೆಮ್ಮದಿ, ಸಂತೋಷ, ಜನರಿಗೆ ಒಳ್ಳೆಯದನ್ನು ಮಾಡಲಿ. If you wanted to do a business, ಅವರು ಸ್ವಂತ ಹೆಸರಿನಲ್ಲಿ ಒಂದು companyಯನ್ನು float ಮಾಡಲಿ. I am not telling no. Let him do it in a company name. Why the name of Lord Krishna? Why are you taking heritage and trust? ಇಸ್ಕಾನ್ ಚಾರಿಟಿ ಏಕೇ ಬೇಕು? ಈ ದೇವರ ಹೆಸರಿನಲ್ಲಿ emotional ಆಗಿ ನಮ್ಮ ಮಕ್ಕಳ ಫೋಟೋವನ್ನು ತೋರಿಸಿ ಎಲ್ಲಾ ಕಾರ್ಪೋರೇಟರ್‌ಗಳಿಗೆ ನನಗೆ ಟೆಲಿಫೋನ್ ಮಾಡಿಬಿಟ್ಟು ಒಂದು ಹೆಣ್ಣು ಮಗು ಮಾತನಾಡುತ್ತಾಳೆ. ಏನು ಎಷ್ಟು pressure ಮಾಡುತ್ತಾರೆಂದರೆ, ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಹಣ ತಕ್ಷಣ ಕೊಟ್ಟಿ ಬಿಡಬೇಕು ಆ ರೀತಿಯಾಗಿ ಮಾಡುತ್ತಾರೆ. ಅಲ್ಲಿ ಯಾರ್ಯಾರೋ ಹೆಣ್ಣು ಮಕ್ಕಳು ಹಣವನ್ನು collection ಮಾಡಿದ್ದಾರಲ್ಲಾ ಅವರೆಲ್ಲರನ್ನು ನಾನು ಕರೆಸಿ ಮಾತನಾಡಿದ್ದೆ. ಬಹಳ ಜನ ನನ್ನ ಸ್ನೇಹಿತರ ಹತ್ತಿರ ಹೋಗಿದ್ದಾರೆ. ನಮ್ಮ leaders ಹತ್ತಿರ ಹೋಗಿದ್ದಾರೆ. ನಮ್ಮ ಅಧ್ಯಕ್ಷಾಗಾಧಿಯಾಗಿ ಹೋಗಿದ್ದಾರೆ. Central Ministerರವರ ಹತ್ತಿರ ಹೋಗಿದ್ದಾರೆ. Press ನವರ ಹತ್ತಿರ ಹೋಗಿದ್ದಾರೆ. ಇದಕ್ಕೆ ಬೇಡ ಇದೇ ಅವಕಾಶ. If you are so clean, if you are honest, if your integrity is good, if you are very clearn, ಏಕೆ ಇವೆಲ್ಲಾ ಬೇಕು. ಮೊದಲು ಒಂದು ಕಾಲವಿತ್ತು, ನಾವು ಏನಾದರೂ ತಪ್ಪನ್ನು ಮಾಡಿದರೆ ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ಅದನ್ನು ಅನುಭವಿಸ ಬೇಕಾಗುತ್ತದೆ. ಈಗ ಹಾಗೇನು ಇಲ್ಲ, ನಮ್ಮ ಕಾಲಕ್ಕೆ ಇನ್ನೊಂದು 3–4 ತಿಂಗಳಿಗೆ ನಮಗೆ ಗೊತ್ತಾಗಿ ಬಿಡುತ್ತದೆ. ಹಾಗೇ ದೇವರು ತಪ್ಪು ಮಾಡಿದವರನ್ನು ನಾನು ತಪ್ಪನ್ನು ಮಾಡಿದರೆ ದೇವರು ನನಗೆ ಶಿಕ್ಷೆಯನ್ನು ಕೊಡುತ್ತಾನಲ್ಲಾ? ಇದರ ಬಗ್ಗೆ ನಮಗೆ ನಂಬಿಕೆ ಇದೆಯಲ್ಲಾ.

ಶ್ರೀ ಎಂ. ಶ್ರೀನಿವಾಸ್: ದೇವರು ಒಳ್ಳೆಯವರಿಗೆ ತಕ್ಷಣಕ್ಕೆ ಕೊಡುವುದಿಲ್ಲ. ಕೆಟ್ಟವರಿಗೆ ಇನ್ನು ಬಹಳ ದಿವಸ ಆಯಸ್ಸು ಇರುತ್ತದೆ. ಒಳ್ಳೆಯವರಿಗೆ ದೇವರ ಹತ್ತಿರ ಬೇಗ ಶಿಕ್ಷೆಯಗುತ್ತದೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ: ಸನ್ಮಾನ್ಯ ಉಪಾಧ್ಯಕ್ಷರೆ, ಶ್ರಾವಣ ಮಾಸದ ಮೊದಲನೆಯ ದಿವಸ ನಮ್ಮ ಉತ್ತರ ಕರ್ನಾಟಕದ ಪುರಾಣ ಕೇಳುವಂತಹದ್ದು

ಶುರುವಾಯಿತು ಒಂದು ತಿಂಗಳ ನಂತರ. ಈ ದಿವಸ ಸನ್ಮಾನ್ಯ ಡಿ.ಕೆ. ಶಿವ ಕುಮಾರ್‌ರವರು ಒಳ್ಳೆಯ ವಿಷಯವನ್ನು ಇಸ್ಕಾನ್ ಪುರಾಣವನ್ನು ತಂದಿದ್ದಾರೆ. ನಾನು ಅವರಿಗೆ ಅಭಿನಂದನೆಗಳನ್ನು ಹೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ನಾನು ನನಗೆ this is not the main of iscon ಈ ದೇಶದ ಸಂಸ್ಕೃತಿ, ದಾನ, ದಾನವನ್ನು ಮಾಡಬೇಕಾದರೆ ಯಾವ ರೀತಿಯಾಗಿ ದಾನವನ್ನು ಮಾಡಿದ್ದಾರೆ. ಏತಕೋಸ್ಕರ ದಾನವನ್ನು ಮಾಡಿದ್ದಾರೆ. ಇವೆಲ್ಲವೂ ಬಹಳ ಮುಖ್ಯವಾದಂತಹ ವಿಚಾರ. ಈ ದಾನವು ಸರಿಯಾದ ರೀತಿಯಲ್ಲಿ ತಲುಪುತ್ತಿದೆಯೇ, ಇಲ್ಲವೋ ಅನ್ನುವುದನ್ನು ನೋಡಬೇಕು. ನಾನು ಇದನ್ನು ಪ್ರಸ್ತಾವನೆಯನ್ನು ಮಾಡುವುದನ್ನು 6.00 ರೂಪಾಯಿಗೆ ಅಕ್ಕಿಯನ್ನು ಕೊಡುತ್ತಿದ್ದೇವೆಂದು ಎಂದು ಹೇಳಿ ಇತ್ತಲ್ಲಾ, ಇಲ್ಲಿ ಆಡಿ ತಪ್ಪಬಾರದು ಮಾನ್ಯ ಉಪಾಧ್ಯಕ್ಷರೆ, ನಮ್ಮ ಹಿರಿಯವರು ಹೇಳುತ್ತಾರೆ. "ಆಡಿ ತಪ್ಪಬೇಡ, ಓಡಿ ಸಿಕ್ಕಿ ಹಾಕಿಕೊಳ್ಳಬೇಡ, ನೀನು ಬೇಡಿ ತಿನ್ನಬೇಡ" ಎಂದು ನಮ್ಮ ಹಿರಿಯರು ಹೇಳುತ್ತಾರೆ. ಏಕೆಂದರೆ ಇಲ್ಲಿ ಅನೇಕ ವಿಚಾರಗಳು ಅಡಗಿರುವುದರಿಂದ ನಾನು ಇದನ್ನು ಪ್ರಸ್ತಾವನೆಯನ್ನು ಮಾಡಿದ ತಕ್ಷಣ ಇದ್ದಕ್ಕಿದ್ದ ಹಾಗೆ 6.00 ರೂಪಾಯಿ ಇದ್ದ website ತಕ್ಷಣ change ಆಗಿಬಿಡುತ್ತದೆ. ನನ್ನ ಹತ್ತಿರ details ಮತ್ತು date ಎಲ್ಲವೂ ಇಲ್ಲಿ ಇದೆ. Recent Website 6.00 ರೂಪಾಯಿಯನ್ನು collect ಮಾಡುತ್ತೇನೆ ಎನ್ನುತ್ತಿದ್ದವರು, ಇಲ್ಲಿ ಬಹಳ jealousy ಇದ್ದಾರೆ. ಕೆಲವರು ಏನೋ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರ ನಮಗೆ ಸಹಾಯವನ್ನು ಮಾಡುತ್ತಿದೆ, ನೀವು ಸಹಾಯವನ್ನು ಮಾಡಿದ್ದರಿಂದ ನಾವು ಒಂದು child ಗೆ ಇಷ್ಟು ದಿವಸ 6.00 ರೂಪಾಯಿಯನ್ನು collect ಮಾಡುತ್ತಿದ್ದೇವು ಈಗ ಒಂದು boy ಮತ್ತು girlಗೆ 1,200–00 ರೂಪಾಯಿಯನ್ನು collect ಮಾಡುತ್ತಿದ್ದೇವೆ. ಇಂತಹ websiteನ್ನು ಒಂದು ವಾರದಲ್ಲಿ change ಮಾಡುತ್ತಾರೆ. ಒಂದು ವಾರದಲ್ಲಿ, ಹದಿನೈದು ದಿನದಲ್ಲಿ ಈ website detail dated 7–7–2009, there was a time around 2000 when our scale of operation was small, the cost of meal was about Rs. 6/- per child. But, however, the State of economy is raised subsidy provided by the Government which is valued by the Government reputed price of Rs. 585/- per kg., the cost of the meal much is lesser. So, now we are coming out with the cost. There we have found that Rs. 1200/- is convenient amount for the communication to the propagative donor to easier by number of amount that Rs. 100/- per month. However, we are providing

information to VAT Rs. 1200/-. It leads to three children where there is Government support to feed, one child where there is no Government support. ನೋಡಿ ಮೂರನ್ನು ಕೊಡಬಹುದಂತೆ. ಇದು ಹೊಸದಾಗಿ 7–7–2009ರಂದು ಅವರು ಕೊಟ್ಟಿರುವುದು. We can now feed two children for Rs. 1200/- per year. The cost break up is as follows ಎಂದು ಹೇಳಿ conclusionಗೆ ಈಗ lastನಲ್ಲಿ ನಾವು ಮಾಡಿರುವುದು. ಅಂದರೆ ಇಷ್ಟು ದಿನ ಎಷ್ಟು ಹಣವನ್ನು ಲೂಟಿ ಮಾಡಿದ್ದಾರೆ, ಎಷ್ಟು ಹಣವನ್ನು ಜನರ ಹತ್ತಿರ ವಸೂಲು ಮಾಡಿದ್ದಾರೆ. ಸರ್ಕಾರಕ್ಕೆ ಮೋಸವನ್ನು ಮಾಡಿದ್ದಾರೆ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನೆನಪಿನಲ್ಲಿಟ್ಟುಕೊಳ್ಳಬೇಕು. SDMCಯಿಂದ ಇಲ್ಲಿ ಹಣವನ್ನು ತೆಗೆದು ಕೊಳ್ಳುವುದಕ್ಕೆ ಅವಕಾಶವಿಲ್ಲ. I have a document. I will provide you. Let it be for anything. They have not. ಒಂದು ಈ ಸಂಸ್ಥೆಗೆ eligibility ಇಲ್ಲ. next ಅದು ಬಿಡಿ ಅದರ ಬಗ್ಗೆ ಬೇರೆ ಚರ್ಚೆಯನ್ನು ಮಾಡೋಣ. ನೀವು ಮಾಡುವಿರಂತೆ. ಹಣವು ಕೇಂದ್ರ ಸರ್ಕಾರದಿಂದ ಸಬ್ಸಿಡಿ ಬಂದ ಮೇಲೆ ರಾಜ್ಯ ಸರ್ಕಾರದವರು ಹಣವನ್ನು ಕೊಟ್ಟ ಮೇಲೆ, they are not eligible to collect funds. ಇಲ್ಲಿ ನೀವೇ ಕೊಟ್ಟಿದ್ದೀರಿ. ಅದನ್ನು ನಂತರ ನಾನು ನಿಮಗೆ ಕೊಡುತ್ತೇನೆ. State ಇಂತಹ ಒಂದು ಸಂಸ್ಥೆಗಳಿಗೆ ಹಣವನ್ನು collect ಮಾಡಿಕೊಳ್ಳುವುದಕ್ಕೆ permission ಕೂಡ ಕೊಟ್ಟಿರುವುದಿಲ್ಲ ಇದನ್ನು ತಾವು ತಲೆಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಶ್ರೀನಿವಾಸ (ರಾಜರಾಜೇಶ್ವರಿ ನಗರ): ಮಾನ್ಯ ಡಿ.ಕೆ. ಶಿವ ಕುಮಾರ್‌ರವರೆ ಇನ್ನೊಂದು ವಿಷಯ ಹೇಳುವುದಾದರೆ first time 1-1 ಲಕ್ಷವನ್ನು Membershipಗೆ ತೆಗೆದುಕೊಂಡಿದ್ದಾರೆ. ಆ ವಿಷಯವನ್ನು ನಿಮ್ಮ ಗಮನಕ್ಕೆ ತಂದೆ.

ಶ್ರೀ ಡಿ.ಕೆ. ಶಿವಕುಮಾರ್: ನೂರಾರು ಕೋಟಿ ರೂಪಾಯಿಗಳು ಬಂದಾಗ ಪಾಪ ಅವರು ಏನಾದರೂ ಮಾಡಬೇಕಲ್ಲಾ, ಅವರು ಏನಾದರೂ business ಮಾಡಬೇಕಲ್ಲಾ, ಸ್ವಂತ ಜಮೀನನ್ನು ತೆಗೆದುಕೊಳ್ಳಬೇಕಲ್ಲ, flatಗಳನ್ನು ಮಾಡಬೇಕಲ್ಲಾ, ಮಾನ್ಯ ಸುರೇಶ್‌ಕುಮಾರ್‌ರವರೆ ಅವರು ನನ್ನ ಹತ್ತಿರ ಬಂದಿದ್ದರು ಒಂದು ಪ್ರಶ್ನೆ ಕೇಳಿದೆ. The Vice-President came and met me. I just asked him one simple question. ನೋಡಯ್ಯಾ ನೀವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೀಯಾ, ನಿನಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ನೀನು ಮಾಡು. ನಿನಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಈ ಕಾರ್ಯಕ್ರಮಕ್ಕೆ

ಹಣವನ್ನು ತೆಗೆದುಕೊಳ್ಳುವುದಕ್ಕೆ permission ಕೊಟ್ಟಿದೆಯಾ ಅಥವಾ ಇಲ್ಲವಾ ಎಂದು ಕೇಳಿದೆ. ಅದಕ್ಕೆ ಅವನು, 'no sir' ಎಂದು ಹೇಳಿದ. Then, should he not be under jail? ಎಲ್ಲಿ ಕೃಷ್ಣನು ಹುಟ್ಟಿದನೋ, ಅಲ್ಲಿಗೆ ಕಳುಹಿಸಬೇಕೋ ಇಲ್ಲವೋ, ಏಕೆಂದರೆ, Alexander, the great ಭಾರತವನ್ನು ವಶಪಡಿಸಿಕೊಳ್ಳಬೇಕೆಂದು ಹೊರಟನಂತೆ. ಒಂದು ನಿಮಿಷ ತಾಳಿ, ಮಾನ್ಯ Industries Minister ಸಾಹೇಬರೆ, Alexander, the great ಭಾರತವನ್ನು ವಶಪಡಿಸಿಕೊಳ್ಳಬೇಕೆಂದು ಹೊರಟನಂತೆ, ಅವನು ಹೊರಟಂತಹ ಸಂದರ್ಭದಲ್ಲಿ ತನ್ನ ಗುರು ಅರಿಸ್ಟಾಟಲ್ ಹೋಗಿ ಭೇಟಿ ಮಾಡಿದನಂತೆ, ನಾನು ಭಾರತವನ್ನು ವಶಪಡಿಸಿಕೊಳ್ಳುವುದಕ್ಕೆ ಹೋಗುತ್ತಿದ್ದೇನೆ ಎಂದು ಹೇಳಿದನಂತೆ. ಆಗ ಗುರುವು ಹೇಳಿದನಂತೆ ಬೇಡ, ಬೇಡ, ನೀನು ಸ್ವಲ್ಪ ಯೋಚನೆಯನ್ನು ಮಾಡು, ಭಾರತವನ್ನು ನೀನು ಬೇರೆ ದೇಶವೆಂದು ತಿಳಿದುಕೊಳ್ಳಬೇಡ. ನೀನು ಅಪ್ಪಿತಪ್ಪಿ ಹೋಗಿ ಬರುವುದಾದರೆ ನೀನು ವಾಪಸ್ಸು ಬರುತ್ತೇಯೋ ಇಲ್ಲವೋ ನನಗೆ ಗೊತ್ತಿಲ್ಲ. ನೀವು ಬರುವುದಾದರೆ 5 ವಸ್ತುಗಳನ್ನು ತೆಗೆಉದಕೊಂಡು ಬಾ ಎಂದು ಹೇಳಿದರಂತೆ. ಅವು ಯಾವುವೆಂದರೆ.

ರಾಮಾಯಣ, ಮಹಾಭಾರತ, ಗಂಗಾ ಜಲ, ಕೃಷ್ಣನ ಕೊಳಲು ಮತ್ತು ಒಬ್ಬ ತತ್ವಜ್ಞಾನಿ.

ಈ ಐದನ್ನು ಕರೆದುಕೊಂಡು ಬಂದರೆ ನೀನು ಭಾರತವನ್ನೇ ಕರೆದುಕೊಂಡು ಬಂದಂತೆ. ಅಂದರೆ ಅವತ್ತಿನ ಕಾಲದಲ್ಲಿ ಬಸವಣ್ಣನವರು ಇರಬಹುದು, ಇವತ್ತಿನ ಕಾಲದಲ್ಲಿ ನಮ್ಮ ಶಿವಕುಮಾರ ಸ್ವಾಮೀಜಿ ಇರಬಹುದು, ಶ್ರೀ ಬಾಲ ಗಂಗಾಧರ ಸ್ವಾಮೀಜಿ ಇರಬಹುದು, ಶ್ರೀ ಕೃಷ್ಣಮಠದ ಸ್ವಾಮೀಜಿ ಇರಬಹುದು. ಇಂತಹ ಒಬ್ಬ ತತ್ವಜ್ಞಾನಿಯನ್ನು ಕರೆದುಕೊಂಡು ಬಂದರೆ ಇದೆಲ್ಲವೂ ಮಹಾಭಾರತದ ಒಂದು ಗ್ರಂಥ, ಗಂಗಾ ಜಲ, ಶ್ರೀ ಕೃಷ್ಣನ ಕೊಳಲು, ಇವೆಲ್ಲವನ್ನು ತೆಗೆದುಕೊಂಡು ಬಂದರೆ ಭಾರತವನ್ನು ತೆಗೆದುಕೊಂಡು ಬಂದಂತೆ. ಅಷ್ಟು ಒಂದು ಶಕ್ತಿ ಈ ದೇಶದ ಸಂಸ್ಕೃತಿಯಲ್ಲಿದೆ. ಇವತ್ತು ಅಂತಹ ಸಂಸ್ಕೃತಿ ಇರುವಂತಹ ಪರಿಸ್ಥಿತಿ ಈ ರಾಜ್ಯದಲ್ಲಿ ಏನಾಗುತ್ತಿದೆ, ಇದನ್ನು ನಾವು ಕಾಪಾಡಬೇಕೋ ಅಥವಾ ಬಿಡಬೇಕೋ ಈ ಸರ್ಕಾರವು ಇದಕ್ಕೆ interfere ಆಗಲಿಲ್ಲವೆಂದರೆ ನೀವು ಬೇರೆಯವರಿಗೆಲ್ಲರಿಗೂ collection ಮಾಡಿಕೊಳ್ಳುವುದಕ್ಕೆ permissionನ್ನು ಕೊಟ್ಟುಬಿಡಿ. ಯಾರ್‍ಯಾರು ಇಂತಹ ಸಂಸ್ಥೆಗಳನ್ನು ಮಾಡುತ್ತಿದ್ದಾರೆ ಬೇಕಾದಷ್ಟು Government Programmeಗಳು ಇವೆ, ನೀವು

collect ಮಾಡಿಕೊಳ್ಳುವುದಕ್ಕೆ permission ಕೊಡಿ. All charitable institutions business ಮಾಡಲಿ ಅವರಿಗೆ ನೀವು ಅವಕಾಶವನ್ನು ಕೊಡಿ. ಆದ್ದರಿಂದ ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದಿಷ್ಟೇ 10 ಗಂಟೆ ಮುಂಚಿತವಾಗಿ ಊಟವು ತಯಾರಾಗುತ್ತಿದೆ. 10.00 ಗಂಟೆಗೆ ಮುಂಚಿತವಾಗಿಯೇ ಮಕ್ಕಳಿಗೆ ತಂಗಳು ಊಟ ರೆಡಿ ಮಾಡುತ್ತಿದ್ದಾರೆ. ಸಣ್ಣ ಸಣ್ಣ ಟ್ರಸ್ಟ್‌ನವರು ಕೆಲವರು ಇದರ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಅವರ ಹತ್ತಿರ ಬಿಡಿಸಬೇಕೆಂದು ಸ್ವಲ್ಪ ಜನ ರೌಡಿಗಳ ಗುಂಪನ್ನು ಇಟ್ಟುಕೊಂಡಿದ್ದಾರೆ, ಹೋಗಿ ಅವರಿಗೆ ಹೆದರಿಸುವುದು, ಬೆದರಿಸುವುದು, ನಮಗೆ ಈ ಟ್ರಸ್ಟ್‌ನವರು ಬೇಡ, ನಮಗೆ ಅಕ್ಷಯ ಪಾತ್ರೆಯವರೇ ಬೇಕು ಎಂದು ಹೇಳುವುದು, ಯಾರು ಆ ಟ್ರಸ್ಟ್‌ನವರಿಂದ ಬಿಡಿಸಿ ಇಲ್ಲಿಗೆ ಬರೆಸಿ ಕೊಡುತ್ತಾರೆ ಅವರಿಗೆ ಇಷ್ಟು ಕಮೀಷನ್ ಎಂದು ಕೊಡುವುದು, ಅವರು ಇಲ್ಲಿ ಕೇಂದ್ರ ಸರ್ಕಾರದಲ್ಲಿಯೂ ಕೂಡ ಇಷ್ಟು ಹಣ ಬರುತ್ತಿದೆ, ಇಷ್ಟು ಅಕ್ಕಿ ಬರುತ್ತಿದೆ. ನಮ್ಮ ಅನೇಕ ಶಾಲೆಯ ಮುಖ್ಯೋಪಾಧ್ಯಾಯರುಗಳು ಯಾರು ಈ ಕಾರ್ಯಕ್ರಮವನ್ನು ನಡೆಸಿ ಕೊಡುತ್ತಿದ್ದಾರೆ ಅವರು ನಮಗೆ ಅಕ್ಕಿ ಉಳಿಯುತ್ತಿದೆ ಎಂದು ಪತ್ರವನ್ನು ಕೊಟ್ಟಿದ್ದಾರೆ, ಏಕೆಂದರೆ ಒಂದು ಮಗುವಿಗೆ 100 ಗ್ರಾಂ ಅಕ್ಕಿ ಕೊಡುತ್ತಿದ್ದೇವೆ, ಹೈಸ್ಕೂಲ್ ಮಗುವಿಗೆ 150 ಗ್ರಾಂ ಅಕ್ಕಿಯನ್ನು ಕೊಡುತ್ತಿದ್ದೇವೆ. ನಮ್ಮ ಮನೆಯಲ್ಲಿ ನಮ್ಮ ಮಕ್ಕಳು ಎಷ್ಟು ಊಟ ಮಾಡುತ್ತಾರೆ, ಏನೋ ಈಗ gas, transportation charge ಕೊಡುತ್ತಿದ್ದೇವೆ, ಹೆಣ್ಣು ಮಕ್ಕಳಿಗೆ 400–600 ರೂ.ಗಳಷ್ಟು ಹಣ ಕೊಡುತ್ತಿದ್ದೇವೆ. Vessels purchase ಮಾಡುವುದಕ್ಕೋಸ್ಕರ ಕೂಡ ಕೇಂದ್ರ ಮತ್ತು ರಾಜ್ಯ ಸರ್ಕಾರ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಸಹಾಯ ಮಾಡುತ್ತಿದೆ, ಇಷ್ಟೆಲ್ಲಾ ಮಾಡಿದ್ದಾರೆ. ಕೇಂದ್ರ ಸರ್ಕಾರದ ಗೈಡ್‌ಲೈನ್ಸ್‌ನಲ್ಲಿ ಎಷ್ಟು ಬೇಕಾದರೂ ಹಣವನ್ನು ಕೊಡುತ್ತೇವೆಂದು ಇದೆ ಎಂದು ಹೇಳಿ ಎಲ್ಲಾ ಯೋಜನೆಗಳಿಗೂ ರಾಜ್ಯ ಸರ್ಕಾರಕ್ಕೆ, ಪಂಚಾಯಿತಿಗಳಿಗೆ ಕೊಡಲಿಕ್ಕೆ ತಯಾರಿದ್ದಾರೆ, ಈ ಅಡಿಗೆ ಮನೆ ಕಟ್ಟಲಿಕ್ಕೆ ಮತ್ತೊಂದಕ್ಕೆ ಎಲ್ಲದಕ್ಕೂ ಕೊಡಲಿಕ್ಕೆ ತಯಾರಿದ್ದಾರೆ. ಒಂದೆರಡು ಮೂರು vehicleಗಳನ್ನು ನಾನು ನೋಡಿದೆ, ಆ vehicle ಮೇಲೆ board ಹಾಕಿಕೊಂಡು ಬಿಟ್ಟಿದ್ದಾರೆ. ಅಲ್ಲೆಲ್ಲೋ ಹೊರಗಡೆ ಹಣ ವಸೂಲಿ ಮಾಡುವಾಗ ಆ ಕ್ಯಾಸೆಟ್, ಸಿ.ಡಿ., ಈ ಅಪ್ಲಿಕೇಷನ್ ಇಲ್ಲೆಲ್ಲಾ ಎಲ್ಲೂ ಇಲ್ಲ, ಏನೆಂದರೆ, "Our proud partners, Government of Karnataka, Government of India."

ಯಾವಾಗ ಇವರ ಜೊತೆ ಸರ್ಕಾರ partner ಆಗಿದ್ದರು? ಏನು partner? Real Estate Partner? ಈ ದೇಶದ ಜನತೆ, ನಮ್ಮ ಮಕ್ಕಳ ಫೋಟೋ ತೋರಿಸಿ, ಭಿಕ್ಷೆ ಬೇಡುತ್ತಿರುವಂತೆ ಈ ಅಳುತ್ತಿರುವ ಮಕ್ಕಳ ಫೋಟೋ ತೋರಿಸಿಬಿಟ್ಟು ಈ ಹಣ ವಸೂಲು ಮಾಡಿ ಎನ್ನುವಂಥ partner ಆಗಿದ್ದರೆ? What is this? ಇದನ್ನು ನಾವು ಹೇಗೆ ತಡೆದುಕೊಳ್ಳಲಿಕ್ಕೆ ಸಾಧ್ಯ? ಏನು pressure ಅಂದರೆ pressure, ಇದನ್ನು ಎತ್ತಬೇಡಿ, ಈ ಸುದ್ದಿಗೆ ಬರಬೇಡಿ, ಜನ ಬೇಸರ ಮಾಡಿಕೊಳ್ಳುತ್ತಾರೆ, voters ಬದಲಾವಣೆಯಾಗಿ ಬಿಡುತ್ತಾರೆ. ಯಾವ voters ಅಧ್ಯಕ್ಷರೆ? ಏನು pressure, ನಾನು Iscon ಬೇಕು ಎಂದು ಹೊರಟು ಹೋಗಿದ್ದನಂತೆ? Iscon ಅನ್ನು ಶಿವಕುಮಾರ್‌ರವರು ವಶಪಡಿಸಿಕೊಳ್ಳಲಿಕ್ಕೆ ಪ್ರಯತ್ನಪಟ್ಟರು, ಆಗಲಿಲ್ಲ, ಅದಕ್ಕೋಸ್ಕರ ಇದನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಹೇಳುತ್ತಿದ್ದೇನೆ ಅಧ್ಯಕ್ಷರೇ, ಪಾಪ ಇನ್ನು ಅವರಿಗೆ ಗೊತ್ತಿಲ್ಲ, ಇಂಥ ರಾಶಿಗೆ ನಾನು ಇಳಿದರೆ ಸುಮ್ಮನೆ ಇಳಿಯುವವನಲ್ಲ. I have a commitment, ಏಕೆಂದರೆ, "ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ." "ಜನನ ಉಚಿತ, ಮರಣ ಖಚಿತ". ಈ ಹುಟ್ಟು ಸಾವಿನ ಮಧ್ಯದಲ್ಲಿ ನಾವು ಏನು ಮಾಡುತ್ತೇವೆಂಬುದು ಬಹಳ ಮುಖ್ಯವಾದಂಥ ವಿಚಾರ. ಈ ವಿಚಾರವನ್ನು ನಾನೇನು ಇವತ್ತು ತೆಗೆದುಕೊಂಡಿದ್ದೇನೆ, ಅದು ಈ ರಾಜ್ಯದ ಮುಂದಿನ ಮಕ್ಕಳಿಗೋಸ್ಕರ. ಈ ಮಕ್ಕಳ ಫೋಟೋವನ್ನು ತೋರಿಸಿಕೊಂಡು ಈ ಮಕ್ಕಳನ್ನು ಹೊರದೇಶದಲ್ಲಿ ಹರಾಜು ಹಾಕಲಿಕ್ಕೆ ಅವಕಾಶ ಕೊಡಬಾರದು. ಇದನ್ನು ಕೇಂದ್ರ ಸರ್ಕಾರದವರಿಗೆ ಈ ರಾಜ್ಯ ಸರ್ಕಾರ ತೆಗೆದುಕೊಂಡು ಹೋಗಬೇಕು. ಸಿ.ಬಿ.ಐ.ಗೂ ಈ ರಾಜ್ಯ ಸರ್ಕಾರ ತೆಗೆದಕೊಂಡು ಹೋಗಬೇಕು. ಏನೆಲ್ಲಾ ಅವಕಾಶಗಳಿವೆ, ಎಲ್ಲಾ ಇಲಾಖೆಯವರೂ ಕೂಡ, ಇವತ್ತೇನಾದರೂ ಒಂದು ಸಣ್ಣ ದೇವಸ್ಥಾನದಲ್ಲಿ ಸ್ವಲ್ಪ ಹಣ collection ಆಗುತ್ತದೆಂದರೆ ಮುಜರಾಯಿ ಇಲಾಖೆ, ಕಂದಾಯ ಇಲಾಖೆ interfere ಆಗುತ್ತದೆ. ಆ ಇಸ್ಕಾನ್ ದೇವಸ್ಥಾನದಲ್ಲಿ ನಡೆಯುತ್ತಿರುವುದು ಹಣದ ವ್ಯವಹಾರವಲ್ಲವೇ? Is it not a commercial trade? ಕೃಷ್ಣನನ್ನು ಮಾರುತ್ತಿದ್ದೇವೆಯೇ ಅಧ್ಯಕ್ಷರೇ? "ಕೃಷ್ಣ ಶಕ್ತಿ, ಕೃಷ್ಣ ಇವತ್ತಿನ ರಾಜಕಾರಣ." "ಯಶಸ್ಸನ್ನು ಕಾಣಬೇಕಾದರೆ" ಧರ್ಮರಾಯನ ಧರ್ಮ ತೋರಬೇಕಂತೆ, ದಾನ ಶೂರ ಕರ್ಣನ ದಾನತ್ವ ಇರಬೇಕಂತೆ, ಅರ್ಜುನನ ಗುರಿ ಇರಬೇಕಂತೆ, ಭೀಮನ ಬಲ ಇರಬೇಕಂತೆ, ಕೃಷ್ಣನ ತಂತ್ರ ಇರಬೇಕಂತೆ ಆಗ ಯಶಸ್ಸನ್ನು ಕಾಣಲಿಕ್ಕೆ ಸಾಧ್ಯ". ಆ ಕೃಷ್ಣ ತಂತ್ರ ಮಾಡಯ್ಯ

ಎಂದು ಹೇಳಿದರೆ, ಈ ಕೃಷ್ಣ, ಅಲ್ಲಿ ಕೃಷ್ಣ ಲೀಲೆ ನಡೆಯುತ್ತಿದೆ. ಬಚ್ಚೇಗೌಡರೇ, ಎಂ.ಎ. ಮೊನ್ನೆ ಮಾಡಿದೆ, ಏನಾಯಿತು, ನಾನು ಡಿಗ್ರಿ ಮಾಡಿರಲಿಲ್ಲ, ನನಗೆ ಮೂರು ಜನ ಮಕ್ಕಳು, ಸ್ಕೂಲ್ ನಡೆಸುತ್ತಿದ್ದೇನೆ. ಎಲ್ಲಿ ನನ್ನ ಮಕ್ಕಳು, "ಅಪ್ಪ ಇಷ್ಟು ಕಷ್ಟ ಪಟ್ಟು ಓದು, ಓದು ಎನ್ನುತ್ತೀಯಾ, ನೀನೇ ಡಿಗ್ರಿ ಮಾಡಲಿಲ್ಲ" ಎಂದು ಎಲ್ಲಿ ಕೇಳಿ ಬಿಡುತ್ತಾರೋ ಎಂದು ಹೆದರಿಕೊಂಡು ಎರಡು ವರ್ಷಗಳ ಹಿಂದೆ ಡಿಗ್ರಿ ಮಾಡಿದೆ. I had not done a Degree, Final Year Degree student ಆಗಿದ್ದಾಗ, ದೇವೇಗೌಡರ ಮೇಲೆ ಅಸೆಂಬ್ಲಿ ಟಿಕೆಟ್ ನನಗೆ ಸಿಕ್ಕಿತ್ತು. ಏನು ಮಾಡುತ್ತೀರಿ, ಡಿಗ್ರಿ ಮಾಡಿರಲಿಲ್ಲ, ಓದಬೇಕೆಂದು ಆಸೆಯಿತ್ತು, ಈ ರಾಜಕಾರಣ ಕಟ್ಟಿಕೊಂಡು ಡಿಗ್ರಿ ಮಾಡಲಿಕ್ಕಾಗಿರಲಿಲ್ಲ. ಕೊನೆಗೆ ಆ ಡಿಗ್ರಿ ಮಾಡಲೇಬೇಕೆಂದು ಓದಿ ಡಿಗ್ರಿ ಮುಗಿಸಿದೆ. ಏನೋ ಅಲ್ಪ ಸ್ವಲ್ಪ ಕಲಿಯಲೇ ಬೇಕೆಂದು ಹೇಳಿ ಕುಳಿತುಕೊಂಡು ಡಿಗ್ರಿ ಮಾಡಿದೆ.

ಶ್ರೀ ಎಂ. ಶ್ರೀನಿವಾಸ: ಈಗ ನೀವು ಇಷ್ಟೆಲ್ಲಾ ಕಲಿತ ಮೇಲೆ ಹದಿನೈದು ವರ್ಷಗಳಿಂದ ಏಕೆ ಸುಮ್ಮನಿದ್ದೀರಿ?

ಶ್ರೀ ಟಿ.ಬಿ. ಜಯಚಂದ್ರ: ಅವರು ಮಾಡಿರುವ studies ನೋಡಿದರೆ ಅವರಿಗೆ ಡಾಕ್ಟರೇಟ್ ಕೊಡಲೇಬೇಕಾಗುತ್ತದೆ, ಈ ದೇಶದ ಡಾಕ್ಟರೇಟ್ ಕೊಡಿ, ಅಮೇರಿಕಾ ದೇಶದ ಡಾಕ್ಟರೇಟ್ ಅಂತೂ ಕೊಡುವುದು ಬೇಡ.

ಶ್ರೀ ಬಿ.ಎನ್. ಬಚ್ಚೇಗೌಡ: ಅಲ್ಲಿ ಒಸಾಮ ಬಿನ್ ಲ್ಯಾಡೆನ್ ಅಲ್ಲಿರುವುದರಿಂದ ಇವರಿಗೆ ಆ ಅಮೇರಿಕ ಡಾಕ್ಟರೇಟ್ ಸಿಗುವುದಿಲ್ಲ. ಇಲ್ಲದಿದ್ದರೆ ಇವರನ್ನು ಅಲ್ಲಿ Economic Adviser ಆಗಿ ತೆಗೆದುಕೊಳ್ಳಬೇಕು.

ಶ್ರೀ ಡಿ.ಕೆ. ಶಿವಕುಮಾರ್: ಅಧ್ಯಕ್ಷರೇ, ಇನ್ನೊಂದು ವಿಚಾರ, ಮೊನ್ನೆ ನೀವೆಲ್ಲಾ ಪತ್ರಿಕೆಗಳನ್ನು ಓದಿರಬಹುದು. ಇದೇನೋ ಇಸ್ಕಾನ್ ಬಗ್ಗೆ ಜಗಳ ನಡೆಯುತ್ತಿದೆ, ಇವರು ನಮ್ಮನ್ನೆಲ್ಲಾ ಹೆದರಿಸುವುದು, ಬ್ಲಾಕ್ ಮೇಲ್ ಮಾಡುವುದು, ಓಟು ಹಾಗೆ ಹೀಗೆ ಎಂದು ಮಾತನಾಡುವುದಿರಲಿ, ಮೊನ್ನೆ ಪತ್ರಿಕೆಯಲ್ಲಿ ಏನೋ ಕೇಸು ನಡೆಯುತ್ತಿದೆ ಎಂದು ಓದಿದೆ, ಅದೇನು ಕೇಸು ಎಂದು ಗೊತ್ತಿಲ್ಲ. ಕೊನೆಗೆ ನೋಡಿ, "ಇಸ್ಕಾನ್ ಬ್ಲಾಕ್‌ಮೇಲ್, ಸಿ.ಬಿ.ಐ. ತನಿಖೆ ಇಂಗಿತ, ತಮಗೆ ಬ್ಲಾಕ್‌ಮೇಲ್ ಪತ್ರ ಬರೆದವರು ಯಾರು? "ನ್ಯಾಯಾಧೀಶರು, High Court Judgeಗೆ blackmail ಮಾಡಲಿಕ್ಕೆ ಹೊರಟಿದ್ದಾರೆ, ಎಂಥಾ ಭೂಪ ಸ್ವಾಮಿ ಇವರು. ಒಂದು ಕಡೆ ದೇವಸ್ಥಾನ ಹೊಡೆದಿದ್ದಾಯಿತು, ಒಂದು ಕಡೆ ಅಕ್ಕಿ ಕದ್ದಿದ್ದಾಯಿತು, ಒಂದು ಕಡೆ ದೇಣಿಗೆ ವಸೂಲು ಮಾಡಿದ್ದಾಯಿತು, ಒಂದು

ಕಡೆ International fraud, ಒಂದು Indian fraud, ಕೃಷ್ಣನನ್ನು ಕದ್ದಿದ್ದಾಯಿತು, ಈಗ ನ್ಯಾಯಾಧೀಶ. ಈ ಪ್ರಜಾಪ್ರಭುತ್ವದಲ್ಲಿ ನಮಗೆಲ್ಲಾ ಮೋಸ ಮಾಡಿದ್ದಾಯಿತು. ಪಾಪ ಕುಮಾರಸ್ವಾಮಿಯವರು ಸಹ ಬಹಳ ದೊಡ್ಡ ಮನಸ್ಸು ಮಾಡಿ ಇವರು ಏನೋ ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ಎಂ.ಎಂ.ಎಲ್. ರವರ ಕಡೆಯಿಂದ 70.00 ಲಕ್ಷ ರೂ.ಗಳನ್ನು ಕೊಡಿಸಿದ್ದಾರೆ. ಮುಖ್ಯಮಂತ್ರಿಗಳಿಗೆಲ್ಲಾ ಮೋಸ ಮಾಡಿದ್ದಾಯಿತು, ರಾಜಕಾರಣಿಗಳಿಗೆಲ್ಲಾ ಮೋಸ ಮಾಡಿದ್ದಾಯಿತು, ಅಧಿಕಾರಿಗಳಿಗೆಲ್ಲಾ ಮೋಸ ಮಾಡಿದ್ದಾಯಿತು, ಕೊನೆಗೆ ನಾಲ್ಕು ಜನ Judges, "Not before me, Not before me", ಎಂದು ಹಾಕಿದ್ದಾರೆ. ಕೊನೆಗೆ ಈ Judge ಬಹುಶಃ ಏನೋ questions ಕೇಳಿರಬಹುದು, ಕೊನೆಗೆ ಆ ಜಡ್ಜ್ ಮೇಲೆ ಒಂದು ಲಂಚ ಕೊಟ್ಟೆ ಎಂದು ಹೇಳಿಬಿಟ್ಟು ಯಾರೋ ವಿರೋಧ ಪಕ್ಷದವರು ಕಟ್ಟಿದ ಹಾಗೆ, ಒಂದು ಪ್ಯಾಕೆಟ್ ಅನ್ನೇ ಕಳುಹಿಸಿ ಬಿಟ್ಟಿದ್ದಾರಂತೆ. ಈ ವಿಷಯ ಪೇಪರ್‌ನಲ್ಲಿ ಬಂದಿರುವುದು, ನನಗೆ ಗೊತ್ತಿಲ್ಲ. ಪ್ರೆಸ್‌ನಲ್ಲಿರುವುದು, High Court Judge ನೋಡಿ ಇಲ್ಲಿದೆ ಅಧ್ಯಕ್ಷರೇ, "Judge-I was asked not to hear the case". ಈ Judge ಹೇಳಿರುವುದೇ ಈ ಪೇಪರ್‌ನಲ್ಲಿರುವುದು, "Judge receives mystery packet". "ನ್ಯಾಯಾಧೀಶರಿಗೆ ಅನಾಮಧೇಯ ಕೊರಿಯರ್, ಇಸ್ಕಾನ್ ದೇವಾಲಯಕ್ಕೆ ಹೊಸ ತಿರುವು, High Court Judge furious after getting a letter." "ಇಸ್ಕಾನ್‌ನಿಂದ ನ್ಯಾಯಮೂರ್ತಿಗೆ ಬ್ಲಾಕ್‌ಮೇಲ್ ಪತ್ರ". ಇವರನ್ನು ಸುಮ್ಮನೆ ಬಿಡಬೇಕೆ ಅಧ್ಯಕ್ಷರೇ? ಈ ಕೃಷ್ಣ ಲೀಲಾ ಮಧುಪಂಡಿತ್ ದಾಸ್‌ರವರನ್ನು ಸುಮ್ಮನೆ ಬಿಡಬೇಕೆ ಅಧ್ಯಕ್ಷರೇ? ಕೇಳಿ ನೋಡಿ, ಪಾಪ ಯಾರೂ ಕೂಡ ಆ ಹೆಣ್ಣು ಮಕ್ಕಳು ಸಾಯಂಕಾಲದ ಹೊತ್ತು ಮರ್ಯಾದೆ ಹೆಸರಿನಲ್ಲಿ ಓಡಾಡುವ ಹಾಗಿಲ್ಲ. ಪಾಪ ಒಂದು ಹೆಣ್ಣು ಮಗಳು ಬಂದು ನನ್ನ ಹತ್ತಿರ ಹೇಳಿದಳು ಅಧ್ಯಕ್ಷರೇ, ಯಾರು ಈ ಕೋಟ್ಯಾಂತರ ರೂಪಾಯಿಗಳನ್ನು ಹಣ ಮಾಡಿದರೋ ಅವರು ಕೈ ಹಿಡಿದು ಎಳೆಯುತ್ತಾರೆ, ಅವರ ಕಪಾಳಕ್ಕೆ ಹೊಡೆದು ನಾನು ಬಿಟ್ಟು ಬಂದೆ ಎಂದು ಆಕೆ ಹೇಳುತ್ತಾಳೆ. If you want, I will bring her before you ಅಧ್ಯಕ್ಷರೇ, You form a Committee. ಇಂಥವರಿಗೆ ನಾವು ಸಹಾಯ ಮಾಡಬೇಕೇ? ಕೃಷ್ಣಾ 1600 ಜನರನ್ನು ಕಟ್ಟಿಕೊಂಡಿರಬಹುದು, ಕಟ್ಟಿಕೊಳ್ಳಲಿ, ಯಾರು ಬೇಡ ಎನ್ನುತ್ತಾರೆ. ಯಾರು ಕಲೆಕ್ಷನ್ ಮಾಡುತ್ತಿದ್ದರೋ, ಯಾರು Corporators ಬಳಿ ಹೋಗುತ್ತಿದ್ದರೋ? ಯಾರು ಈ ಫೋಟೋಗಳನ್ನು

ತೋರಿಸಿ beg ಮಾಡುತ್ತಿದ್ದರೊ? ಯಾರನ್ನು ಈ ಸಂಸ್ಥೆಯಲ್ಲಿ ನೌಕರರನ್ನಾಗಿ ಇಟ್ಟುಕೊಂಡಿದ್ದಿರಿ, ಅಂಥವರ ಮೇಲೆ ದೇವಸ್ಥಾನದಲ್ಲಿ ಈ ರೀತಿ ನಡೆದರೆ, ಆ ದೇವಸ್ಥಾನದ ಪಾವಿತ್ರ್ಯತೆ ಏನಾಗಬೇಕು ಅಧ್ಯಕ್ಷರೆ? ಭಕ್ತನಿಗೂ, ಭಗವಂತನಿಗೂ ಇರುವಂಥ ವ್ಯವಹಾರ, ಯಾವಾಗಲಾದರೂ ಭಕ್ತನಿಗೆ, ಭಗವಂತನಿಗೆ ಏನಾದರೂ ವ್ಯವಹಾರ ನಡೆಯಬೇಕಾದರೆ, ಅವನ ಕಷ್ಟ ಸುಖವನ್ನು ವಿಚಾರಿಸಬೇಕಾದರೆ ದೇವಾಲಯದಲ್ಲಿ ಮಾತ್ರ. ಅಂಥ ಜಾಗಗಳಲ್ಲೇ ಇಂಥ ವಿಚಾರಗಳು ನಡೆದರೆ ಇದಕ್ಕೇನು ಅರ್ಥ? ಈ ಮನೆಯನ್ನು ಈ ಪ್ರಜಾಪ್ರಭುತ್ವವನ್ನು ನಾವು ಉಳಿಸಿಕೊಳ್ಳುತ್ತಿದ್ದೇವೆ. ಈ ಪ್ರಜಾಪ್ರಭುತ್ವದಲ್ಲಿ ನಾಲ್ಕು ಪಿಲ್ಲರ್‌ಗಳು, ಒಂದು ಕಾರ್ಯಾಂಗ Officers, ನ್ಯಾಯಾಂಗ ನೀವು, ನಾವು ಶಾಸಕಾಂಗ, ಈ ಪತ್ರಿಕಾರಂಗ. ಮೂರು ದಿವಸಗಳಿಂದ ಈ ಪತ್ರಿಕೆಯವರೆಲ್ಲಾ ಅವರ ಮನೆ ಬಾಗಿಲುಗಳಿಗೆ ಹೋಗಿ ಶಿವಕುಮಾರ್ ಇದಕ್ಕೆ ಅವಕಾಶ ಕೊಡಬೇಡಿ. ಇದನ್ನು ತೆಗೆಯಬೇಡಿ, ಇದನ್ನು ಮಾಡಬೇಡಿ ಎಂದು. ರಾಜಕಾರಣಿಗಳು ಎಂಥೆಂಥವರು ನಮ್ಮ ಅಧ್ಯಕ್ಷರನ್ನು ಸಹ ಭೇಟಿ ಮಾಡಿದ್ದರು. ಕೆಲವರು ಕೇಂದ್ರದಲ್ಲಿದ್ದಾರೆ, ಅವರ ಹೆಸರನ್ನೆಲ್ಲಾ ಹೇಳುವುದಿಲ್ಲ. ಎಷ್ಟು pressure. ನಮ್ಮ ಶಾಸಕರು, ನಮ್ಮ ಸ್ನೇಹಿತರನ್ನು ಭೇಟಿ ಮಾಡಿ ಇದನ್ನು ಮಾಡಬಾರದು, ಏಕೆ? ಬಿಡಿ, ಅವರು ಪಾಪ local M.L.A., we will not disturb his case. ಪಾಪ ಅವರು Local MLA ಬಿಡಿ. We will not disturb his case. ಅವರಿಗೆ 8–10 ವೋಟ್ ಹೆಚ್ಚು ಕಡಿಮೆ ಆಗಿ ಬಿಡಬಹುದು. ಏಕೆಂದರೆ, ನಮ್ಮ ಧ್ರುವನಾರಾಯಣ್‌ರವರು (ಗೊಂದಲ) ಇಲ್ಲ. ಅವರು ಒಂದು ವೋಟ್‌ನಲ್ಲಿ ಗೆದ್ದಿದ್ದಾರೆ. ಕೃಷ್ಣಮೂರ್ತಿಯವರು ಸೋತು ಹೋಗಿದ್ದಾರೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಬಹಳ ಹೆಣ್ಣುಮಕ್ಕಳು ನಮ್ಮ ಕೆಲಸ ಹೋಗುತ್ತದೆ ಎಂದು ಹೋರಾಟ ನಡೆಸುತ್ತಿದ್ದಾರೆ, ಚಳುವಳಿ ನಡೆಸುತ್ತಿದ್ದಾರೆ. ಎಂತೆಂಥ ಸಾಹಿತಿಗಳು ನೀವು ಬೇಕಾದರೆ ತೆಗೆದು ನೋಡಿ. ಎಲ್ಲಾ ಸಾಹಿತಿಗಳು, ಮಾನ್ಯ ರವಿವರ್ಮ ಕುಮಾರ್‌ರವರು ಇರಬಹುದು, ಮಾನ್ಯ ರಾಮಚಂದ್ರಪ್ಪನವರು ಇರಬಹುದು. ಇವರೆಲ್ಲಾ ಈ ಕಾರ್ಯಕ್ಕೆ ವಿರೋಧ ಮಾಡಿ ಲೇಖನಗಳನ್ನು ಬರೆಯುತ್ತಿದ್ದಾರೆ. ಇವರು ಮಾಡಲಿ ನಾನು ಬೇಡ ಎಂದು ಹೇಳುವುದಿಲ್ಲ but not at out cost, but not at the cost of the state

prestige, but not at the cost of human kind, man kind. ಆ ಮಕ್ಕಳ ಫೋಟೋ ತೋರಿಸುತ್ತಿರುವುದನ್ನು, we should not allow this. I demand the Government, ನಾವು ಈ ಸಂದರ್ಭದಲ್ಲಿ ಎಷ್ಟು ದಿನಗಳೊಳಗೆ ಇವರನ್ನು ಬಂಧನ ಮಾಡುತ್ತೀರೋ ಅಷ್ಟೂ ಈ ರಾಜ್ಯಕ್ಕೆ ಒಳ್ಳೆಯದು. ಎಲ್ಲಾ ಕಡೆ ಹಣ ಮಾಡುವಂಥ ಸಂದರ್ಭದಲ್ಲಿ, ಇಷ್ಟೆಲ್ಲಾ ವ್ಯವಹಾರ ನಡೆಯಬೇಕಾದರೆ ಒಬ್ಬರು ಅಧಿಕಾರಿಯನು ನೇಮಿಸಿ, takeover ಮಾಡಿ, ಒಬ್ಬ IAS Officer ಅನ್ನು ಹಾಕಿ, ಒಬ್ಬ administrator ಹಾಕಿ. ನೀವು ಆಳ ಮತ್ತು ಉದ್ದವನ್ನು ನೋಡಿ. ನಾನು ರಾಜಕಾರಣಿ ನಾನು ತಪ್ಪು ಮಾಡಿದ್ದೇನೆ. ಯಾವುದೋ ವಿಚಾರದ ಬಗ್ಗೆ ನಾನು ಹೇಳುತ್ತಿದ್ದೇನೆ. Come on, when so much things are there, so much money is involved, fraud is taking place, sexual harassment is there, you appoint a officer. Here, prestige of the nation is being involved.

ಶ್ರೀ ಬಿ.ಎನ್. ಬಚ್ಚೇಗೌಡ: Sexual harassment ಆಗುತ್ತಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್: Yes, there are records.

ಶ್ರೀ ಡಿ.ಕೆ. ಶಿವಕುಮಾರ್: ನಿಮ್ಮ ಹೊಸಕೋಟೆಯಲ್ಲಿ ಅಕ್ಕಿ ಕಳ್ಳತನವಾಗುತ್ತಿದೆ. ಇಲ್ಲಿಂದ ಅಕ್ಕಿ ಹೋಗಿ ಪಾಲಿಶ್ ಆಗಿ ಮಾರ್ಕೆಟ್‌ಗೆ ಹೋಗುತ್ತಿತ್ತು. (ಗೊಂದಲ) ಹೊಸಕೋಟೆಯಲ್ಲಿ FIR ಆಗಿದೆ ಸ್ವಾಮಿ. (ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ: ನೀವು ಹಿಡಿದಿದ್ದೀರಾ ಏನು?

ಶ್ರೀ ಡಿ.ಕೆ. ಶಿವಕುಮಾರ್: ಅಲ್ಲಿ ಹಿಡಿದಿದ್ದೆವು. ಸರ್ಕಾರಿ ಅಕ್ಕಿಯ ಮಾರಾಟವನ್ನು ಅಲ್ಲಿ ಹಿಡಿದಿದ್ದೇವೆ. FIR ಇದೆ. I am giving FIR.

ಉಪಾಧ್ಯಕ್ಷರು: ಎಷ್ಟು ಹೊತ್ತಿನವರೆಗೆ ಮಾತನಾಡುವುದಕ್ಕೆ ನಿಮಗೆ ಅವಕಾಶಬೇಕು. ಎಷ್ಟು ಹೊತ್ತುಬೇಕು. ಈಗ adjourn ಮಾಡೋಣ. ಮುಂದೆ ಹಾಕಿ ಮತ್ತೆ ತೆಗೆದುಕೊಳ್ಳೋಣ.

ಶ್ರೀ ಡಿ.ಕೆ. ಶಿವಕುಮಾರ್: ಸುಬ್ರಹ್ಮಣ್ಯ ನಗರ ಪೊಲೀಸ್ ಸ್ಟೇಷನ್‌ನವರು ಇಸ್ಕಾನ್ ಬಾಗಿಲಿನಲ್ಲಿಯೇ ಅವರನ್ನು ಹಿಡಿದರು. 13–3–2008ನೇ ರಾತ್ರಿ 11 ಗಂಟೆಗೆ ಮಾಲು ಸಮೇತ ಹಿಡಿದರು. ಇಸ್ಕಾನ್ ಬಾಗಿಲ ಬಳಿಯೇ ಅವರನ್ನು ರಾತ್ರಿ 11 ಗಂಟೆಗೆ ಹಿಡಿದರು. ಇಲಾಖೆಯವರು ಪೊಲೀಸ್ ಸ್ಟೇಷನ್‌ಗೆ complaint ಕೊಟ್ಟರು. ಪಾಪ ಆ driver ಅನ್ನು, ಒಬ್ಬ ಬೇನಾಮಿಯನ್ನು ಅರೆಸ್ಟ್ ಮಾಡಿದ್ದಾರೆ. ಮಧು ಪಂಡಿತ್ ದಾಸ್ ಮತ್ತು ಛಲಪತಿ ದಾಸ್‌ರವರನ್ನು ಅರೆಸ್ಟ್ ಮಾಡಲಿಲ್ಲ. ಒಬ್ಬ ಬೇನಾಮಿಯನ್ನು ಅರೆಸ್ಟ್ ಮಾಡಿ

ಛಾರ್ಜ್ ಶೀಟ್ ಆಗಿದೆ. I will send all this FIR copy. ಇದು ಯಾರದ್ದು? ಇದು ನಮ್ಮ ಅಕ್ಕಿ, ನಮ್ಮ ಎಣ್ಣೆ, ನಮ್ಮ ದುಡ್ಡು. ಬಿಸಿಯೂಟಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಸ್ಟೇಷನ್‌ನಲ್ಲಿ FIR ಆಗಿದೆ. ನಮ್ಮ ಹಳ್ಳಿಯಲ್ಲಿ ಏನಾದರೂ ಈ ರೀತಿಯಾದರೆ ನಮ್ಮ SDMCಯವರು ಬಿಡುತ್ತಾರೆಯೇ? ನಮ್ಮ ತಾಯಂದಿರು ಬಿಡುತ್ತಾರೆಯೇ? ಅಂಗನವಾಡಿಯವರು ಬಿಡುತ್ತಾರೆಯೇ? ಗಲಾಟೆ ಮಾಡಿ ಬಿಡುತ್ತಾರೆ. ಅಲ್ಲಿ ಬರುವಷ್ಟರಲ್ಲಿ ಎಷ್ಟು ಕಷ್ಟ ಗೊತ್ತೆ? ಅಲ್ಲೆಲ್ಲಾ ಬೇಕಾದಷ್ಟು ಕಮಿಟಿಗಳು ಇವೆ. ಇಲ್ಲಿ ಹೇಳುವವರು ಇಲ್ಲ, ಕೇಳುವವರು ಇಲ್ಲ. ಇದು ನಿಮಗೆ ಹೇಗೆ ಗೊತ್ತಾಯಿತು ಎಂದು ನಮ್ಮ ನಾಯಕರು ಕೇಳಿದರು. ನಾನು ಹೇಳಿದೆ. ಅವರು ನನ್ನನ್ನು cross question ಮಾಡಿದರು. ಏಕೆಂದರೆ, ಇದು This is a very sensitive issue. ಏನು ಶಿವಕುಮಾರ್ ಇದು correct ಇದೆಯಾ ಎಂದು ಕೇಳಿದರು. My Own relative rice mill ಇಟ್ಟುಕೊಂಡಿದ್ದಾರೆ. ಮೊದಲು ಏನೂ ಇರಲಿಲ್ಲ. ನನ್ನ ಹತ್ತಿರ ಸಣ್ಣಪುಟ್ಟ ಖರ್ಚಿಗೆ ದುಡ್ಡು ಕೇಳುತ್ತಿದ್ದ. He has become rich now. ಲಕ್ಷಾಂತರ ರೂಪಾಯಿಗಳನ್ನು ಮಾಡಿದ್ದಾರೆ. ಅದು ಹೇಗೆ ಆಯಿತು? ಏನು ಕಳ್ಳತನ ಮಾಡಿದೆ ಎಂದು ಅವರನ್ನು ಕೇಳಿದರೆ ಹಣ ಬರುತ್ತಿದೆ. ಅಕ್ಕಿ ಬರುತ್ತಿದೆ ಪಾಲಿಶ್ ಮಾಡಿಸುತ್ತಿದ್ದೇನೆ. ನಾವು ಏನೋ rateನಲ್ಲಿ adjust ಮಾಡಿಕೊಳ್ಳುತ್ತಿದ್ದೇವೆ ಎಂದರು. ಒಟ್ಟು 10 ಲಕ್ಷ ಮಕ್ಕಳಿಗೆ, ಈ ರಾಜ್ಯದ 5 ಲಕ್ಷ ಮಕ್ಕಳಿಗೆ ಬರೀ 10%, 20% ಅಕ್ಕಿ ಉಳಿದರೆ ಎಷ್ಟು ಆಗುತ್ತದೆ ಎಂದು ಲೆಕ್ಕ ಹಾಕಿ. ಎಷ್ಟು ಲಾರಿ ಲೋಡ್ ಅದನ್ನು ಯಾರು ಕೊಡಬೇಕು? ಅದು ಏನು ಮೂರು ರೂಪಾಯಿಗಳ rate ನಲ್ಲಿ ಕೊಡುತ್ತಿದ್ದೇವೆ. We are giving subsidized rice at 3 rupees. ಇದನ್ನು ಪ್ರಶ್ನೆ ಮಾಡಬೇಕೋ ಬೇಡವೋ ಹೇಳಿ.

ಉಪಾಧ್ಯಕ್ಷರು: ಎಷ್ಟು ಸಮಯ ಬೇಕು. ಇಲ್ಲದಿದ್ದರೆ adjourn ಮಾಡಿ ಆಮೇಲೆ ತೆಗೆದುಕೊಳ್ಳೋಣ. ಶಿವಕುಮಾರ್‌ರವರೇ ಮುಗಿಸೋಣ.

ಶ್ರೀ ಡಿ.ಕೆ. ಶಿವಕುಮಾರ್: ಇನ್ನೊಂದು ಮಾನ್ಯ ಉಪಾಧ್ಯಕ್ಷರೆ, ಆಮೇಲೆ ಮಾತನಾಡತ್ತೇನೆ. ನಮ್ಮ ನಾಯಕರೆಲ್ಲಾ ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ. ಕಾಗೇರಿ ಸಾಹೇಬರು ಇಲ್ಲಿ ಈಗ ಬಂದಿದ್ದಾರೇಯೇ? ಮಾನ್ಯ ಕಾಗೇರಿ ಸಾಹೇಬರೇ, websiteನಲ್ಲಿ ಒಂದು latest advertisement ಬರುತ್ತಿದೆ. ಅದು ಏನೆಂದರೆ, "you want new ideas for fund raising".

ಅವರು fund raise ಮಾಡುವುದಕ್ಕೆ new ideas ಬೇಕಂತೆ. "Community fund raise is the way of which you can become the most involved contributing towards fund raising programme and raising awareness to our work. We are always open to the new ideas for fund raising, incentives that could help us to raise more funds. If you have suggestions please contact us. Our outline of the ideas and we can discuss the possibilities further with you." ನಿಮ್ಮ ಹತ್ತಿರ ಏನಾದರೂ plan ಇದೆಯೇ? ಮಾನ್ಯ ಬಚ್ಚೇಗೌಡರೇ ನಿಮ್ಮ ಹತ್ತಿರ plan ಏನಾದರೂ ಇದೆಯೇ? ದುಡ್ಡು ಕಲೆಕ್ಟ್ ಮಾಡುವುದಕ್ಕೆ ನಿಮ್ಮ ಹತ್ತಿರ ಏನಾದರೂ ಒಂದು ಸ್ಕೀಂ ಇದೆಯೇ? ಏನೂ ಇಲ್ಲವೆ? ಇವರಿಗೆ fund raising ಬೇಕಂತೆ. ಇದು ಆದ ಮೇಲೆ change ಆಗವುದು ಇದು. ಈಗ Fund raising ಅದೇ websiteನಲ್ಲಿದೆ. ಇದಾದ ಮೇಲೆ "1,200 Rupees feeds one boy, one girl from the financial year 2009. We have been able to bring down the cost by 50% due to the various subsidies provided by the following documents. ಅಂದರೆ ಈ ವರ್ಷದಿಂದ ಆಯಿತು ಎಂದು ಕೊಟ್ಟು, ಇದೆಲ್ಲಾ ಲಿಸ್ಟ್ ಇದೆ.

ಉಪಾಧ್ಯಕ್ಷರು: ಆಮೇಲೆ ಮಾತನಾಡೋಣ. ಎಷ್ಟು ಸಮಯ ಬೇಕು?

ಶ್ರೀ ಡಿ.ಕೆ. ಶಿವಕುಮಾರ್: ಆಗಲಿ ಕೊಡಿ. ಆಮೇಲೆ ಮಾತನಾಡುತ್ತೇನೆ. Ok. No. problem.

(ಗೊಂದಲ)

ಉಪಾಧ್ಯಕ್ಷರು: ಶ್ರೀ ಗೂಳಿ ಹಟ್ಟಿ ಡಿ. ಶೇಖರ್, ಮಾನ್ಯ ಜವಳಿ, ಯುವಜನ ಸೇವೆ ಮತ್ತು ಕ್ರೀಡಾ ಸಚಿವರು ಈ ದಿನ ಮಧ್ಯಾಹ್ನ 1–00 ಗಂಟೆಗೆ ಮಾನ್ಯ ಸಚಿವರು ಹಾಗೂ ಮಾನ್ಯ ಶಾಸಕರುಗಳ ಗೌರವಾರ್ಥ ವಿಧಾನ ಸೌಧದ ಬ್ಯಾಕ್ವೆಂಟ್ ಹಾಲ್‌ನಲ್ಲಿ ಔತಣ ಕೂಡವನ್ನು ಏರ್ಪಡಿಸಿದ್ದಾರೆ. ತಾವೆಲ್ಲರೂ ದಯವಿಟ್ಟು ಭಾಗವಹಿಸಬೇಕೆಂದು ಕೋರಿದೆ. ಈಗ ಸದನವನ್ನು ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 7 ನಿಮಿಷಕ್ಕೆ ಮುಕ್ತಯಗೊಂಡು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

ಸದನವು ಪುನಃ ಮಧ್ಯಾಹ್ನ 3.25 ಗಂಟೆಗೆ ಸಮಾವೇಶಗೊಂಡಿತು

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನನಗೆ ಬಹಳ ನೋವಾಗುತ್ತಿದೆ. ನೀವು ಇರಲಿಲ್ಲ.

ಅಧ್ಯಕ್ಷರು: ನಾನು ಸ್ವಲ್ಪ ಹೊತ್ತು ಇರಲಿಲ್ಲ ಅಷ್ಟೆ.

ಶ್ರೀ ಡಿ.ಕೆ. ಶಿವಕುಮಾರ್: ನೀವು ಇರಬೇಕಾಗಿತ್ತು. ಏಕೆಂದರೆ, ನಿಮ್ಮಂತಹವರ..

ಅಧ್ಯಕ್ಷರು: ನಾನು ಒಳಗಡೆ ಛೇಂಬರ್‌ನಲ್ಲಿದ್ದುಕೊಂಡು ನೀವು ಮಾತನಾಡುತ್ತಿದ್ದುದನ್ನು ನೋಡುತ್ತಿದ್ದೆ.

ಶ್ರೀ ಡಿ.ಕೆ. ಶಿವಕುಮಾರ್: ಈ ದಾನ ಮಾಡುವುದು ಇದೆಯಲ್ಲ. ಕಾಗೇರಿ ಸಾಹೇಬರೆ, ದಾನ ಮಾಡುವುದರಲ್ಲೂ ಅನೇಕ ವಿಚಿತ್ರವಾದ ಅರ್ಥವುಳ್ಳ ದಾನಗಳನ್ನು ಮಾಡುತ್ತರೆ. ನನಗೆ ಒಂದು ಶ್ಲೋಕ ಜ್ಞಾಪಕಕ್ಕೆ ಬರುತ್ತಿದೆ. ತಾವೂ ಇದನ್ನು ಕಲಿತಿರುತ್ತೀರಿ. ಏನೆಂದರೆ, "ಧಾತವ್ಯ ಮಿತಿ ಯದ್ದಾನಂ ದಿಯತೇ ಅನುಪಕಾರಿಣಿ, ದೇಶೆ ಕಾಲೇಚೆ ಪಾತ್ರೇಚ ತದ್ದಾನಂ ಸಾತ್ವಿಕಂ ಶುಭಂ." ಅಂದರೆ, ದಾನ ಮಾಡುವಾಗ ಸಾತ್ವಿಕ ದಾನ ಅಂದರೆ ಪ್ರತಿಫಲದ ಅಪೇಕ್ಷೆ ಇಲ್ಲದೆ, ಯಾವ ತರಹದ ಚಿಂತನೆಯನ್ನೂ ಮಾಡದೇ ವ್ಯಕ್ತಿಗೆ ಕೊಡುವ ದಾನ ಸಾತ್ವಿಕ ದಾನವಾಗುತ್ತದೆ. ರಾಜಸ್ಯ ದಾನವೆಂದರೆ, ಏನಾದರೊಂದು ಪ್ರಯೋಜನ ಪಡೆದುಕೊಳ್ಳುವುದು. ನಾನು ಯಾರಿಗಾದರೊಬ್ಬರಿಗೆ ಸಹಾಯ ಮಾಡಿದರೆ ನನಗೆ ವಾಪಸ್ಸು ಏನು ಬರುತ್ತದೆ ಎಂಬುದು. ಅದರಿಂದ ಸ್ವಲ್ಪ ಫಲವನ್ನಾದರೂ ಅಪೇಕ್ಷಿಸುವುದು. ಇನ್ನು ತಾಮಸ್ಯ ದಾನವೆಂದರೆ, ತೋರಿಕೆಗೆ ಕೊಡುವುದು, ಡಾಂಭೀಕರಣ. ಅಂದರೆ, ನನಗೊಂದು ದೊಡ್ಡ ಹೆಸರು ಬರಲೆಂದು ಕೊಡುವಂತಹ ದಾನ. ಕೆಲವರು ಏನನ್ನೂ ಅಪೇಕ್ಷಿಸದೆ ನಾನು ಹುಟ್ಟಿದ್ದೇನೆ, ನಾನು ಸಾಯುವ ಮುನ್ನ ಏನಾದರೊಂದು ದಾನ ಮಾಡಬೇಕು, ಧರ್ಮ ಮಾಡಬೇಕೆಂದುಕೊಂಡವರು ಇಂತಹ ಒಂದು ವಂಚನೆಗೆ, ಒಂದು emotional blackmailಗೆ ಒಳಗಾಗಿ .. ಈಗ ತಾನೇ ನಾನು ಇಲ್ಲಿಂದ ಊಟಕ್ಕೆ ಹೊರಡಬೇಕಾದರೆ, ನನ್ನ ಸ್ನೇಹಿತರಾದ ಬೊಮ್ಮನಹಳ್ಳಿ ಎಂಎಲ್‌ಎರವರು ಹೇಳುತ್ತಿದ್ದರು. ಅವರು ಸದನದಲ್ಲಿ ಈಗ ಇಲ್ಲವೆಂದು ಕಾಣುತ್ತದೆ. ಅವರು ನನಗೆ ಸಿಕ್ಕಿದ್ದರು. ಅವರು ಹೇಳುತ್ತಿದ್ದರು. ಅವರ ಪತ್ನಿಗೆ ಕಳೆದ ಮೂರು ದಿವಸಗಳಿಂದಲೂ ಬರೀ telephone calls ಅಂತೆ, ಇಷ್ಟು ಕೊಡಿ, ಅಷ್ಟು ಕೊಡಿ ಎಂದು ಹಿಂಸೆ ಮಾಡುತ್ತಿದ್ದರಂತೆ. ಕೊನೆಗೆ ಅವರು 22,000 ರೂ. ಕೊಡಬೇಕೋ ಎಷ್ಟು ಕೊಡಬೇಕೆಂದು ತೀರ್ಮಾನಿಸಿ, ನಾನು ಬೇಡವೆಂದು ಹೇಳುತ್ತಿದ್ದೆ, ನೀವು ನೋಡಿದರೆ ಸದನದಲ್ಲಿ ಇದೇ ವಿಚಾರ ಮಾತನಾಡುತ್ತಿದ್ದೀರಿ

ಎಂದು ನನ್ನ ಸ್ನೇಹಿತ ಶಾಸಕರು ಹೇಳುತ್ತಿದ್ದರು. ಅಂದರೆ, ಇಂತಹ ಕುಟುಂಬಗಳಿಗೆ, ನಮ್ಮಂತಹವರಿಗೆ ಈ ರೀತಿ emotional blackmail ಮಾಡಿ ಹಣ ವಸೂಲು ಮಾಡುವುದರ ಬಗ್ಗೆ ನಾವು ಚಿಂತನೆ ಮಾಡಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ.

ಏಕೆಂದರೆ, ಇವರು ಬಹಳಷ್ಟು ಟ್ರಸ್ಟ್‌ಗಳನ್ನು ರಚಿಸಿಕೊಂಡಿದ್ದಾರೆ. ಇಷ್ಟೊಂದು ಟ್ರಸ್ಟ್‌ಗಳು ಏತಕ್ಕೆ ಬೇಕಾಗಿತ್ತು? ISKCON Charities, ಅವರು ಧಾರ್ಮಿಕ ಕೆಲಸಗಳನ್ನು ಮಾಡುತ್ತಾರೆ. ಒಂದು ಚಾರಿಟಬಲ್ ಇನ್‌ಸ್ಟಿಟ್ಯೂಟ್ ಮಾಡಬೇಕೆಂದು ನಿಂದ ಸಪರೇಟ್ ಆಗಿ ಒಂದು ಅಕ್ಷಯ ಪಾತ್ರೆ ಫೌಂಡೇಶನ್ ಮಾಡಬೇಕು. ಸರಿ, ಅಯಿತು, ರಾಧಾ ಗೋಪಿನಾಥ ಸೇವಾ ಟ್ರಸ್ಟ್, ಗೌರಿ ನಿತ್ಯ ಸೇವಾ ಟ್ರಸ್ಟ್, ವೆಂಕಟೇಶ್ವರ ಸೇವಾ ಟ್ರಸ್ಟ್, ಕೃಷ್ಣ ಬಲರಾಮ ಸೇವಾ ಟ್ರಸ್ಟ್, ನರಸಿಂಹ ಸೇವಾ ಟ್ರಸ್ಟ್, ಗೋಕುಲ ಸೇವಾ ಟ್ರಸ್ಟ್, ಇಸ್ಕಾನ್ ಚಾರಿಟೀಸ್, ಇವೆಲ್ಲವೂ ಏತಕ್ಕೆ? ಹೋಗಲಿ ಎಂದರೆ, ಈ ಟ್ರಸ್ಟ್‌ಗಳಲ್ಲಿ ಬೇರೆಯವರು ಯಾರಾದರೂ ಇದ್ದಾರೆಯೇ? ದೊಡ್ಡವರು ಇದ್ದಾರೆಯೇ? ಯಾರೂ ಇಲ್ಲ. ಅವರು ಹೇಳಿದಂತೆ ಯಾರು ಟ್ರಸ್ಟಿಗಳಾಗಿರುತ್ತಾರೋ, ಬರೀ ಅವರ ಮನೆಯವರೇ. ಚಿಕ್ಕಪ್ಪ, ದೊಡ್ಡಪ್ಪನವರ ಮಕ್ಕಳು, co-brother ಅವರ ಹೆಂಡತಿ, ಅವರ ತಾಯಿ, ಮಕ್ಕಳು, ಇಂತಹವರೇ ಸೇರಿಕೊಂಡಿದ್ದಾರೆ. ಏಕೆಂದರೆ, ಇಷ್ಟೆಲ್ಲಾ ವ್ಯವಹಾರ ಇರುವಾಗ... ಏನಿದು ಅಕ್ಷಯ ಪಾತ್ರೆ? ಅಕ್ಷಯ ಪಾತ್ರೆ ಎಂದರೆ, ಮೊದಲು ನಾನು ನೋಡಿರಲಿಲ್ಲ. ಈಗ ಒಂದು ವರ್ಷದ ಹಿಂದೆ ಮಹಾಭಾರತದ ಕ್ಯಾಸೆಟ್ ಅನ್ನು ತರಿಸಿಕೊಂಡು ಸುಮಾರು ಮೂರು ತಿಂಗಳುಗಳ ಕಾಲ observe ಮಾಡಿದೆ. ಮೊದಲು ಅಕ್ಷಯ ಪಾತ್ರೆ ಬಗ್ಗೆ ನನಗೆ ಅಷ್ಟು ತಿಳಿದಿರಲಿಲ್ಲ. ಅಕ್ಷಯ ಪಾತ್ರೆ, ಎಂದರೆ ಮಹಾಭಾರತದ ಕೃಷ್ಣ ಮಾಡಿದ ಪವಾಡವೇ ಈ ಅಕ್ಷಯ ಪಾತ್ರೆಯ ಪ್ರಸಂಗವಾಗಿದೆ.

ಅಲ್ಲಿಂದ ಕೃಷ್ಣನ ಪವಾಡವನ್ನು ತೋರಿಸಿ ಇದರಲ್ಲಿ ಒಂದು ದೊಡ್ಡ racket ಮಾಡಿದ್ದಾರೆ. ಈ ಪ್ರಾಜೆಕ್ಟ್‌ನ ಫಂಡ್ಸ್ ಎಲ್ಲವನ್ನೂ ಲೆಕ್ಕ ಹಾಕಿದರೆ ಅದು 60 ಕೋಟಿ ರೂ.ಗಳಿಗೆ ಬಂದು ನಿಲ್ಲುತ್ತದೆ! ನಾನು ಇಲ್ಲೊಂದು ಡಾಕ್ಯುಮೆಂಟ್ ನೋಡಿದ್ದೇನೆ. ನಮ್ಮ ಎಸ್‌ಡಿಎಂಸಿ ಶಾಲೆಗಳಿಗೆ ಲೆಟರ್ ಕೊಡುತ್ತಿದ್ದಾರೆ. ನೀವು ದುಡ್ಡು ಕಲೆಕ್ಟ್ ಮಾಡಿದ್ದೀರಿ, ನೀವು ನಮಗೆ ಕೊಡುತ್ತಿದ್ದೀರಿ, ಬಹಳ ಥ್ಯಾಂಕ್ಸ್ ಎಂದು ಮಧು ಪಂಡಿತ್ ದಾಸ್ ಸಾಹೇಬರು ಒಂದು ರಿಸೀಟ್ ಕೊಡುತ್ತಿದ್ದಾರೆ. ಅವರಿಗೆ 100 croresವರೆಗೆ ಪರ್ಮಿಶನ್ ಕೊಟ್ಟಿದ್ದಾರೆ. The cost of the scheme is approved by the National Committee under

section 35(a)(c).. .. ಇಡೀ ಬೆಂಗಳೂರು ನಗರಕ್ಕೆ ಕೇವಲ ಇಬ್ಬರು, ಮೂವರಿಗೆ ಮಾತ್ರ ಈ 35(a)(c) ಇದೆಯೆಂತೆ. ಅಲ್ಲಿಗೆ ಹೋಗುತ್ತೇನೆ. Income TAx Department, ಇತ್ಯಾದಿ ಕಡೆಗಳಿಗೆ ಹೋಗಲೇಬೇಕಾಗುತ್ತದೆ, ಹೋಗೋಣ. ಅವರು ನೂರು ಕೋಟಿ ರೂ.ಗಳವರೆಗೆ exemption ಕೊಟ್ಟಿದ್ದಾರೆ. ನಮ್ಮ ಎಸ್‌ಡಿಎಂಸಿಯವರ ಹತ್ತಿರ ಹಣ ಕಲೆಕ್ಟ್ ಮಾಡುವುದಕ್ಕೆ ಅವಕಾಶವೇ ಇಲ್ಲ. ಅವರಿಗೆ ಒಂದು ರಸೀದಿ, ಸರ್ಟಿಫಿಕೇಟ್ ಕೊಟ್ಟಿದ್ದಾರೆ. Income Tax exemption certificate ಕೂಡ ಕೊಟ್ಟಿದ್ದಾರೆ. ಒಂದು ಸರ್ಟಿಫಿಕೇಟ್ ಅನ್ನು ಸೆಪ್ಟೆಂಬರ್ 11ನೇ ತಾರೀಖಿಗೆ ಕೊಡುತ್ತಾರೆ. ಏನೆಂದು ಕೊಡುತ್ತಾರೆಂದರೆ, ನೀವು ಇಷ್ಟು ದುಡ್ಡು ಕೊಟ್ಟಿದ್ದೀರಿ, ಅವರು 18,000 ರೂ. ಮಾತ್ರ ಕೊಟ್ಟಿರುವುದು. ಈಗಾಗಲೇ ನಮಗೆ 18 ಕೋಟಿ 53 ಲಕ್ಷ 34, 330 ರೂ. ಕಲೆಕ್ಷನ್ ಆಗಿದೆ. ಅದರಲ್ಲಿ ತಮ್ಮಿಂದ 18,800 ರೂ. ಸೇರಿದೆ ಎಂದು ಎಂ. ಶ್ರೀನಿವಾಸ್ ಎನ್ನುವವರಿಗೆ ಕೋರಮಂಗಲದಲ್ಲಿರುವ ಗವರ್ನಮೆಂಟ್ ಪ್ರೈಮರಿ ಸ್ಕೂಲ್ ಪರವಾಗಿ ಒಂದು ಲೆಟರ್ ಕೊಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ಎಸ್‌ಡಿಎಂಸಿಯವರು ದುಡ್ಡು ಕೊಟ್ಟಿದ್ದಾರೆಂದು ಒಂದೆರಡು ಹೆಸರುಗಳನ್ನು ಹೇಳಿದಿರಿ. ಅವರಾಗಿಯೇ ಕೊಟ್ಟಿರಬಹುದು. ಒಂದು ಒಳ್ಳೆಯ ಕೆಲಸ ನಡೆಯುತ್ತಿದ್ದೆಯೆಂದು ಅವರಾಗಿಯೇ ಹಣ ಕೊಟ್ಟರೋ? ಇಲ್ಲವೇ was it against some demand?

Sri D.K. Shivkumar: See, whether there is a demand or not. As per this, they are not following the rules framed by this Government. They are not supposed to collect any money from the SDMC. ಬಿಸಿನೆಸ್‌ಗೆ, ಊಟಕ್ಕೆ, ಮತ್ತೊಂದಕ್ಕೆಲ್ಲಾ ಸರ್ಕಾರ ನಿಮಗೆ ಕೊಡುತ್ತಿದೆ. ನೀವು ಎಸ್‌ಡಿಎಂಸಿಯಿಂದ ಹೇಗೆ ಹಣ ತೆಗೆದುಕೊಳ್ಳುತ್ತೀರಿ? ಎಸ್‌ಡಿಎಂಸಿ ಯಾರದು? ಅದು ತಂದೆ-ತಾಯಿಗಳದ್ದು. SDMC is a parent. ನಾವು ಎಸ್‌ಡಿಎಂಸಿಗಳನ್ನು ಮಾಡಿರುವ ಉದ್ದೇಶ, ಆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಿಗಳು ಮಾಡಿರುವುದು ತಾನೇ ಸ್ವಾಮಿ?

ಒಂದು ಸಣ್ಣ ಉದಾಹರಣೆಯನ್ನು ತೆಗೆದುಕೊಳ್ಳುತ್ತೇನೆ. 11ನೇ ಸೆಪ್ಟೆಂಬರ್‌ನಲ್ಲಿ 18 ಕೋಟಿ ರೂಪಾಯಿ. ಅದೇ ತಿಂಗಳು 25ನೇ ತಾರೀಖಿನಂದು ಇನ್ನೊಂದು ಶಾಲೆಗೆ ರಸೀದಿ 11,500 ರೂಪಾಯಿಗಳೆಂದು ಕೊಡುತ್ತಾರೆ. ಅವರು ಯಾರು ಎಂದರೆ S.D.M.C. President and

Members of Government Primary School, Eejipura ಅವರಿಗೆ ರಶೀದಿ ಕೊಡುತ್ತಾರೆ. 11ನೇ ಸೆಪ್ಟೆಂಬರ್‌ನಲ್ಲಿ 18 ಕೋಟಿ 55 ಲಕ್ಷ ಇದ್ದದ್ದು 25ನೇ ಸೆಪ್ಟೆಂಬರ್‌ನಲ್ಲಿ 20 ಕೋಟಿ 20 ಸಾವಿರದ 565 ರೂಪಾಯಿಗಳಾಗುತ್ತದೆ. ಅಂದರೆ ಕೇವಲ 15 ದಿವಸಗಳಲ್ಲಿ ಸುಮಾರು ಒಂದೂವರೆ ಕೋಟಿ ವಸೂಲಿಯಾಗುತ್ತದೆ. ಇದು ಸುಮ್ಮನೆ ಒಂದು reference. ಅಂದರೆ the speed of collection ಒಂದು ತಿಂಗಳಿನಲ್ಲಿ ಎಷ್ಟಾಗುತ್ತದೆಂರೆ, 15 ದಿವಸಗಳಲ್ಲಿ ಒಂದೂವರೆ ಕೋಟಿ ಬರುತ್ತದೆಂದು ಅವರು Income Taxಗೆ ಇದನ್ನು declare ಮಾಡಿದಂಥ ವಿಚಾರ. ಈ ವಿಚಾರ ಇರತಕ್ಕ ಸಂದರ್ಭದಲ್ಲಿ, ಇಷ್ಟು ಹಣ ಹೋಗುತ್ತಿರ ಬೇಕಾದರೆ ಇದರ ಬಗ್ಗೆ ನಾವು ಗಮನಹರಿಸಬೇಕೋ ಬೇಡವೋ ಎನ್ನುವ ಬಗ್ಗೆ ಈ ಸಂದರ್ಭದಲ್ಲಿ ತಾವು ಚಿಂತನೆ ಮಾಡಬೇಕು. ನಮ್ಮ ಗೈಡ್‌ಲೈನ್ಸ್‌ನಲ್ಲಿ ಜಾತ್ಯಾತೀತ ತತ್ವ ಎಂದು ಇದೆ. ಇಲ್ಲಿ ಜಾತಿ, ಧರ್ಮ ಇರಬಾರದು ಎಂದು ಇದೆ. ಇವರು ಈರುಳ್ಳಿ ಬೆಳ್ಳುಳ್ಳಿ ಹಾಕುವುದಿಲ್ಲವಂತೆ. ಈರುಳ್ಳಿ ಬೆಳ್ಳುಳ್ಳಿಯನ್ನು ಹಾಕಬೇಡಿಯೆಂದು ಹೇಳಿದವರು ಯಾರು? ಸರ್ಕಾರದವರೇನಾದರೂ ಗೈಡ್ ಲೈನ್ಸ್ ಕೊಟ್ಟಿದ್ದಾರೆಯೇ? ನೀವು ಎಲ್ಲಾ ಜಾತಿ, ಧರ್ಮದ ಜನರನ್ನು ತೆಗೆದುಕೊಂಡು ಹೋಗುತ್ತೇವೆಂದು ಹೇಳುವಾಗ, ಇವತ್ತು ಈ ಭೂಮಿಯಲ್ಲಿ ಯಾವುದೇ ಜಾತಿ ಧರ್ಮದವರಾಗಲಿ, ನಾವೆಲ್ಲರೂ ಇರುವಾಗ ಈರುಳ್ಳಿಬೆಳ್ಳುಳ್ಳಿ avoid ಮಾಡುತ್ತೇವೆಂದರೆ ಏನೋ ಒಂದು conceptನ್ನು ಮುಂದಿಟ್ಟುಕೊಂಡು ಪ್ರಚಾರ ಮಾಡಿದಂತೆ ಆಗುವುದಿಲ್ಲವೇ? ನಮ್ಮಲ್ಲಿ ಬೇಕಾದಷ್ಟು ಈರುಳ್ಳಿ ಬೆಳೆಯುತ್ತಾರೆ. ಎಲ್ಲದಕ್ಕೂ ಈರುಳ್ಳಿ ಬೆಳ್ಳುಳ್ಳಿ ಬೇಕೇ ಬೇಕು. ಹೀಗಾದರೆ ನಮ್ಮ ನಾಡಿನಲ್ಲಿ ಈರುಳ್ಳಿ ಬೆಳ್ಳುಳ್ಳಿ ಬೆಳೆಯುವವರ ಪರಿಸ್ಥಿತಿ ಏನಾಗಬೇಕು?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಶಿವಕುಮಾರ್‌ರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಈರುಳ್ಳಿ ತಿಂದರೆ ಏನು ಲಾಭವಿದೆ? ತಿನ್ನದಿದ್ದರೆ ಎನು ನಷ್ಟವಿದೆ? ಎಂಬ ಬಗ್ಗೆ ಹೇಳಿದರೆ ಬಹಳ ಚೆನ್ನಾಗಿರುತ್ತದೆ!

ಶ್ರೀ ಡಿ.ಕೆ. ಶಿವಕುಮಾರ್: ಪುಟಾಣಿ ಮಕ್ಕಳಿಗೆ ತಾರತಮ್ಯ ಮಾಡುವುದಾದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್: ಹಿಂದೆ ಬಾಬುರಾವ್ ಪಟೇಲ್ ಎನ್ನುವ Mother India Paperನ Editor ಇದ್ದರು. ಅವರಿಗೆ ಒಂದು ಪ್ರಶ್ನೆ ಕೇಳಿದರು Apples have become cheaper than onions. ಎಂದು ಒಬ್ಬರು ಹೇಳಿ ನಿಮ್ಮ

ಏನು ಎಂದು ಕೇಳಿದ್ದರು. ಅದು ಅವರು An apple a day, keeps a doctor away and an onion a day keeps everybody away ಅದಕ್ಕೆ ಅವರು ಉತ್ತರ ಕೊಟ್ಟಿದ್ದರು.

ಶ್ರೀ ಟಿ.ಬಿ. ಜಯಚಂದ್ರ: ಈರುಳ್ಳಿ ವಿಚಾರ ಬಂದಾಗ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಈರುಳ್ಳಿ ನಿಷೇಧ ಮಾಡಿದರೆ ಸರ್ಕಾರವೇ ಬದಲಾಗುತ್ತದೆ. ದೇಶದ ರಾಜಕಾರಣವೇ ಬದಲಾಗುತ್ತದೆ. ಆದ್ದರಿಂದ ಇವರು ಈರುಳ್ಳಿ ತಿನ್ನಬಾರದು ಎಂದು ಹೇಳಿದರು ಅದರಿಂದ ಸರ್ಕಾರಗಳು ಏನಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಸುರೇಶ್ ಕುಮಾರ್‌ರವರು ಮಧ್ಯ ಪ್ರವೇಶ ಮಾಡಿ ಬಹಳ ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಲ್ಲು ಪ್ರಯತ್ನ ಮಾಡುತ್ತಿದ್ದಾರೆ. ನಾನು ಸಹಕಾರಿ ಸಚಿವನಾಗಿದ್ದಾಗ ಅವರ ಕ್ಷೇತ್ರವಾದ ರಾಜಾಜಿನಗರದಲ್ಲಿ ಸಹಕಾರಿ ಬ್ಯಾಂಕ್‌ಗೆ ಹೋಗಿದ್ದಾಗ ಅವರು ಒಂದು ಭಾಷಣವನ್ನು ಮಾಡಿದ್ದರು. ನಾನು ಅಂದಿನಿಂದಲೂ ಆ ಭಾಷಣವನ್ನು ನನ್ನ ತಲೆಯಲ್ಲಿ ಇಟ್ಟುಕೊಂಡಿದ್ದೇನೆ. ಅವರು ಅಂದು ಭಾಷಣದಲ್ಲಿ, ಇಲ್ಲಿ 4 ವಿಧವಾದ ಜನರಿದ್ದಾರೆಂದು ಹೇಳಿದ್ದರು. ಮಕ್ಕಳು ಶಾಲೆಗೆ ಹೋಗುವಾಗ ಶಾಲೆಯಲ್ಲಿ ಕಲಿಸುವುದು "ನನ್ನದು ನನಗೆ, ನಿನ್ನದು ನಿನಗೆ". ಅವರು ಸ್ವಲ್ಪ ದೊಡ್ಡವರಾದ ಮೇಲೆ "ನನ್ನದು ನಿನಗೆ ನಿನ್ನದು ನನಗೆ". ಅವರು ಇನ್ನೂ ಸ್ವಲ್ಪ ದೊಡ್ಡವರಾದ ಮೇಲೆ "ನನ್ನದು ನನಗೆ ನಿನ್ನದೂ ನನಗೆ."

ಶ್ರೀ ಎಸ್. ಸುರೇಶ್ ಕುಮಾರ್: ಅದು ಆ ರೀತಿ ಅಲ್ಲ. ನಾನು ಏನು ಹೇಳಿದ್ದೇನೆಂದರೆ ಸಮಾಜದಲ್ಲಿ 4 ರೀತಿಯ ಜನರು ಇದ್ದಾರೆ. ಶಾಲೆಯಲ್ಲಿ ಓದುವಾಗ ನಮಗೆ ಪಾಠ ಹೇಳಿಕೊಡುವುದು, ನಿನ್ನ ಪೆನ್ಸಿಲ್‌ನ್ನು ಜೋಪಾನವಾಗಿ ಇಟ್ಟುಕೊ, ಬೇರೆಯವರ ಪೆನ್ಸಿಲ್‌ನ್ನು ಕದಿಯಬೇಡ, ನನ್ನದು ನನಗೆ ನಿನ್ನದು ನಿನಗೆ, ನಿನ್ನದನ್ನು ಕದಿಯಬಾರದು ಎಂದು ಹೇಳಿಕೊಡುತ್ತಾರೆ. ವಯಸ್ಸಾದ ಮೇಲೆ ಒಂದು ವರ್ಗ ಬರುತ್ತದೆ. ಅದರಿಂದಲೇ ಇವತ್ತಿನ ಸಮಾಜ ನಡೆಯುತ್ತಿರುವುದು. ನನ್ನದು ನಿನಗೆ, ನಿನ್ನದು ನನಗೆ. ನಾನು ಒಬ್ಬ ವೈದ್ಯ ನಿನ್ನ ಖಾಯಿಲೆಯನ್ನು ನಾನು ವಾಸಿ ಮಾಡುತ್ತೇನೆ. ನಾನೊಬ್ಬ ವಕೀಲ, ನಿನ್ನ ಸಮಸ್ಯೆ ತೆಗೆದುಕೊಂಡುಬಾ ನಾನು ಪರಿಹಾರ ಮಾಡಿಕೊಡುತ್ತೇನೆ. ಅಥವಾ ನಾನು ಒಂದು ಅಂಗಡಿಯನ್ನು ಇಟ್ಟಿರುತ್ತೇನೆ, ನೀನು ಹಣ ಕೊಟ್ಟು ಸಾಮಗ್ರಿ ತೆಗೆದುಕೋ. ಸಮಾಜ ನಡೆಯುತ್ತಿರುವುದು ಈ ಸೂತ್ರದಲ್ಲಿ. ಇನ್ನು ಮೂರನೆಯವರ ಸಂಖ್ಯೆ ಬಹಳ ಜಾಸ್ತಿ. ಪ್ರತಿ ದಿವಸ ಪೇಪರ್‌ನಲ್ಲಿ ಅವರದ್ದೇ

ಬರುವುದು. ಮೊದಲು 3ನೇ ಪುಟದಲ್ಲಿ ಬರುತ್ತಿತ್ತು. ಈಗ ಮೊದಲನೆಯ ಪುಟದಲ್ಲೇ ಬರುತ್ತಿದೆ. ಅವರು ನನ್ನದು ನನಗೆ ನಿನ್ನದೂ ನನಗೆ ಎಂದು ಹೇಳುತ್ತಾರೆ. ನಾಲ್ಕನೆಯದ್ದು ಬಹಳ ಅಪರೂಪವಾದ ಅಗತ್ಯವಾದ ಸಮಾಜಕ್ಕೆ ಅಮ್ಲಜನಕದ ರೀತಿ ಇರುವ ಒಂದು ವರ್ಗ ಇದೆ. ಅವರು ಸಮಾಜಕ್ಕೆ ನಿನ್ನದು ನಿನಗೆ, ನನ್ನದು ನಿನಗೆ ಎಂದು ಹೇಳುತ್ತಾರೆ. ನಮ್ಮ ಸಮಯ, ಸಾಮರ್ಥ್ಯ, ಸ್ಥಾನ ಇರಬಹುದು. ಅಧಿಕಾರ ಇರುವಾಗ ಅದನ್ನು ಸಮಾಜಕ್ಕೆ ವಾಪಸ್ ಕೊಡುತ್ತೇನೆ. ನಾನು ಹೇಳಿದ್ದು ಈ ನಾಲ್ಕು ವರ್ಗ.

ಶ್ರೀ ಡಿ.ಕೆ. ಶಿವಕುಮಾರ್: ನೀವು ಆ ರೀತಿ ಹೇಳಿದ್ದೀರಿ. ಈ ಇಸ್ಕಾನ್‌ನವರು ನನ್ನದು ನನಗೆ ನಿನ್ನದೂ ನನಗೆ, ಅವನದ್ದೂ ನನಗೆ, ಎಲ್ಲಾ ನನಗೆ, ಆ ಮಕ್ಕಳದ್ದೂ ನನಗೆ ಎಂದು 3ನೇ ವರ್ಗಕ್ಕೆ ಸೇರಿದ್ದಾರೆ. ಮಾನ್ಯ ಕಾಗೇರಿಯವರು ಒಂದು ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕು. ಲಕ್ಷಾಂತರ ಮಕ್ಕಳಿಗೆ ಒಂದೋ ಎರಡೋ kitchen ಮಾಡಿದ್ದಾರೆ. ನಮ್ಮಲ್ಲಿ ಯಾವುದಾದರು ಒಂದು ಮದುವೆಯಲ್ಲಿ food poison ಆದರೆ 500 ರಿಂದ ಸಾವಿರ ಜನರಿಗೆ ಹೆಚ್ಚು ಕಮ್ಮಿಯಾಗುತ್ತದೆ. ಇಲ್ಲಿ ಇಂಥ large scale ನಲ್ಲಿ ಮಾಡುವಾಗ, ಇಲ್ಲಿ 2–3 ಲಕ್ಷದವರೆಗೆ ದೊಡ್ಡ ಪ್ರಮಾಣದಲ್ಲಿ ಮಾಡುವಾಗಿ ಏನಾದರು ಹೆಚ್ಚು ಕಮ್ಮಿಯಾದರೆ ಯಾರು ಜವಾಬ್ದಾರರು? Who can take up that responsibility? ನಾವು ಈ ಸಂದರ್ಭದಲ್ಲಿ ಇಂಥ ವಿಚಾರವನ್ನು ಚಿಂತನೆ ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ಮಕ್ಕಳಿಗೋಸ್ಕರ ಏನು ಈ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ ಈ ಸರ್ಕಾರದ ಕಾರ್ಯಕ್ರಮಕ್ಕೆ ನಾನೇನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ, ಇದರ ಬಗ್ಗೆ ಕೂಲಂಕುಷವಾಗಿ ಆಲೋಚನೆ ಮಾಡಿ, ಕೇವಲ ಚರ್ಚೆ ಮಾಡುತ್ತೇನೆ, ತನಿಖೆ ಮಾಡುತ್ತೇನೆ ಎನ್ನತಕ್ಕ ಪ್ರಶ್ನೆಯಲ್ಲ. ನೇರವಾಗಿ ಸಂಪೂರ್ಣವಾಗಿ ಇದನ್ನು ಕರ್ನಾಟಕ ಸರ್ಕಾರ ನಡೆಸಬೇಕಾಗಿದೆ. ಬೇಕಾದಷ್ಟು ಇಲಾಖೆಯಲ್ಲಿ ಪ್ರಾರಂಭ ಮಾಡಬೇಕಾಗುತ್ತದೆ. ಮೂಲಭೂತವಾಗಿ ಇದಕ್ಕೆ ನಾವು ನಮ್ಮ ಶಾಸಕರು ಕುಳಿತುಕೊಂಡು, ನಾವು ಶಾಲೆಗಳಿಗೆ, ಸಂಸ್ಥೆಗಳಿಗೆ ಹೋಗಬೇಕಾಗುತ್ತದೆ. ಎಲ್ಲಾ ಇಲಾಖೆಯವರನ್ನು ಒಳಗೊಂಡು ಮಾಡಬೇಕಾಗುತ್ತದೆ. ಸದನದ ಸಮಿತಿಯ ಮೂಲಕ ಇದರ ಆಳಕ್ಕೆ ನಾವು ಹೋಗಬೇಕಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ಸರ್ಕಾರ ಎಲ್ಲೆಲ್ಲಿ ಇದನ್ನು take over ಮಾಡಿಕೊಳ್ಳುವುದಕ್ಕೆ ಅಧಿಕಾರಿಗಳನ್ನು ಹಾಕಿ, ಒಬ್ಬರು administrator ಹಾಕಿ ಈ programmeನ್ನು take over ಮಾಡಬೇಕಾಗುತ್ತದೆ. ಅಮವಾಸ್ಯೆ ಬಂದ ತಕ್ಷಣ ನಮ್ಮ ಅಕ್ಕ ಸಾಯುವುದಿಲ್ಲ.

ಅಕ್ಕ ಸತ್ತರೆ ಈ ಕಾರ್ಯಕ್ರಮ ನಿಲ್ಲುವುದಿಲ್ಲ. ಇಲ್ಲಾ, ಅಣ್ಣ ಸತ್ತ ತಕ್ಷಣ ಪೂರ್ಣಮಿಯೂ ನಿಲ್ಲುವುದಿಲ್ಲ. ಯಾರು ಏನೇ ಆದರು ಏನೂ ಹೆಚ್ಚುಕಮ್ಮಿಯಾಗುವುದಿಲ್ಲ. ಕರ್ನಾಟಕ ಸರ್ಕಾರ ಇದನ್ನು ಮುಂದುವರೆಸಿ ಕೊಂಡು ಹೋಗುವುದಕ್ಕೆ ಬೇಕಾದಷ್ಟು ಅವಕಾಶಗಳಿದೆ. ಇವರೊಬ್ಬರಿಂದಲೇ ಈ ಕಾರ್ಯಕ್ರಮ, ಇವರೊಬ್ಬರಿಂದಲೇ ಕೋಳಿ ಕೂಗಿತು, ಬೆಳಕಾಯಿತು ಎಂಬ ಪ್ರಶ್ನೆ ಇಲ್ಲ. ಇಲ್ಲಿ ದಾರಿದ್ರವೇ ಬೇರೆ, ಅಸೂಹೆಯೇ ಬೇರೆ. ಇವರಲ್ಲಿ ಬೇಕಾದಷ್ಟು ವಿಚಾರಗಳು ಅಡಗಿವೆ. ಆದ್ದರಿಂದ, ಈ ವಿಚಾರದಲ್ಲಿ ನಮ್ಮ ಮಕ್ಕಳಿಗೆ ಏನು ಇವರು ಬಿಸಿ ಊಟ ಕೊಡುತ್ತಿದ್ದೇವೆಂದು ಹೊರಟ್ಟಿದ್ದಾರೊ ಇದು ಬಿಸಿ ಊಟವಲ್ಲ, ಮಕ್ಕಳಿಗೆ ತಂಗಳ ಊಟ ಕೊಟ್ಟು ಇಸ್ಕಾನ್‌ಗೆ ವೃಷ್ಠಾನ್ನ ಊಟ. ಅವರಿಗೆ ಮಾತ್ರ ಇದು ವೃಷ್ಠಾನ್ನ ಊಟ. ನಾವು ನಾಮ ಹಾಕಿಸಿಕೊಳ್ಳಲು ತಿರುಪತಿಗೇನು ಹೋಗಬೇಕಾಗಿಲ್ಲ. ಇಲ್ಲಿಗೇ ಹೋದರೆ ಸಾಕು.

ಆದ್ದರಿಂದ, ನಾವು ನಾಮ ಹಾಕಿಸಿಕೊಳ್ಳುವುದಕ್ಕೆ ತಿರುಪತಿಗೇನೂ ಹೋಗಬೇಕಾಗಿಲ್ಲ. ಇಲ್ಲೇ ಹೋದರೆ ಸಾಕು ಇವತ್ತು. ಕರ್ನಾಟಕ ಸರ್ಕಾರಕ್ಕೇ ತಿರುಪತಿ ನಾಮ! ಕರ್ನಾಟಕ ಸರ್ಕಾರಕ್ಕೂ ನಾಮ, ಜನರಿಗೂ ನಾಮ, ಕೇಂದ್ರ ಸರ್ಕಾರಕ್ಕೂ ನಾಮ, ಜಡ್ಜ್‌ಗಳಿಗೆ blackmail, ರಾಜಕಾರಣಿಗಳಿಗೆ blackmail...

ಶ್ರೀ ಸಿ.ಟಿ. ರವಿ: ಮಾನ್ಯ ಶಿವಕುಮಾರ್‌ರವರೆ, blade ಹಾಕಿಸಿಕೊಳ್ಳುವುದಕ್ಕೆ ಮಾತ್ರ ಬೆನ್ನಿಹಿನ್ ಹತ್ತಿರ ಹೋಗಬೇಕು.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಅವರ balance sheet ಅನ್ನು ಸಂಪೂರ್ಣವಾಗಿ, detail ಆಗಿ ನಿಮಗೆ ನಾನು ಕೊಡುತ್ತೇನೆ. ಆ balance sheet ನಲ್ಲೇ ಬೇಕಾದಷ್ಟು ವಿಚಾರ ಅಡಗಿದೆ. ಎಲ್ಲಾ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ವ್ಯತ್ಯಾಸಗಳು ಕಾಣುತ್ತಿವೆ. ಹೆಣ್ಣು ಮಕ್ಕಳ ಭವಿಷ್ಯ ಸಹ ಇದರಲ್ಲಿ ಅಡಗಿದೆ. ಈ programme ಅನ್ನು ಇವರಿಗೆ ಕೊಟ್ಟಿರುವುದನ್ನು ಸರ್ಕಾರದವರು withdraw ಮಾಡಲೇಬೇಕು, ತನಿಖೆಗೆ ಆದೇಶ ಮಾಡಲೇಬೇಕು, ಕೂಡಲೇ ಅವರನ್ನು ಬಂಧಿಸಬೇಕು. ಎಲ್ಲಾ properties ಅನ್ನು ಸರ್ಕಾರ ವಶಪಡಿಸಿಕೊಳ್ಳಬೇಕು. ಜನರ ಹೆಸರಿನಲ್ಲಿ ಹಣವನ್ನು ವಸೂಲಿ ಮಾಡಿ ಈ ರೀತಿ private fundಗೆ ಹಾಕಿಕೊಂಡು business ಏನು ಮಾಡುತ್ತಿದ್ದಾರೆ, ಈ ಎಲ್ಲಾ properties ಅನ್ನು Government ವಶಕ್ಕೆ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಬೇಕು. Income taxನವರಿಗೂ ಸಹ ಇದನ್ನು ಬರೆಯಬೇಕು. ಸಂಪೂರ್ಣವಾದಂತಹ ತನಿಖೆಯನ್ನು ಈ ಬಗ್ಗೆ ಮಾಡಬೇಕು. ಒಂದು ಕಡೆ ಕಮಿಟಿಗೆ ಹಾಕಿ. ಏಕೆಂದರೆ, ಈ ದೇಶದ ಸ್ವಾಭಿಮಾನದ

ಪ್ರಶ್ನೆಯಾಗಿದೆ. ಈ ದೇಶದ ನಮ್ಮ ಮಕ್ಕಳ ಗೌರವದ ವಿಚಾರವಿದು. ಇಂತಹ ಶಕ್ತಿಶಾಲಿಯಾದ ರಾಷ್ಟ್ರಕ್ಕೆ ಅವಮಾನವಾಗುತ್ತಿದೆ. ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ತನಿಖೆಗೊಳಪಡಿಸಬೇಕು. ನಾನು ಆಗಲೇ ಹೇಳಿದಂತೆ, ತಾವು ಕೃಷ್ಣನಾಗಬೇಕು, ಭಗವಂತನಾಗಬೇಕು. ಇವತ್ತು ತಾವೆಲ್ಲಾ ಸೇರಿ ದೊಡ್ಡ ಮನಸ್ಸು ಮಾಡಿ, ಹೃದಯ ಶ್ರೀಮಂತಿಕೆಯನ್ನು ತೋರಿಸಬೇಕು. ಸ್ವಾಮಿ ವಿವೇಕಾನಂದರವರು 'Be bold hearted when you are defeated. Be learge hearted when you are victorious' ಎಂಬ ಮಾತನ್ನು ಹೇಳುತ್ತಾರೆ. ಇದು ಇಲ್ಲಿ ನಾವು ಏನೋ ಒಂದು ಹೇಳಿ ಜಗಳ ಮಾಡಿಕೊಳ್ಳುವುದಲ್ಲ. ಇದು ನಮ್ಮ ನಮ್ಮ ವೈಯಕ್ತಿಕವಾದ ವಿಚಾರವಲ್ಲ. ನಿಮ್ಮ ಮೇಲೆ ನಾನು ಆಪಾದನೆ ಮಾಡುತ್ತಿಲ್ಲ. ನಾವೂ ಸೇರಿ ತಪ್ಪು ಮಾಡಿದ್ದೇವೆ. We are also responsible for this. ಇದನ್ನು ಗೊತ್ತಿಲ್ಲದೇ ಮಾಡಿದ್ದೇವೆ. ಆದರೆ ತಪ್ಪು ಮಾಡಿದ್ದನ್ನು amendment ಮಾಡಿಕೊಳ್ಳಲಿಕ್ಕೆ ಇವತ್ತು ಅವಕಾಶವಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳೆಲ್ಲಕ್ಕೂ ಇದನ್ನು ತಿಳಿಸಬೇಕು. ಮುಂದಕ್ಕೆ ಈ ರೀತಿ ಆಗಬಾರದು. ನಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಿಂದ, ಈ ದೇಶದ ಗೌರವದ ದೃಷ್ಟಿ ಇರುವುದರಿಂದ, ದಯವಿಟ್ಟು ಈ ಕಾರ್ಯಕ್ರಮವನ್ನು ಇವರಿಗೆ ಕೊಡುವುದನ್ನು ನಿಲ್ಲಿಸಿ, withdraw ಮಾಡಿಸಿ. ಇದನ್ನು ಮಾಡಿಸುವ ಜನರಿದ್ದಾರೆ, ಅವರಿಗೆ ಇದನ್ನು ವಹಿಸುವಂತಹ ಕೆಲಸ ಮಾಡಿ. ನಾನು ಏನೇನು ಹೇಳಿದ್ದೇನೋ, ಈ ಎಲ್ಲಾ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ಹೌಸ್ ಕಮಿಟಿಯೊಂದನ್ನು ಮಾಡಿ, ಸಮಗ್ರವಾದಂತಹ ತನಿಖೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಅಧ್ಯಕ್ಷರನ್ನು ಕೇಳುತ್ತೇನೆ. ಕೊನೆಯದಾಗಿ, ಅಂಬಿಗರ ಚೌಡಯ್ಯನವರ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ.

ಬಡತನಕ್ಕೆ ಉಣ್ಣುವ ಚಿಂತೆ
ಉಣಲಾದೊಡೆ ಉಡುವ ಚಿಂತೆ
ಉಡಲಾದೊಡೆ ಇಡುವ ಚಿಂತೆ
ಇಡಲಾದೊಡೆ ಹೆಂಡರ ಚಿಂತೆ
ಹೆಂಡರಾದರೆ ಮಕ್ಕಳ ಚಿಂತೆ
ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ
ಕೇಡಾದರೆ ಮರಣದ ಚಿಂತೆ

ಈ ರೀತಿ ಎಲ್ಲೋ ಏನೋ ಒಂದು ಕೊನೆಯಂತೂ ಆಗುತ್ತದೆ. ಇದು ಕೊನೆಯಾಗಬೇಕು. ಆದ್ದರಿಂದ ಈ ಮನೆ ಮುಖಾಂತರ, ತಮ್ಮ ಮುಖಾಂತರ, ಈ ಒಂದು ದೊಡ್ಡ ಲೂಟಿಗೆ, ಈ ದೇಶದ ಲೂಟಿಗೆ, ನಮ್ಮ ಲೂಟಿಯ ಸಂಸ್ಕೃತಿಗೆ ಕೊನೆಯಾಗಬೇಕು. ಅದು ತಮ್ಮ ಮುಖಾಂತರ ಆಗಲಿ ಎಂದು ಹೇಳುತ್ತಾ, ಈ ಸಂದರ್ಭದಲ್ಲಿ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದಿಸುತ್ತೇನೆ. ಈ ಒಂದು ದೊಡ್ಡ ಜವಾಬ್ದಾರಿಯನ್ನು, ಸಮಾಜದ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳುತ್ತದೆಂದು ಭಾವಿಸುತ್ತೇನೆ. ರಾಜ್ಯದ ಮುಖ್ಯಮಂತ್ರಿ ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಅವರು ಕೃಷ್ಣರಾಗಬೇಕು. ಕೃಷ್ಣ ಹೇಗೆ ಕಷ್ಟ ಕಾಲದಲ್ಲಿ ನಾನು ಬರುತ್ತೇನೆ ಎನ್ನುತ್ತಾನೋ, ಹಾಗೆ ನೀವು ಬರಬೇಕು. ಈ ದೇಶ ಆಳುತ್ತಿರುವಾಗ, 'ಯದಾ ಯದಾ ಹಿ ಧರ್ಮಸ್ಯ, ಗ್ಲಾನಿರ್ಭವತಿ ಭಾರತ' ಎಂದು ನಾನೇನು ಪ್ರಾರಂಭದಲ್ಲೇ ಹೇಳಿದೆ, ಆ ಶ್ಲೋಕಕ್ಕೆ, ಅರ್ಥಕ್ಕೆ ಸರಿಯಾದ ರೀತಿಯಲ್ಲಿ ಅವರು ಮತ್ತೆ ಜನ್ಮ ತಾಳಿ ಬರಬೇಕೆಂದು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಮನವಿ ಮಾಡಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಈಗ ಉತ್ತರ ಕೊಡುತ್ತೀರಾ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನೂ ಇದರ ಬಗ್ಗೆ ಮಾತನಾಡುತ್ತೇನೆ.

ಅಧ್ಯಕ್ಷರು: ನೀವೂ ಮಾತನಾಡುತ್ತೀರಾ? ಏಕೆಂದರೆ, ಮಾನ್ಯ ಶಿವಕುಮಾರ್‌ರವರು ಈಗಾಗಲೇ ಈ ಬಗ್ಗೆ ಡೀಟೈಲ್ಲಾಗಿ ಮಾತನಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ನೀವು ಹೇಗೆ advice ಮಾಡುತ್ತೀರೋ ಹಾಗೆ ಮಾಡುತ್ತೇನೆ. ನೀವು ಬೇಡ ಎಂದರೆ ಮಾತನಾಡುವುದಿಲ್ಲ.

ಅಧ್ಯಕ್ಷರು: ಆಯಿತು, ತಾವೂ ಮಾತನಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಶಿವಕುಮಾರ್‌ರವರು ಬಹಳ ದೀರ್ಘವಾಗಿ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಅವರು ಅಧ್ಯಯನ ಮಾಡಿಕೊಂಡು ಬಂದು ಮಾತನಾಡಿದ್ದಾರೆ.

ಅಧ್ಯಕ್ಷರು: ಸಂಸ್ಕೃತ ಸಹ ಹೆಚ್ಚು ಅಭ್ಯಾಸ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಸಾಕಷ್ಟು ಸಾಕ್ಷಾಧಾರಗಳನ್ನೂ ಸಹ ಅವರು ಕಲೆಕ್ಟ್ ಮಾಡಿದ್ದಾರೆ. ಅವರು ಎಂ.ಎ.ಗೆ definite ಆಗಿ ಅಷ್ಟೊಂದು ಓದಿಲ್ಲ. ಓದಿದ್ದರೆ, ಮೊದಲೇ ಡಿಗ್ರಿ ಪಾಸ್ ಆಗಿರುತ್ತಿತ್ತು. ಅವರು ಚೆನ್ನಾಗಿ study

ಮಾಡಿಕೊಂಡು ಬಂದು ಬಹಳ ದೀರ್ಘವಾಗಿ, ಸರ್ಕಾರಕ್ಕೆ ಮನದಟ್ಟಾಗುವ ರೀತಿಯಲ್ಲಿ ಮಾತನಡಿದ್ದಾರೆ. ಸರ್ಕಾರ ಕೂಡ ತನಿಖೆಗೆ ಒಪ್ಪಿಕೊಂಡಿದೆ ಎಂದು ಕಾಣುತ್ತದೆ. you are also convinced. Government is also convinced on this. So ಇಲ್ಲಿ convince ಮಾಡಬೇಕಾಗಿರುವುದು ಏನೂ ಉಳಿದುಕೊಂಡಂತೆ ಕಾಣುತ್ತಿಲ್ಲ. ಇಸ್ಕಾನ್‌ನವರಿಗೆ convince ಆಗಬೇಕಾಗಿದೆ. ಅವರು convince ಆಗುವುದಿಲ್ಲ ಬಿಡಿ. ಏಕೆಂದರೆ, ತಪ್ಪು ಮಾಡಿದವರು, ತಪ್ಪನ್ನು ಒಪ್ಪಿಕೊಳ್ಳುವುದು ಬಹಳ ಕಡಿಮೆ. ಏನೋ ಪೊಲೀಸ್ ಸ್ಟೇಷನ್‌ನಲ್ಲಿ ಪೊಲೀಸ್‌ನವರಿಗೆ ಹೆದರಿಕೊಂಡು, confession statement ಮಾಡುತ್ತಾರೆ. ಮತ್ತೆ ಕೋರ್ಟ್‌ಗೆ ಬಂದ ತಕ್ಷಣವೇ, ನಾನು ಆ ರೀತಿ ಹೇಳಲಿಲ್ಲ ಎಂದು ಬಿಡುತ್ತಾರೆ. ಕೋರ್ಟ್ ಕೂಡ ಪೊಲೀಸ್ ಸ್ಟೇಷನ್‌ನಲ್ಲಿ ಆಗಿರುವಂತಹ confession statementಗಳನ್ನು ಆಧಾರವಾಗಿಟ್ಟುಕೊಂಡು ಶಿಕ್ಷೆ ಕೊಡುವುದಕ್ಕೆ ಹೋಗುವುದಿಲ್ಲ. ಮತ್ತೆ ಸಾಕ್ಷ್ಯಾಧಾರಗಳ ಮೇಲೆಯೇ ಶಿಕ್ಷೆ ಕೊಡತಕ್ಕಂಥ ಕೆಲಸ ಮಾಡುತ್ತಾರೆ. ಇಲ್ಲಿ ಬಹಳ ಮುಖ್ಯವಾಗಿ, ನಾನು ತಮ್ಮ ಗಮನಕ್ಕೆ ತರತಕ್ಕಂಥದ್ದು, ಅಕ್ಷರ ದಾಸೋಹ ಕಾರ್ಯಕ್ರಮ ಸರ್ಕಾರದ ಒಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮ. ನಮ್ಮ ದೇಶದ ಶಿಕ್ಷಣ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು, ಶಾಲೆಗೆ ಬರತಕ್ಕಂಥ ಮಕ್ಕಳ ಹಾಜರಾತಿ ಹೆಚ್ಚಾಗಬೇಕು, ಬಡತನದಿಂದ ಬಂದಂತಹ ಮಕ್ಕಳಿಗೂ ಕೂಡ ಸ್ವಲ್ಪ ಪೌಷ್ಟಿಕ ಆಹಾರ ಸಿಗಬೇಕು, ಒಳ್ಳೆಯ ಆಹಾರ ಸಿಗಬೇಕೆಂಬ ಉದ್ದೇಶದಿಂದ ಇದನ್ನು ಜಾರಿಗೆ ತರಲಾಯಿತು. ಶಾಲಾ ಹಾಜರಾತಿ ಹೆಚ್ಚಾಗುವುದಿಲ್ಲದೆ, ಶಾಲೆಯಿಂದ ಹೊರಗಡೆ ಉಳಿದುಕೊಳ್ಳತಕ್ಕವರೂ ಸಹ ಕೂಡ ಶಾಲೆಗೆ ಬರಬೇಕು, ಎಲ್ಲರಿಗೂ ಶಿಕ್ಷಣ ಸಿಗಬೇಕು ಎನ್ನತಕ್ಕಂಥ ಒಂದು ದೊಡ್ಡ ಉದ್ದೇಶ ಈ ಕಾರ್ಯಕ್ರಮದಲ್ಲಿದೆ. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 2002–03ರಲ್ಲಿ ಮೊದಲಿಗೆ ಈಶಾನ್ಯದ ಏಳು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತಂದರು. ಕ್ರಮೇಣ ಅದು ಮೊದಲು 1–5ನೇ ತರಗತಿಯವರೆಗೆ, ಆಮೇಲೆ 7ನೇ ತರಗತಿಯವರೆಗೆ, ತದ ನಂತರ 8ನೇ ತರಗತಿಯಿಂದ 10ನೇ ತರಗತಿಯವರೆಗೂ ಕೂಡ ಈ ಕಾರ್ಯಕ್ರಮವನ್ನು ವಿಸ್ತರಿಸಿದ್ದಾರೆ. ಇವತ್ತು ಸುಮಾರು 70 ಲಕ್ಷ ಮಕ್ಕಳು ಈ ಕಾರ್ಯಕ್ರಮದ ಅಡಿಯಲ್ಲಿ ಈ ಸೌಕರ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಉದ್ಯೋಗ ಸಿಗಬೇಕೆಂಬುದು ಈ ಕಾರ್ಯಕ್ರಮದ ಇನ್ನೊಂದು

ಉದ್ದೇಶವಾಗಿದೆ. ಯಾರು ಹೆಣ್ಣು ಮಕ್ಕಳು ನಿರುದ್ಯೋಗದಲ್ಲಿದ್ದಾರೋ, ಯಾರು ಕೆಳಹಂತದಿಂದ ಬಂದವರು, ಪರಿಶಿಷ್ಟ ಜಾತಿಯಿಂದ ಬಂದವರು, ಪರಿಶಿಷ್ಟ ವರ್ಗದಿಂದ ಬಂದವರು, ಹಿಂದುಳಿದ ಜಾತಿಯಿಂದ ಬಂದವರು, ಅಲ್ಪಸಂಖ್ಯಾತ ವರ್ಗದಿಂದ ಬಂದವರು, ಈ ವರ್ಗದ ಜನರಿಗೂ ಕೂಡ ಉದ್ಯೋಗ ಸಿಗಬೇಕೆಂಬುದೂ ಸಹ ಈ ಕಾರ್ಯಕ್ರಮದ ಆಶಯವಾಗಿದೆ. ಈ ಕಾರ್ಯಕ್ರಮದ ವ್ಯಾಪ್ತಿಯೊಳಗೆ ಒಟ್ಟು 1 ಲಕ್ಷದ 20 ಸಾವಿರ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೊಡತಕ್ಕಂಥ ಸಂಬಳವೂ ಸಹ ಬಹಳ ಕಡಿಮೆ. ಅವರಿಗೆ 400 ರೂ.ಗಳಿಂದ 800 ರೂ.ಗಳವರೆಗೆ ಮಾತ್ರ ಸಂಬಳ ಕೊಡುತ್ತೇನೆ. ಅದನ್ನು ಸಂಬಳ ಎಂದು ಕರೆಯಬಾರದು. ಅದು ಗೌರವಧನ. Highest ಎಂದರೆ 800 ರೂ.ಗಳನ್ನು ಮುಖ್ಯ ಅಡುಗೆಯವರಿಗೆ ಕೊಡಲಾಗುತ್ತದೆ. ಅಡುಗೆ ಸಹಾಯಕರಿಗೆ 400–550 ರೂ.ಗಳವರೆಗೆ ಕೊಡಲಾಗುತ್ತಿದೆ. Maximum ಅವರಿಗೆ 800 ರೂ.ಗಳನ್ನು ಕೊಡುತ್ತಿದ್ದೇವೆ. ಇದರಲ್ಲಿ ಪಾಪ!, ಹೆಣ್ಣು ಮಕ್ಕಳ ಸ್ವಸಹಾಯ ಸಂಘಗಳಿವೆಯಲ್ಲಾ, ಇವರಿಗೂ ಕೂಡ ಒಂದು ಉದ್ಯೋಗ ಸಿಕ್ಕಿ, ಅವರೂ ಕೂಡ ಎರಡು ಹೊತ್ತು ಊಟ ಮಾಡಲಿ ಎನ್ನುವ ಕಾರಣಕ್ಕೋಸ್ಕರ ಇದನ್ನು ಜಾರಿಗೆ ತರಲಾಯಿತು.

ಇದರ ಜೊತೆಗೆ ಇದರಲ್ಲಿ ಒಂದು ಜಾತ್ಯಾತೀತ ತತ್ವ ಅಡಗಿದೆ. ಅಲ್ಲಿ ದಲಿತರು, ಒಕ್ಕಲಿಗರು, ಕುರುಬರು, ಹಿಂದುಳಿದ ಜಾತಿಯವರು, ಮುಸಲ್ಮಾನರು ಹೀಗೆ ಎಲ್ಲಾ ಜಾತಿಯ ಹೆಣ್ಣು ಮಕ್ಕಳು ಅಡಿಗೆ ಮಾಡುತ್ತಾರೆ. ಹಾಗಾಗಿ ಅಲ್ಲಿ ಬರುವ ಎಲ್ಲಾ ಮಕ್ಕಳಿಗೂ ಕೂಡ ಒಂದು ಜಾತ್ಯಾತೀತ ಮನೋಭಾವನೆ ಬೆಳೆಯಬೇಕು, ಎಲ್ಲರೊಡನೆ ಬೆರೆಯುವುದಾಗಬೇಕು ಎಂದು ಜೊತೆಯಲ್ಲಿ ಊಟ ಮಾಡುವುದು, ಸಹ ಭೋಜನ. ಮಠಗಳಲ್ಲಿ ನೋಡುತ್ತೇವೆ, ಆದರೆ ಸಹಭೋಜನ ಮಾಡುವುದಿಲ್ಲ, ಇವತ್ತು ಕೂಡ ಆ ಪದ್ಧತಿ ಮುಂದುವರೆದು ಕೊಂಡು ಹೋಗುತ್ತಿದೆ. ಆ ಕಾರಣಕ್ಕೆ ಎಲ್ಲಾ ಜನಾಂಗಕ್ಕೆ ಸೇರಿ ಅವರು ತಯಾರು ಮಾಡಿದ ಆಹಾರ, ಅವರು ಬಡಿಸಿದಂಥ ಊಟವನ್ನು ಒಟ್ಟಿಗೆ ತಿನ್ನುವುದರಿಂದ ಆ ಮಕ್ಕಳ ಮನಸ್ಸಿನಲ್ಲಿ ಯಾವುದೇ ಜಾತಿಯ ವಿಷದಿಂದ ದೂರವಾಗಬೇಕು, ಜಾತ್ಯಾತೀತ ಮನೋಭಾವ ಪ್ರತಿಯೊಬ್ಬರಲ್ಲೂ ಬೆಳೆಯಬೇಕೆನ್ನುವುದು ಕೂಡ ಇನ್ನೊಂದು ಮಹತ್ತರವಾದ ಉದ್ದೇಶ ಇದರಲ್ಲಿ ಅಡಗಿದೆ. ಇದನ್ನು ಖಾಸಗಿಯವರು ಎನ್‌ಜಿಒ ಇರಲಿ, ಯಾರಾದರೂ ಇರಲಿ ಅವರಿಗೆ ಇದನ್ನು ಕೊಟ್ಟಿದ್ದೆ ತಪ್ಪು ಎಂದು ನನಗನಿಸುತ್ತದೆ, ಇದನ್ನು ಸರ್ಕಾರವೇ ನಡೆಸಬೇಕಾಗಿತ್ತು. ಈಗ ಶಿವಕುಮಾರ್ ಇಸ್ಕಾನ್ ಅವರು ನಮ್ಮ ರಾಜ್ಯ

ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ 10 ಲಕ್ಷ ಮಕ್ಕಳಿಗೆ ಊಟ ಹಾಕುತ್ತಿದ್ದಾರೆಂದು ಹೇಳಿದರು. ಇನ್ನು ಅವರು 50 ಲಕ್ಷ ಮಕ್ಕಳಿಗೆ ಹಾಕಬೇಕೆನ್ನುವ ಮಹದಾಸೆಯನ್ನು ಇಟ್ಟುಕೊಂಡಿದ್ದಾರೆಂದು ಹೇಳುತ್ತಾರೆ, ಫೈನ್, ದೊಡ್ಡ ಆಸೆಯನ್ನು ಇಟ್ಟುಕೊಂಡಿರಲಿ ನಮ್ಮದೇನು ತಕರಾರು ಇಲ್ಲ. ಆಯಿತಪ್ಪ ನೀವು ಎಲ್ಲಾ ಜನಾಂಗದವರಿಗೆ ಊಟ ಹಾಕುತ್ತಿರಲ್ಲಾ, ಏಕೆ ಊಟಕ್ಕೆ ಈರುಳ್ಳಿ, ಬೆಳ್ಳುಳ್ಳಿಯನ್ನು ಹಾಕುವುದನ್ನು ನಿಲ್ಲಿಸಿ ಬಿಟ್ಟಿದ್ದೀರಿ? ಇವರಿಗೆ ಕೊಟ್ಟಾಗ ಈರುಳ್ಳಿ, ಬೆಳ್ಳುಳ್ಳಿ ಹಾಕಬಾರದೆಂದು ಹೇಳಿ ಕೊಟ್ಟಿದ್ದೀರಾ? ನೀವು ಯಾವ ಉದ್ದೇಶದಿಂದ ಈರುಳ್ಳಿ, ಬೆಳ್ಳುಳ್ಳಿ ಹಾಕುವುದಿಲ್ಲ? I want to know. ಈರುಳ್ಳಿ, ಬೆಳ್ಳುಳ್ಳಿ ಆರೋಗ್ಯಕ್ಕೆ ಹಾನಿಕಾರಕವೇ? ಇಲ್ಲ. ಹಾರ್ಟಿಗೆ ಬೆಳ್ಳುಳ್ಳಿ ಬಹಳ ಒಳ್ಳೆಯದು, ಇದನ್ನು ತಿನ್ನುವುದರಿಂದ cholesterol ಕಡಿಮೆಯಾಗುತ್ತದೆ. ಸುರೇಶ್ ಕುಮಾರ್ ರವರು ಈರುಳ್ಳಿ ತಿಂದರೆ ಕಾಯಿಲೆ ಬರುತ್ತದೆಂದು ಜೋಕ್ ಆಗಿ ಹೇಳಿದರು. ಅವರ್‍ಯಾರೂ ಸರಿಯಾಗಿ ಹೇಳಿಲ್ಲ, ಪಟ್ಟಭದ್ರಹಿತಾಸಕ್ತಿ ಇರುವವರು ಹೇಳಿರುವುದು. ಕೆಲವನ್ನೆಲ್ಲಾ ಸರ್ವಕಾಲಕ್ಕೂ ಅನ್ವಯವಾಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಕೆಲವು ಸಾರಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಹೇಳಿರುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಸಚಿವರು): ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಡಿ, ಅದರ ಸ್ವಾರಸ್ಯವನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ: ನಾನು ಸ್ವಾರಸ್ಯಕರವಾಗಿಯೇ ಹೇಳುತ್ತಿದ್ದೇನೆ, ನಾನೇನು ಗಂಭೀರವಾಗಿ ಹೇಳಿದೆನೇ? ಆದರೆ ವಿಚಾರ ಗಂಭೀರವಷ್ಟೆ. ವಿಷಯ ಇದೆಯಲ್ಲಾ ಇದು ಬಹಳ ಗಂಭೀರವಾದುದು. . ಈರುಳ್ಳಿ, ಬೆಳ್ಳುಳ್ಳಿ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು, ಆಯುರ್ವೇದ ಔಷಧಿಗಳಲ್ಲಿ ಬಹಳಷ್ಟು ಇದನ್ನು ಉಪಯೋಗಿಸುತ್ತಾರೆ.

ಮಾನ್ಯ ಸದಸ್ಯರು: ಸರ್, ಉಳ್ಳಗಡ್ಡಿ ವಿಚಾರವವೆ?

ಶ್ರೀ ಸಿದ್ದರಾಮಯ್ಯ: ನಿಮ್ಮ ಕಡೆ ಉಳ್ಳಗಡ್ಡಿ ತಿನ್ನುವುದಿಲ್ಲವೇ? ಉತ್ತರ ಕರ್ನಾಟಕಕ್ಕೆ ಬಂದಾಗ ಬರೀ ಅವನ್ನೇ ಇಟ್ಟಿರುತ್ತೀರಿ?

ಶ್ರೀ ಗೋವಿಂದ ಕಾರಜೋಳ (ಸಣ್ಣ ನೀರಾವರಿ ಸಚಿವರು): ಅವರು ಉಳ್ಳಗ್ಡಿ ತಿಂದಿದ್ದಕ್ಕೆ ಇಲ್ಲಿ ಬಂದಿದ್ದಾರೆ, ತಿನ್ನದೆ ಇದ್ದಿದ್ದರೆ ಇಲ್ಲಿ ಬರುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ: ನೀವು ಈರುಳ್ಳಿ, ಬೆಳ್ಳುಳ್ಳಿ ತಿಂದು ಬಿಟ್ಟು ತಾನೆ ಇಲ್ಲಿಗೆ ಬಂದಿರುವುದು.

ಶ್ರೀ ಗೋಪಾಲಕೃಷ್ಣ: ಜಾಸ್ತಿ ತಿಂದರೆ ಗಂಭೀರವಾಗುತ್ತದೆ.

ಶ್ರೀ ಸಿದ್ದರಾಮಯ್ಯ: ಯಾವುದನ್ನು ಜಾಸ್ತಿ ತಿಂದರೂ ಗಂಭೀರವಾಗುತ್ತದೆ, ಪಾಪ ಅನುಭವವಾಗಿರಬೇಕೆಂದು ಕಾಣುತ್ತದೆ, ಜಾಸ್ತಿ ಏನು ತಿಂದರೂ ಆಗುತ್ತದೆ. ಬರೀ ಈರುಳ್ಳಿ, ಬೆಳ್ಳುಳ್ಳಿ ಅಲ್ಲ, ಯಾವುದನ್ನು ಜಾಸ್ತಿ ತಿಂದರೂ ಗಂಭೀರವಾಗುತ್ತದೆ. ಅಷ್ಟೆ ಅಲ್ಲ, ಯದ್ವಾತದ್ವಾ ದುಡ್ಡು ಹೊಡೆದು ಬಿಟ್ಟರೂ ತಾಪತ್ರೆಯಾಗುತ್ತದೆ. ಬರೀ ಈರುಳ್ಳಿ, ಬೆಳ್ಳುಳ್ಳಿ ಏಕೆ, ಅಗತ್ಯಕ್ಕೆ ಬೇಕಾದಷ್ಟು ಸಂಪಾದನೆ ಮಾಡಿ ಇಟ್ಟುಕೊಂಡರೆ ಪರವಾಗಿಲ್ಲ. ನನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೆ, ಮರಿಮಕ್ಕಳಿಗೆ, ಆ ಮಕ್ಕಳಿಗೆ ಆಗಬೇಕೆಂದೆಲ್ಲಾ ಇಟ್ಟುಕೊಂಡರೆ, ಅದು ಕೈಗು, ಬಾಯಿಗು ಸಿಗುವುದಿಲ್ಲ, ಯಾರೊ ಹೊಡೆದುಕೊಂಡು ಹೋಗುತ್ತಾರೆ, ಅದು ಯಾರ ಕೈಗೊ ಹೋಗಿ ಬಿಡುತ್ತದೆ. ಆ ಕಾರಣದಿಂದ ಯಾವುದು ಅತಿಯಾದರೂ ಕೂಡ, ಅದಕ್ಕೆ ಆಸೆ, ದುರಾಸೆ ಎಂಬ ಪದಗಳಿರುವುದು. ಆಸೆ ಇರುವಷ್ಟೆ ತಿನ್ನಬೇಕು, ದುರಾಸೆಯಿಂದ ಬೇಕಾದಷ್ಟು ತಿಂದು ಬಿಟ್ಟರೆ ಹೊಟ್ಟೆ ಕೆಟ್ಟು ಹೋಗುತ್ತದೆ, ರೋಗಗಳು ಬರುತ್ತವೆ. ಇಲ್ಲಿ ನಾವು ಇಸ್ಕಾನ್‌ರವರಿಗೆ ಕೊಟ್ಟಿರುವ ಉದ್ದೇಶದಂತೆ ಮಾಡಿಕೊಂಡಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ, ಅಥವಾ ಇನ್ಯಾವುದೇ ಎನ್‌ಜಿಒಗಳಿಗೆ ಕೊಟ್ಟಿರುವ ಸಂಸ್ಥೆಗಳು ಯಾವುದೇ ಇರಲಿ, ಅನೇಕ ಎನ್‌ಜಿಒಗಳು ಇಲ್ಲಿ ಕೆಲಸ ಮಾಡುತ್ತಿವೆ, Not only ISKCON ನಮ್ಮ ಅನಂತರಕುಮಾರ್‌ರವರ ಅದಮ್ಯಚೇತನ (ಟ್ರಸ್ಟ್) ಇವೆರಡು ಬಹಳ ಪ್ರಮುಖವಾದವು, ಇನ್ನು ಸಣ್ಣ ಪುಟ್ಟ ಎನ್‌ಜಿಒಗಳೆಲ್ಲಾ ಮಾಡುತ್ತಿದ್ದಾವೆ, ಮಾಡಲಿ ನಮ್ಮದೇನು ತಕರಾರು ಇಲ್ಲ. ಆದರೆ ಇವರಿಗೆ ಕೊಟ್ಟಿರುವ ಈ ಒಳ್ಳೆಯ ಕೆಲಸವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರಲ್ಲ ಅದು ಅಕ್ಷಮ್ಯ, ದೊಡ್ಡ ಅಪರಾಧ. ಇವರು ವಿದೇಶಗಳಿಗೆ ಹೋಗಿ ನಮ್ಮ ಬಡ ಮಕ್ಕಳು ಆಳುವುದು, ಬಟ್ಟೆ ಇಲ್ಲದಿರುವ, ಚಡ್ಡಿ ಇಲ್ಲದಿರುವ, ಬರೀ ಮೈನಲ್ಲಿರುವ ಫೋಟೋಗಳನ್ನು ಇಟ್ಟು ಬಿಟ್ಟು ತೋರಿಸಿ, ನಮ್ಮ ಭಾರತದಲ್ಲಿ ನಮ್ಮ ಮಕ್ಕಳಿಗೆಲ್ಲಾ ಊಟಕ್ಕೆ ಇಲ್ಲ, ನಮ್ಮ ದೇಶ ಈ ಪರಿಸ್ಥಿತಿಯಲ್ಲಿ ನಮ್ಮ ಮಕ್ಕಳೆಲ್ಲಾ ಇದ್ದಾವೆ, ನಮಗೆ ಸಹಾಯ ಮಾಡಿ ಎಂದು ಹೊರದೇಶಗಳಲ್ಲಿ ವಂತಿಕೆ ವಸೂಲ್ಮಾಡಲು ಹೊರಟಿದ್ದಾರಲ್ಲಾ ಇದನ್ನು ಯಾರೂ ಸಮರ್ಥನೆ ಮಾಡಿಕೊಳ್ಳಲು ಸಾಧ್ಯವಿಲ್ಲ, ಇದನ್ನು defend ಮಾಡಲು ಸಾಧ್ಯವೇ ಇಲ್ಲ. ಭಾರತ ದೇಶದಲ್ಲೂ ಕೂಡ ಮಾಡಿದ್ದಾರೆ, ಏನೆಂದು ಮಾಡಿದ್ದಾರೆಂದರೆ, ನಮಗೆ ಒಂದು ಮಗುವಿಗೆ ಒಂದು ವರ್ಷಕ್ಕೆ ರೂ. 1500 ತಗಲುತ್ತದೆ, ರೂ. 1200 ವಂತಿಕೆ ಕೊಡಿ, ಎರಡು ಮಕ್ಕಳಿಗೆ ಇಷ್ಟು ತಗಲುತ್ತದೆ, 5 ಮಕ್ಕಳಿಗೆ ಇಷ್ಟು ತಗಲುತ್ತದೆ, 10 ಮಕ್ಕಳಿಗೆ ಇಷ್ಟು ತಗಲುತ್ತದೆಂದು ಭಾರತದೇಶದೊಳಗಡೆಯು

ಕೂಡ ಮಾಡಿದ್ದಾರೆ. ವಿದೇಶದಲ್ಲಿ ಒಂದು ಮಗುವಿಗೆ 28 dollars ಆಗುತ್ತದೆ. ನಾನು ಅವರು ಕೊಟ್ಟಿರುವ broachers ನೋಡಿದೆ, ನಮಗೆ ಕರ್ನಾಟಕ ಸರ್ಕಾರ ಅಥವಾ ಬೇರೆ ರಾಜ್ಯ ಸರ್ಕಾರ ಬಿಸಿ ಊಟದ ಕಾರ್ಯಕ್ರಮಕ್ಕೆ ಅವರು ಸಬ್ಸಿಡಿ ಕೊಡುತ್ತಿದ್ದಾರೆ, ಅವರು ಕೊಡುತ್ತಿರುವ ದುಡ್ಡಿನಲ್ಲಿ ನಮಗೆ ಹೆಚ್ಚುವರಿಯಾಗಿ ಇಷ್ಟಾಗುತ್ತದೆಂದು ಎಲ್ಲಿಯೂ ಕೂಡ ಹೇಳಿಲ್ಲ. ಕರ್ನಾಟಕ ಸರ್ಕಾರದ್ದೆಂದು ಎಲ್ಲಿಯೂ ಕೂಡ ಉಲ್ಲೇಖಿಸಲೇ ಹೋಗುವುದಿಲ್ಲ, ಅವರು ಈ ರೀತಿಯ ಫೋಟೋಗಳನ್ನು ಏಕೆ ಅವರು ಮಾಡಬೇಕಾಗಿತ್ತು? ಅವರೇನು ಧಾರ್ಮಿಕ ಕೆಲಸವನ್ನು ಮಾಡುತ್ತಿದ್ದರು, ಆ ಕೆಲಸಕ್ಕೆ ಡೊನೇಷನ್ಸ್ ತೆಗೆದುಕೊಂಡಿದ್ದರೆ, ಧಾರ್ಮಿಕ ಕೆಲಸಗಳನ್ನು ವಿಸ್ತರಣೆ ಮಾಡಿಕೊಂಡಿದ್ದರೆ, ಬಹುಶಃ ನಾವ್ಯಾರು ಇಲ್ಲಿ ಪ್ರಸ್ತಾಪ ಮಾಡುವ ಅಗತ್ಯವಿರಲಿಲ್ಲವೆಂದು ಅನಿಸುತ್ತದೆ. ಹಿಂದೆಯು ಕೂಡ ಈ ವಿಷಯ ಸದನದಲ್ಲಿ ಪ್ರಸ್ತಾಪವಾಗಿತ್ತು. ಮಾನ್ಯ ಮಾಧುಸ್ವಾಮಿ, ಶ್ರೀರಾಮರೆಡ್ಡಿ, ಜಯಪ್ರಕಾಶ ಹೆಗ್ಡೆ, ವಾಟಾಳ್ ನಾಗರಾಜ್‌ರವರು ಸಹಿ ಮಾಡಿದ್ದರು, ಮಾಧುಸ್ವಾಮಿಯವರು ಭಾಷಣ ಮಾಡಿ ಮುಗಿಸುವುದಕ್ಕೆ ರಾತ್ರಿ 8.00 ಗಂಟೆಯಾಗಿದೆ, ಸಹಿ ಮಾಡಿದ ಇತರರು ಇನ್ನು ಈ ಬಗ್ಗೆ ಪ್ರಸ್ತಾಪ ಮಾಡೇ ಇರಲಿಲ್ಲ, ಅಂದರೆ ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಶ್ರೀರಾಮರೆಡ್ಡಿಯವರೆಲ್ಲಾ ಮಾತನಾಡಿದ್ದರು, ಆದರೆ ಚರ್ಚೆಯಲ್ಲಿ ಭಾಗವಹಿಸಿರಲಿಲ್ಲ. ಅಷ್ಟು ಹೊತ್ತಿಗೆ ಸರ್ಕಾರದಲ್ಲಿದ್ದ ಮಂತ್ರಿಗಳಾದ ಚೆಲುವರಾಯಸ್ವಾಮಿಯವರು ಹೆಚ್ಚು ಕಡಿಮೆ ಮಧುಸ್ವಾಮಿಯವರು ಹೇಳಿದ್ದನ್ನೆಲ್ಲಾ ಒಪ್ಪಿಕೊಂಡಂಥ ರೀತಿಯಲ್ಲಿ, ನೀವು ಹೇಳುವುದೆಲ್ಲಾ ಸರಿಯಾಗಿದೆ, ಇವರು donation collect ಮಾಡುವುದು ತಪ್ಪು, ನಮ್ಮ ಮಕ್ಕಳ ಫೋಟೋವನ್ನು ವಿದೇಶಗಳಲ್ಲಿ ಪ್ರದರ್ಶನ ಮಾಡಿರುವುದೆಲ್ಲಾ ತಪ್ಪು, ಹೀಗೆ ಕೋಟಿಗಟ್ಟಲೆ ಹಣ ಕಲೆಕ್ಟ್ ಮಾಡಿರುವುದು ಕೂಡ ತಪ್ಪು, ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಅವರು ಅವತ್ತು ಹೇಳಿದರು. ಕೋಟಿಗಟ್ಟಲೆ ಹಣ ಕಲೆಕ್ಟ್ ಮಾಡಿರುವುದು ತಪ್ಪು ಎಂದು ಹೇಳಿ, ಅವತ್ತು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಬಹುಶಃ ನನಗೆ ಗೊತ್ತಿರುವ ಮಟ್ಟಿಗೆ ಆಗಿನ ಸರ್ಕಾರವಾಗಲಿ, ಆದಾದ ನಂತರ ಸರ್ಕಾರಗಳಾಗಲಿ, ಯಾವ ಸರ್ಕಾರಗಳೂ ಕೂಡ ಇವತ್ತಿನವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅವತ್ತು ಒಂದು ಮಗುವಿಗೆ ಆರು ರೂ. ಕೊಡತ್ತಿದ್ದರು. ನಾವು ಸಬ್ಸಿಡೈಸ್ ಮಾಡಿರುವುದರಿಂದ ನಮಗೆ ಎಷ್ಟು ಬೀಳುತ್ತದೆ ಎಂದರೆ, ಇದು ಕೇಂದ್ರ ಹಾಗೂ ರಾಜ್ಯ ಎರಡೂ ಸರ್ಕಾರಗಳ ಕಾರ್ಯಕ್ರಮ.

2008–09ರಲ್ಲಿ ಕೇಂದ್ರ ಸರ್ಕಾರದ್ದು 207 ಕೋಟಿ 76 ಲಕ್ಷ ರೂ., ರಾಜ್ಯ ಸರ್ಕಾರದ್ದು 171 ಕೋಟಿ ರೂ. ಒಟ್ಟು ಕಳೆದ ವರ್ಷ 378 ಕೋಟಿ 90 ಲಕ್ಷ 28 ಸಾವಿರ ರೂ. ಇಷ್ಟು ಹಣವನ್ನು ಎರಡೂ ರಾಜ್ಯಗಳು ಖರ್ಚು ಮಾಡಿ ಸುಮಾರು 70 ಲಕ್ಷ ಮಕ್ಕಳಿಗೆ ಊಟ ಕೊಡತಕ್ಕಂತಹ ಒಂದು ಕಾರ್ಯಕ್ರಮ. ನಾನು ಮೊದಲೇ ಪ್ರಸ್ತಾಪ ಮಾಡಿದಂತೆ ಸರ್ಕಾರ ಯಾವ ಸದುದ್ದೇಶ ಇಟ್ಟುಕೊಂಡು ಈ ಕಾರ್ಯಕ್ರಮ ಪ್ರಾರಂಭ ಮಾಡಿದೆ, ಆ ಸದುದ್ದೇಶ ಈಡೇರಬೇಕು. ಜಾತ್ಯಾತೀತ ತತ್ವ ಅದರಲ್ಲಿ ಅಡಕವಾಗಿರುವುದರಿಂದ, ಸಮಾನತೆಯ ತತ್ವ ಅಡಕವಾಗಿರುವುದರಿಂದ ಮತ್ತೆ ನಾವು ಅದರಲ್ಲಿ ಬೇರೆ ತರಹದ ಭಾವನೆಗಳು ಬರುವಂತೆ ಹುಟ್ಟು ಹಾಕುವುದು ತಪ್ಪು. ಮನೆಯಲ್ಲಿ ಈರುಳ್ಳಿ, ಬೆಳ್ಳುಳ್ಳಿ ತಿಂದು ಆ ಶಾಲೆಗೆ ಹೋದಂತಹ ಮಕ್ಕಳು ನಮಗೆ ಕೇಳುತ್ತಾರೆ. ಅಲ್ಲಿ ಹೋದಾಗ ಈರುಳ್ಳಿ, ಬೆಳ್ಳುಳ್ಳಿ ಇರುವುದಿಲ್ಲ. ಏಕೆ ಇಲ್ಲಿ ಈರುಳ್ಳಿ ಬೆಳ್ಳುಳ್ಳಿ ಇಲ್ಲವೆಂದರೆ ಏನು ಹೇಳುವುದು? ಅವಕ್ಕೆ ಏನು ಉತ್ತರ ಕೊಡುತ್ತಾರೆ? ನಮ್ಮ ಮನೆಯಲ್ಲಿ ಈರುಳ್ಳಿ ಬೆಳ್ಳುಳ್ಳಿ ತಿಂದುಕೊಂಡು ಬಂದಿರುತ್ತೇವೆ. ಇಲ್ಲಿ ಈರುಳ್ಳಿ ಬೆಳ್ಳುಳ್ಳಿ ಇಲ್ಲವಲ್ಲಾ ಎಂದರೆ ಏನು ಹೇಳುವುದು? ಅವರಗೆ ಏನು ಉತ್ತರ ಕೊಡುವುದಕ್ಕಾಗುತ್ತದೆ? ಆ ಮಕ್ಕಳ ಮನಸ್ಸಿನಲ್ಲಿ ಯಾವ ತರಹದ ಭಾವನೆ ಬರಬಹುದು? ಆ ಭಾವನೆಗಳಿಗೆ ಅವರ ತಂದೆ ತಾಯಿಗಳೂ ಉತ್ತರ ಕೊಡುವುದಕ್ಕಾಗುವುದಿಲ್ಲ, ಊಟ ಕೊಡುವವರೂ ಉತ್ತರ ಕೊಡುವುದಕ್ಕಾಗುವುದಿಲ್ಲ. ಜಾತ್ಯಾತೀತ ತತ್ವ ಇಲ್ಲಿ ಅಳವಡಿಸಬೇಕೆಂದು ಇದೆಯಲ್ಲ ಅದರ ಬಗ್ಗೆ ಆ ತತ್ವನೇ ಹೋಗಿ ಬಿಡುತ್ತದೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಆಹಾರ ಪದ್ಧತಿ ಒಂದೊಂದು ಕಡೆ ಒಂದೊಂದು ಬೇರೆ ಬೇರೆ ಪದ್ಧತಿ ಇರುತ್ತದೆ. ಒಬ್ಬರು ಮಾಂಸಾಹಾರಿ ಇರುತ್ತಾರೆ, ಒಬ್ಬರು ಸಸ್ಯಾಹಾರಿ ಇರುತ್ತಾರೆ. ಬೇರೆ ಬೇರೆ ಪಲ್ಯ ಉಪಯೋಗ ಮಾಡುತ್ತಾರೆ. ಅದೇನು ದೊಡ್ಡ ವಿಷಯ ಅಲ್ಲ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಅಲ್ಲಿರುವ ಮಕ್ಕಳೆಲ್ಲ ಒಂದು ಪದ್ಧತಿಯವರಲ್ಲ. ಈರುಳ್ಳಿ ಬೆಳ್ಳುಳ್ಳಿ ತಿನ್ನದೇ ಇರುವ ಪದ್ಧತಿಯವರಿಲ್ಲ ಅಲ್ಲ. ಇಸ್ಕಾನ್‌ನವರು ಬಿಸಿ ಊಟ ಕೊಡುವ ಶಾಲೆಗಳಲ್ಲಿ ಬರುವವರು ಈರುಳ್ಳಿ ಬೆಳ್ಳುಳ್ಳಿ ತಿನ್ನದೇ ಇರುವವರು ಬರುತ್ತಾರಾ? ಎಲ್ಲರೂ ಬಂದ ಮೇಲೆ ಏಕೆ ಈರುಳ್ಳಿ ಬೆಳ್ಳುಳ್ಳಿ ನಿಲ್ಲಿಸಿ ಬಿಟ್ಟಿದ್ದೀರಿ? ತಿನ್ನದೇ ಇರುವವರಿಗೆ ಕೊಡಬೇಡಿ. ತಿನ್ನುವವರಿಗೆ ಏಕೆ ನಿಲ್ಲಿಸಿದ್ದೀರಿ? ಯೂನಿಫಾರಂ ಎಂದರೇನು ನೀವು ಹೇಳಿದ್ದೇ ಯೂನಿಫಾರಂ. ಈರುಳ್ಳಿ ಬೆಳ್ಳುಳ್ಳಿ ತಿನ್ನುವುದೇ ಯೂನಿಫಾರಂ ಮಾಡಿ.

ಅವರಿಗೆ ನಾವು ಇಸ್ಕಾನ್ ಭಕ್ತರಾಗಬೇಡಿ ಎಂದು ಹೇಳಲಿಲ್ಲ. ಕೃಷ್ಣನ ಭಕ್ತರಾಗುವುದಕ್ಕೆ ನಮ್ಮದೇನು ತಕರಾರು ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಡಿಯವರು ಹೇಳಿದ್ದು ನೀವು ಸರಿಯಾಗಿ ತಿಳಿದುಕೊಳ್ಳಲಿಲ್ಲ. ಮಾನ್ಯ ಸಭಾಧ್ಯಕ್ಷರೆ, ಉಳ್ಳಾಗಡ್ಡಿ ತಿನ್ನುವುದು ನಮ್ಮ ಕಡೆ ಹೆಚ್ಚಿಗೆ ಎಂದರೆ, ದಡ್ಡ ಎಂದು ಅರ್ಥ. ಉಳ್ಳಾಗಡ್ಡೆ ತಲೆ ಇದೆ ಅವನದು ಎಂದು ಹೇಳುತ್ತಾರೆ. ಉಳ್ಳಾಗಡ್ಡೆ ತಲೆಯವರು ಎಂದರೆ ದಡ್ಡರು ಎಂದು. ಅಧ್ಯಕ್ಷರಿಗೂ ಗೊತ್ತಿದೆ. ಉತ್ತರ ಕರ್ನಾಟಕದಲ್ಲಿ ಉಳ್ಳಾಗಡ್ಡೆ ತಲೆ ಎಂದರೆ ಅವನು ದಡ್ಡ ಎಂದು ಅರ್ಥ. ಬಂಡಿಯವರು ಹೇಳಿದ್ದು ನಮ್ಮ ಕಡೆ ಉಳ್ಳಾಗಡ್ಡೆ ಬಹಳ ತಿನ್ನುತ್ತಾರೆಂದರೆ ಅದರ ಅರ್ಥ ಬೇರೆ ಇದೆ ಎಂದು ಹೇಳಿದರು. ಅದು ನಾವಿಬ್ಬರೇ ಇದ್ದಾಗ ನಿಮಗೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ನಾವು ಎಷ್ಟೇ ಹೊತ್ತಿಗೆ ಇಬ್ಬರು ಸೇರುವುದು?

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ ಈ ಡಿಸ್ಕಷನ್ ಮಾಡುವ ಸಲುವಾಗಿ ಸೇರಿ.

ಶ್ರೀ ಸಿದ್ದರಾಮಯ್ಯ: ಉಳ್ಳಾಗಡ್ಡಿ ಬೆಳ್ಳುಳ್ಳಿಗೋಸ್ಕರ ಸೇರಬೇಕಾ?

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಉಳ್ಳಾಗಡ್ಡಿ ನಮ್ಮ ಕಡೆ ಹಳ್ಳಿ ಜನ ಹೆಚ್ಚಿಗೆ ತಿನ್ನುತ್ತಾರೆ. ಉಳ್ಳಾಗಡ್ಡಿ ತಿನ್ನುವಂತಹದ್ದು ಇನ್ನೊಂದು ಅರ್ಥ ಇದೆ. ಅದನ್ನು ಬಹಿರಂಗವಾಗಿ ಹೇಳುವ ಹಾಗಿಲ್ಲ. ಅದರ ಸಲುವಾಗಿ ನಿಮಗೆ ಇಬ್ಬರೇ ಇರುವಾಗ ಹೇಳುತ್ತೇನೆಂದು ಹೇಳಿದೆ. ನಮ್ಮ ಬಂಡಿಯವರು ಉಳ್ಳಾಗಡ್ಡೆ ಸಾಮಾನ್ಯವಾಗಿ ಸಾಯಂಕಾಲ ಹೆಚ್ಚಿಗೆ ತಿನ್ನುತ್ತಾರೆ.

ಶ್ರೀ ಸಿದ್ದರಾಮಯ್ಯ: ಇದರ ಬಗ್ಗೆ ಏನಾದರೂ ಇಸ್ಕಾನ್‌ರವರ ಜೊತೆ ಮಾತುಕತೆ ಮಾಡಿದ್ದೀರಾ?

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ನಾವು ಉಳ್ಳಾಗಡ್ಡೆ ಜಾಸ್ತಿ ತಿಂದವರೇ ಇಲ್ಲಿಗೆ ಬಂದಿದ್ದೇವೆ. ನಮ್ಮದೇನೂ ಸಮಸ್ಯೆ ಇಲ್ಲ.

ಶ್ರೀ ಕೃಷ್ಣ ಬೈರೇಗೌಡ: ಉಳ್ಳಾಗಡ್ಡೆ ತಿನ್ನಬೇಕು ಬೇಡ ಅಷ್ಟು ಹೇಳಿ. ನೀವು ಅದರ ಪರ ಇದ್ದೀರೋ ವಿರೋಧ ಇದ್ದೀರೋ ಹೇಳಿ.

ಶ್ರೀ ಸಿದ್ದರಾಮಯ್ಯ: ನಿಮಗೆ ಉಳ್ಳಾಗಡ್ಡೆ ಬೇಕೋ ಬೇಡವೋ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ನಾವು ಏನು ಉತ್ತರ ಕರ್ನಾಟಕದಿಂದ ಬಂದಂತಹವರು ಉಳ್ಳಾಗಡ್ಡೆ ಬೆಳ್ಳುಳ್ಳಿ ಮ್ಯಾಕ್ಸಿಮಮ್

ತಿಂದೇ ಇಲ್ಲಿಗೆ ಬಂದಿದ್ದೇವೆ. ಅದರದೇ ಪ್ರಶ್ನೆ ಇಲ್ಲ. ಉಳ್ಳಾಗಡ್ಡೆ ತಿನ್ನಬೇಕೆಂದೇ ಹೇಳುವವರು ನಾವು. ತಿನ್ನಬಾರದು ಎಂದು ಹೇಳುವುದಿಲ್ಲ.

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ ಅವರು ಉಳ್ಳಾಗಡ್ಡೆದು ಬಹಿರಂಗ ಚರ್ಚೆ ಬೇಡವೆಂದು ಹೇಳಿದ್ದಾರೆ. ಅದಕ್ಕಾಗಿ ಅದನ್ನು ಮುಗಿಸಿ ಬಿಡೋಣ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಉಳ್ಳಾಗಡ್ಡೆ ಬಗ್ಗೆ ಮಾತನಾಡುವುದಿಲ್ಲ. ಸಾಕು ಉಳ್ಳಾಗಡ್ಡೆ. ನಾನು ಏಕೆ ಉಳ್ಳಾಗಡ್ಡೆ ವಿಷಯ ಪ್ರಸ್ತಾಪ ಮಾಡಿದೆ ಎಂದರೆ,

ಶ್ರೀ ಕಳಕಪ್ಪ ಜಿ. ಬಂಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರೇ, ತಾವೆಲ್ಲಾ ದೇವೇಗೌಡರ ಜೊತೆಯಲ್ಲಿದ್ದವರು. ತಾವು ದಿ. ಜೆ.ಹೆಚ್. ಪಟೇಲರ ಜೊತೆ ಹಾಗೂ ದಿ. ರಾಮಕೃಷ್ಣ ಹೆಗಡೆಯವರ ಜೊತೆ ಇದ್ದರೆ ಉಳ್ಳಾಗಡ್ಡೆ ವಿಚಾರ ಗೊತ್ತಾಗುತ್ತಿತ್ತು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ದೇವೇಗೌಡರು ಈರುಳ್ಳಿ ಬೆಳ್ಳುಳ್ಳಿ ತಿಂದಿಲ್ಲವೆಂದು ತಿಳಿದುಕೊಂಡಿರಾ? You are ignorant ಎಂದು ಆಯಿತು. You don't know anything.

ಶ್ರೀ ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರಲ್ಲಿ ನನದೊಂದು suggestion. ಬಹಳ ಗಂಭೀರವಾಗಿ debate ಆಗಿದೆ. ಎಲ್ಲರೂ ಅನೇಕ ವಿಚಾರಗಳನ್ನು ಹೇಳಿದ್ದಾರೆ. Let us not dilute it.

ಶ್ರೀ ಸಿದ್ದರಾಮಯ್ಯ: No, I am not diluting. I am very sorry. ನಾನು ಸ್ವಲ್ಪ ತಮಾಷೆಯಾಗಿ ಮಾತನಾಡಿದ ತಕ್ಷಣ ಅದು ಡೈಲ್ಯೂಟ್ ಆಗಿದೆ ಎನ್ನತಕ್ಕಂತಹ ಭಾವನೆ ಬಂದಿದೆ. It is not correct. ತಮಾಷೆಯೂ ಇರಬೇಕಾಗುತ್ತದೆ. ಏನೂ ಇಲ್ಲದೆ ಬಹಳ ಸೀರಿಯಸ್ಸಾಗಿ ಇಲ್ಲಿ ಕುಸ್ತಿ ಮಾಡುವುದಕ್ಕೆ ಬರುತ್ತೇವಾ? ಉಳ್ಳಾಗಡ್ಡೆ ವಿಚಾರ ನಾನು ಏಕೆ ಹೇಳಿದೆ ಎಂದರೆ, ಅಲ್ಲಿ ನಡೆಯುತ್ತಿರುವುದೂ ಹಾಗೆಯೇ ನಡೆಯುತ್ತಿದೆ. ಅಲ್ಲಿಯ ಆಹಾರದಲ್ಲಿ ಉಳ್ಳಾಗಡ್ಡೆ ಬೆಳ್ಳುಳ್ಳಿ ಹಾಕುವುದಿಲ್ಲ. ಸರ್ವೆ ಸಾಮಾನ್ಯ ಮಾಡಿರುವುದಕ್ಕೆ ಯಾವುದೇ ಆಧಾರವಿಲ್ಲ. ಕೆಲವರ ಪ್ರಾಕ್ಟೀಸ್. ನಾವು non-veg. ತಿನ್ನುತ್ತೇವೆ. ಕೆಲವರು non-veg ತಿನ್ನುವುದಿಲ್ಲ. This is a food habit. ನಾವು ತಿನ್ನುತ್ತೇವೆ, it is my food habit. ನಮ್ಮ ಆರೋಗ್ಯಕ್ಕೆ ಅನಾನುಕೂಲ ಆದರೆ ನಾವು

ಯಾವುದನ್ನಾದರೂ ತಿನ್ನುವುದನ್ನು ಬಿಡಬೇಕಾಗುತ್ತದೆ. ಈರುಳ್ಳಿ ಬೆಳ್ಳುಳ್ಳಿ ತಿನ್ನುವುದು ಅನಾನುಕೂಲ ಆದರೆ ತಿನ್ನುವುದು ಬಿಡಬೇಕಾಗುತ್ತದೆ. As soon it is good for the health, ತಿಂದರೆ ತೊಂದರೆ ಏನೂ ಆಗುವುದಿಲ್ಲ. ನಾನು ಇದನ್ನು ಸಾರ್ವತ್ರಿಕವಾಗಿ ಏಕೆ ಹೇಳುತ್ತಿದ್ದೇನೆಂದರೆ, The very fact that ಅದನ್ನು impose ಮಾಡುವುದು ಇದೆಯಲ್ಲ, ಬಲಾತ್ಕಾರವಾಗಿ ಇದನ್ನು ತಿನ್ನಬೇಡಿ, ಇಂತಹದ್ದು ತಿನ್ನಬಾರದು ಎನ್ನುವುದು ಇದೆಯಲ್ಲಾ, that is very bad, ಅದು ನನ್ನ ಪಾಯಿಂಟ್ ಅಷ್ಟೆ. ಅದು ಮಾಡಿರುವುದು ಸರಿಯಿಲ್ಲ ಎಂದು ನನ್ನ ಒತ್ತಾಯ.

Education System ಮತ್ತು Knowledge ವಿಷಯದಲ್ಲಿ ಹೇಳಿದ್ದಾರೆಂದರೆ, ನಾವು ಭಾರತೀಯರಿಂದ ಕಲಿಯಬೇಕಾಗಿದೆ ಎಂದು ಅಮೇರಿಕಾದ ಅಧ್ಯಕ್ಷರಾದ ಒಬಾಮರವರು ಹೇಳಿದ್ದಾರೆ. ಆದುದರಿಂದ ಭಾರತ ದೇಶದ ಬಗ್ಗೆ ನಾವು ಗಮನ ಇಟ್ಟುಕೊಂಡು ನೋಡಬೇಕೆಂದು ಅವರು ಹೇಳಿದ್ದಾರೆ. ನಮ್ಮ ದೇಶದಲ್ಲಿ ಬಡತನವಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ನಮ್ಮ ದೇಶದಲ್ಲಿ ಬಡತನವಿದೆ, ಆದರೆ ಹಸಿವಿನಿಂದ ಊಟವಿಲ್ಲದೇ ಸಾಯತಕ್ಕಂಥವರು ನನಗೆ ಗೊತ್ತಿರುವಂತೆ ಬಹಳ ವಿರಳ. ಇಂದು ನಮ್ಮ ದೇಶದ ಸರ್ಕಾರ ನಮ್ಮ ದೇಶದಲ್ಲಿರುವ ಶಾಲೆಯ ಮಕ್ಕಳಿಗೆ Mid-day meals ಕೊಡುವುದಕ್ಕೆ ಆಗುವುದಿಲ್ಲ, ನೀವೆಲ್ಲದರೂ ಭಿಕ್ಷೆ ಬೇಡಿಕೊಂಡು ತೆಗೆದುಕೊಂಡು ಬಂದು ಊಟ ಹಾಕಿ ಎಂದು ಎಲ್ಲಿಯೂ ಹೇಳಿಲ್ಲ. The Government and the country, we are not in a position to fund the programe. ನೀವೆಲ್ಲಾದರೂ ಹಣವನ್ನು ತೆಗೆದುಕೊಂಡು ಬಂದು ಈ ಕೆಲಸ ಮಾಡಿ ಎಂದು ಯಾರೂ ಎಲ್ಲಿಯೂ ಹೇಳಿಲ್ಲ. ಡೊನೇಶನ್ ತೆಗೆದುಕೊಳ್ಳಿ ಎಂದು ಯಾರಿಗೂ ಹೇಳಲಿಲ್ಲ. ಮಕ್ಕಳ ಹೆಸರನ್ನು ಹೇಳಿ ಡೊನೇಶನ್ ತೆಗೆದುಕೊಳ್ಳಿ ಎಂದು ಯಾರಿಗೂ ಹೇಳಿಲ್ಲ. ನಮ್ಮ ಮಕ್ಕಳನ್ನು ತೋರಿಸಿ ನಮ್ಮ ದೇಶದಲ್ಲಿ ಹಸಿವೆಯಿಂದ ಮಕ್ಕಳುಗಳು ಸಾಯುತ್ತಿದ್ದಾರೆ, ಇವರಿಗೆ Mid-day meals ಕೊಡದಿದ್ದರೆ ಆಗುವುದಿಲ್ಲ, ಆದಕಾರಣ ಈ ಬಡ ಮಕ್ಕಳಿಗೋಸ್ಕರವಾಗಿ ನೀವು ಡೊನೇಶನ್ ಕೊಡಿ ಎಂದು ಕೇಳುವುದಿದೆಯಲ್ಲಾ ಇದು ನಮ್ಮ ದೇಶದ ಮೇಲೆ ಯಾವ ರೀತಿಯ ಪರಿಣಾಮವಾಗಬಹುದು ಹೇಳಿ, ಅವರ ದೃಷ್ಟಿಯಲ್ಲಿ ನಾವು ಯಾವ ಸ್ಥಾನದಲ್ಲಿ ನಿಂತುಕೊಳ್ಳಬಹುದು, ಅವರ ಕಣ್ಣಿಗೆ ನಾವು ಯಾವ ರೀತಿ ಬೀಳಬಹುದು ಹೇಳಿ. ಅವರು ನಮ್ಮ ಬಗ್ಗೆ ಏನು ಅಂದುಕೊಳ್ಳುತ್ತಾರೆ. ಇದು ಬಹಳ ಪ್ರಮುಖವಾದಂಥ ವಿಚಾರ. ನಮ್ಮ ಬಗ್ಗೆ ಅವರು ಬಹಳ ಕೆಟ್ಟದ್ದಾಗಿ

ಯೋಚನೆಯನ್ನು ಮಾಡಬಹುದು. ಅಮೇರಿಕಾದಲ್ಲಿ, ಯೂರೋಪ್ ದೇಶಗಳಲ್ಲಿ ಇವರು ಡೊನೇಶನ್‌ಗಳನ್ನು ಕಲೆಕ್ಟ್ ಮಾಡಿದ್ದಾರೆ. ಇವರು ಈ ರೀತಿಯಲ್ಲಿ ಮಕ್ಕಳ ಹೆಸರನ್ನು ಹೇಳಿಕೊಂಡು Income Tax Act ಕೆಳಗಡೆ ಸಂಪೂರ್ಣ ತೆರಿಗೆ ವಿನಾಯಿತಿಯನ್ನು ಪಡೆದುಕೊಂಡಿದ್ದಾರೆ. Total exemption. ಶೇಕಡ ನೂರರಷ್ಟು ತೆರಿಗೆ ವಿನಾಯಿತಿಯನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಇರುವಾಗ ಇದರ ಬಗ್ಗೆ ಅವರು ಲೆಕ್ಕ ಕೊಡಬೇಕೋ, ಬೇಡವೋ ಹೇಳಿ? Not even 50% exemption. Under Section 35 of the Income Tax Act, total exemption ಕೊಟ್ಟಿದ್ದಾರೆ. ಇವರು ಕೇಂದ್ರ ಸರ್ಕಾರಕ್ಕೆ ಬರೆದು ಟೋಟಲ್ ಎಕ್ಸೆಂಪ್ಷನ್ ತೆಗೆದುಕೊಂಡು, ಇದಲ್ಲದೇ ರಾಜ್ಯದ ಒಳಗಡೆ ಮತ್ತು ದೇಶದ ಒಳಗಡೆ ಕೂಡ 1200 ರೂಪಾಯಿ ಎಂದು ಹೇಳಿ ಹಣವನ್ನು ಕಲೆಕ್ಟ್ ಮಾಡಿದ್ದಾರೆ. ಹೀಗಿರುವಾಗ ಅವರು ಯಾವ ರೀತಿ ಲೆಕ್ಕ ಯಾವ ರೀತಿ ಇಟ್ಟಿದ್ದಾರೆ ಎಂದು ನೋಡಬೇಕಲ್ಲವೆ? ಅದು ಆಡಿಟ್ ಆಗಬೇಕೋ ಬೇಡವೋ? ಆ ಹಣವನ್ನು ಯಾವ ರೀತಿ ಖರ್ಚು ಮಾಡಿದ್ದಾರೆ ಎಂದು ನೋಡಬೇಕೋ, ಬೇವೋ? ನಮ್ಮ ದೇಶದ ಜನರಿಗೆ ಇದು ಗೊತ್ತಾಗಬೇಕಲ್ಲ, ಇಲ್ಲಿ ನನ್ನ ಹತ್ತಿರ ಅವರದ್ದೊಂದು ಟ್ಯಾಕ್ಸ್ ರಿಟರ್ನ್ಸ್‌ದು ಕಾಪಿ ಇದೆ. ಅದರಲ್ಲಿ 2 ಲಕ್ಷದ 12 ಸಾವಿರಕ್ಕೂ ಹೆಚ್ಚು ಡಾಲರ್ಸ್ ಬಂದಿದೆ. ಅವರೇ ಈ ವಿವರವನ್ನು ತಿಳಿಸಿದ್ದಾರೆ. 2 ಲಕ್ಷದ 12 ಸಾವಿರ ಡಾಲರ್ಸ್, ಅದರಲ್ಲು ಸುಮಾರು ಒಂದೂವರೆ ಲಕ್ಷ ಬೇರೆ ಬೇರೆಯವರುಗಳಿಗೆ ಖರ್ಚು ಮಾಡಿ ಸುಮಾರು 52 ಸಾವಿರ ಡಾಲರ್ಸ್‌ಗಳು ಉಳಿತಾಯವಾಗಿದೆ. ಅಂದರೆ ಸುಮಾರು ಎರಡೂವರೆ ಕೋಟಿ. ಬಹುಶಃ ಅದು inflated figures ಇರಬೇಕು, ಒಂದೂವರೆ ಲಕ್ಷ ಡಾಲರ್ಸ್ ಬೇರೆ ಬೇರೆ ಕಾರಣಗಳಿಗೋಸ್ಕರ ಖರ್ಚು ಮಾಡಿರುವುದು ಇರಬೇಕು. ಅಂದರೆ ಡೊನೇಶನ್ ಕಲೆಕ್ಟ್ ಮಾಡುವವರಿಗೆ ಸಂಬಳ, ಅದೂ ಇದು, ವಾಲೆಂಟೀಯರ್ಸ್‌ಗಳಿಂದ ಕಲೆಕ್ಟ್ ಮಾಡಿಕೊಂಡು ಬಂದವರಿಗೆ ಕೊಟ್ಟಿದ್ದು. ಟೋಟಲ್ ಎಕ್ಸೆಂಪ್ಷನ್ ಯಾವ ಕಾರಣಕ್ಕೋಸ್ಕರ ಇವರು ಮಾಡುತ್ತಿರುವುದು? It is a charitable institution. Charitable purposeಗೋಸ್ಕರ ಇವರು ಡೊನೇಶನ್‌ಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆಯೇ? ಇವರು ಕಲೆಕ್ಟ್ ಮಾಡಿ ಎಲ್ಲ ಹಣ ಸದುಪಯೋಗವಾಗಬೇಕಲ್ಲವೆ? ಇವರು ಕಲೆಕ್ಟ್ ಮಾಡಿದ ಹಣವನ್ನೆಲ್ಲಾ ಮಕ್ಕಳಿಗೆ ಊಟ ಹಾಕುವುದಕ್ಕೆ ಖರ್ಚು ಮಾಡುತ್ತಿದ್ದಾರೆಯೇ? ಆ ರೀತಿ ಇಲ್ಲ. ನಮ್ಮ ಶಿವಕುಮಾರ್ ಹೇಳಿದರು, ಬಂದಂಥ ಹಣವನ್ನು ಅವರು ಬೇಕಾದಷ್ಟು ಬೇರೆ ಬೇರೆ ಕಡೆಗಳಲ್ಲಿ invest

ಮಾಡಿದ್ದಾರೆಂದು. SDMCನವರು ಕೂಡ ದುಡ್ಡನ್ನು ಕೊಟ್ಟಿದ್ದಾರೆ. ಈ ದುಡ್ಡನ್ನು ಏನು ಮಾಡುತ್ತಾರೆ? ಭಾರತ ದೇಶದಲ್ಲಿ ಬಂದಂಥ ದುಡ್ಡನ್ನು ಏನು ಮಾಡುತ್ತಾರೆ? ವಿದೇಶದಿಂದ ಬಂದಂಥ ಹಣವನ್ನು ಏನು ಮಾಡುತ್ತಾರೆ? ಇವೆಲ್ಲಾ ಹಣವನ್ನೂ ಕೂಡ ಇವರು ತೆಗೆದುಕೊಂಡು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುವುದಾದರೆ, ತಮ್ಮ ಸ್ವಂತ ಟ್ರಸ್ಟ್‌ಗಳನ್ನು ಮಾಡಿಕೊಂಡು ಅದಕ್ಕೆ ಈ ಹಣವನ್ನು ಉಪಯೋಗಿಸಿಕೊಳ್ಳುವುದಾದರೆ, ತಮ್ಮ ಸ್ವಾರ್ಥಕ್ಕೆ ಬಳಸಿ ಕೊಳ್ಳುವುದಾದರೆ, ಇವರು ಆಸ್ತಿ ಸಂಪಾದನೆ ಮಾಡುವುದಕ್ಕೆ ಈ ಹಣವನ್ನು ಬಳಸಿ ಕೊಳ್ಳುವುದಾದರೆ ಇಂಥದ್ದನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ? ಇದನ್ನು ಒಪ್ಪಿಕೊಳ್ಳಕೂಡದು. ಇದರ ಬಗ್ಗೆ ಶಿವಕುಮಾರ್ ಏನು ಹೇಳಿದ್ದಾರೆ, ತನಿಖೆಯಾಗಲೇಬೇಕು, ಯಾರಿಂದ ಎಷ್ಟೆಷ್ಟು ದುಡದು ಬಂದಿದೆಯೆಂದು ಗೊತ್ತಾಗಬೇಕು. ಈಗಾಗಲೇ ಶಿವಕುಮಾರ್‌ರವರು ಸದನ ಸಮಿತಿ ಮಾಡಬೇಕೆಂದು ಹೇಳಿದ್ದಾರೆ. ಸಂಪೂರ್ಣವಾಗಿ ಇದರ ಆಳ ಎಲ್ಲಿಯವರೆವಿಗೆ ಹೋಗಿದೆಯೆಂದು ಎಲ್ಲ ಜನರಿಗೂ ಗೊತ್ತಾಗಬೇಕು, ಅವರು ಮಾಡಿರತಕ್ಕಂಥ ಅವ್ಯವಹಾರಗಳೆಲ್ಲಾ ಬಯಲಾಗಬೇಕು, ಅವರು ಎಲ್ಲೆಲ್ಲಿ ಇನ್‌ವೆಸ್ಟ್ ಮಾಡಿದ್ದಾರೆ, ಏನೇನು ಮಾಡಿದ್ದಾರೆ, ಈ ಹಣವನ್ನು ಪಡೆಯಲು ನಮ್ಮ ಹುಡುಗರನ್ನು ಯಾವ ರೀತಿಯಲ್ಲಿ ತೋರಿಸಿದ್ದಾರೆ, ಇವೆಲ್ಲಾ ವಿಷಯಗಳು ಕೂಡ ಇಡೀ ರಾಜ್ಯದ ಜನರಿಗೆ ಗೊತ್ತಾಗಬೇಕೆಂದು ಅವರು ಒತ್ತಾಯ ಮಾಡಿದ್ದಾರೆ. ಸದನ ಸಮಿತಿಯನ್ನು ಮಾಡಿ. We have proved this case. We made out a good case. ನೀವು ಒಪ್ಪಿಕೊಳ್ಳಿ. ನೀವು ಈ ರೀತಿ ಸಮಿತಿ ಮಾಡಿದರೆ ಸರ್ಕಾರದ image ಏನೂ ಕಡಿಮೆ ಆಗುವುದಿಲ್ಲ. ಇದರಲ್ಲಿ ಹಿಂದೆ ಹೋಗತಕ್ಕಂಥ ಪ್ರಶ್ನೆ ಇಲ್ಲ. ನೀವು ಒಪ್ಪಿಕೊಂಡು ಸದನ ಸಮಿತಿ ಮಾಡಿ. ನನ್ನ ಪ್ರಕಾರ ಇನ್ನು ಮುಂದೆ ಇವರಿಗೆ ಅಕ್ಷರ ದಾಸೋಹದ ಕಾರ್ಯಕ್ರಮವನ್ನು ಮಾಡಲು entrust ಮಾಡುವುದನ್ನು ನಿಲ್ಲಿಸಿ. Entrust ಮಾಡುವುದು ಬೇಡ, ಏಕೆಂದರೆ ನಮ್ಮವರನ್ನು ಉಪಯೋಗಿಸಿಕೊಂಡು ಇವರು ಭಾರತದೊಳಗೆ ಮತ್ತು ಹೊರದೇಶಗಳಲ್ಲಿ ಹೋಗಿ ಹಣವನ್ನು ಶೇಖರಣೆ ಮಾಡಿಕೊಂಡು ಇವರು ಸ್ವಂತಕ್ಕೋಸ್ಕರ, ಸ್ವಾರ್ಥಕ್ಕೋಸ್ಕರ ಬಳಸಿಕೊಂಡಿರುವುದು ಆಗಿದೆ. ಸರ್ಕಾರವೇ ಈ ಕಾರ್ಯಕ್ರಮವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಈಗ 68 ಲಕ್ಷ ಮಕ್ಕಳಿಗೆ ಈಗಾಗಲೇ ನಾವು ಬಿಸಿಯೋಟವನ್ನು ಕೊಡುತ್ತಿದ್ದೇವೆ. ಇನ್ನೂ ಸ್ವಲ್ಪ ಹೆಚ್ಚು ಮಕ್ಕಳಿಗೆ ಸರ್ಕಾರದಿಂದ ಬಿಸಿಯೂಟವನ್ನು ಕೊಡುವುದಕ್ಕಾಗುವುದಿಲ್ಲವೆ? ಕೇಂದ್ರ ಸರ್ಕಾರ ಅಕ್ಕಿಯನ್ನು ಕೊಡುತ್ತದೆ, ರಾಜ್ಯ ಸರ್ಕಾರ ಕೊಡುತ್ತದೆ,

ಸರ್ಕಾರವೇ ಮಾಡಿದರೆ ನಮ್ಮ ಜನರಿಗೆ ಕೆಲಸ ಕೂಡ ಸಿಗುತ್ತದೆ. ಸಾಮಾಜಿಕ ನ್ಯಾಯ ಜಾರಿಯಾಗುತ್ತದೆ. ಆದುದರಿಂದ ಸರ್ಕಾರವೇ ಇದನ್ನು ಮಾಡಲಿ. ಮೊದಲು ಸರ್ಕಾರ ಇವರಿಗೆ entrust ಮಾಡಿರುವುದನ್ನು ತಕ್ಷಣ ನಿಲ್ಲಿಸಿ. ಈಗಾಗಲೇ ಬಿಸಿಯೂಟ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿರತಕ್ಕಂಥ ಮಹಿಳೆಯರು ಖಾಸಗೀಕರಣ ಮಾಡಿದರೆ ನಮ್ಮ ಕೆಲಸ ಹೋಗುತ್ತದೆ ಎಂದು ಹೇಳುತ್ತಿದ್ದಾರೆ. ಪಾಪ, ಅವರಿಗೆ ಸೇವಾ ಭದ್ರತೆ ಕೂಡ ಇಲ್ಲ. 800 ರೂಪಾಯಿ ತೆಗೆದುಕೊಂಡು ಕೆಲಸ ಮಾಡುತ್ತಾರೆ. ಒಬ್ಬರು 500 ರೂಪಾಯಿ, ಒಬ್ಬರು 500 ರೂಪಾಯಿ, ಒಬ್ಬರು 400 ರೂಪಾಯಿ ಕೊಡಲಾಗುತ್ತಿದೆ. ಅವರಿಗೆ ಅಲ್ಲಿ ಅಷ್ಟು ಕೊಟ್ಟು, ಇಲ್ಲಿ ಇವರಿಗೆ ದೋಚುವುದಕ್ಕೆ ಏಕೆ ಬಿಡಬೇಕು? ಈ ಕಾರ್ಯಕ್ರಮದ ಹೆಸರಿನಲ್ಲಿ, ಮಕ್ಕಳ ಹೆಸರಿನಲ್ಲಿ ಹಣವನ್ನು ದೋಚುವುದಕ್ಕೆ ಏಕೆ ಇವರಿಗೆ ಬಿಡಬೇಕು? ಇದನ್ನು ಮೊದಲು ನಿಲ್ಲಿಸಿ. Because it is a deceitful act. It is not an honest act. It is punishable under Indian Penal Code. Who ever he may be, ಜನರಿಗೆ ಮೋಸ ಮಾಡತಕ್ಕಂಥದ್ದು, ಸಮಾಜಕ್ಕೆ ಮೋಸ ಮಾಡತಕ್ಕಂಥದ್ದು, ಇಂಥವರಿಗೆ ಕಾನೂನಿನ ಪ್ರಕಾರ ಶಿಕ್ಷೆ ಕೊಡಿ. ಅವರ ಮೇಲೆ ಕೇಸ್ ಹಾಕಿ. ಯಾರು ಇಂಥ ಕೆಲಸವನ್ನು ಮಾಡಿದ್ದಾರೆ ಅವರು ಯಾರೇ ಆಗಿರಲಿ ಅವರು ಕಾನೂನಿಗಿಂತ ಮೇಲೆ ಇರಲು ಸಾಧ್ಯವೇ ಇಲ್ಲ. ನಮ್ಮ law of the land ಏನಿದೆ ಅದರ ಪ್ರಕಾರ ತಪ್ಪಿತಸ್ಥರು Indian Penal Code ನೊಳಗಡೆ ಬರುತ್ತಾರೆ. ಆದುದರಿಂದ ನಾನು ಒತ್ತಾಯ ಮಾಡುತ್ತೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ಹೀಗೆ ಹೇಳುತ್ತಲೇ ನೀವು ಮೂವತ್ತು ನಿಮಿಷಗಳಿಗಿಂತ ಹೆಚ್ಚು ಮಾತನಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ಮೂರು ಗಂಟೆ ಮಾತನಾಡುವವನು ನಾನು ಕೇವಲ ಅರ್ಧ ಗಂಟೆ ಮಾತನಾಡಿದ್ದೇನಷ್ಟೆ. ಸುಮ್ಮನೆ just submission ಮಾಡಿದ್ದೇನಷ್ಟೆ.

ಶ್ರೀ ಆರ್. ಅಶೋಕ್: ಶಿವಕುಮಾರ್‌ರವರು ಹೆಚ್ಚು ಮಾತನಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಅವರೇ ಈ ವಿಷಯ್ಲದಲ್ಲಿ ನನಗಿಂತ ಚೆನ್ನಾಗಿ ಮಾತನಾಡುತ್ತಾರೆಂದೇ ಅವರಿಗೆ ಹೆಚ್ಚು ಸಮಯವನ್ನು ಮಾತನಾಡಲು ಬಿಟ್ಟೆ. ಈ ವಿಷಯದ ಬಗ್ಗೆ ಚೆನ್ನಾಗಿ ತಯಾರಾಗಿದ್ದಾರೆಂದೇ ಅವರಿಗೆ ಮಾತನಾಡಲು ಬಿಟ್ಟೆ. ಬಹಳ ಚೆನ್ನಾಗಿಯೂ ಕೂಡ ಅವರು ಮಾತನಾಡಿದರು. ನೀವೆಲ್ಲರೂ ಕೂಡ ಮೆಚ್ಚುಗೆ ವ್ಯಕ್ತ ಮಾಡಿದ್ದೀರಿ. ಆದರೆ ಇದಕ್ಕೆ ಮಾನ್ಯ ಸಚಿವರು ಯಾವ ರೀತಿಯಲ್ಲಿ ಕೊಡುತ್ತಾರೆ ಎಂಬುದನ್ನು ನಾವು ನೋಡಬೇಕು. ಆಮೇಲೆ

ಇದನ್ನೇನಾದರೂ ಡಿಫೆಂಡ್ ಮಾಡುವುದಕ್ಕೆ ಹೊರಟು ಹೋಗಿಬಿಟ್ಟೀರಿ. ಅಮೇಲೆ ಯಾರನ್ನೋ ಪ್ರೊಟೆಕ್ಟ್ ಮಾಡುವುದಕ್ಕೆ ಹೊರಟು ಬಿಟ್ಟೀರಿ, ಆ ರೀತಿ ನೀವು ಮಾಡುವುದಕ್ಕೆ ಹೋಗಬೇಡಿ. ಏನು ಈಗಾಗಲೇ ಬಹಳ ಖುಷಿಯಾಗಿ ಒಪ್ಪಿಕೊಂಡಿದ್ದೀರಿ ಅದರ ಪ್ರಕಾರ ಸಾಬೀತಾಗಿದೆ ಕೇಸು, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ, ಇನ್ನೂ ಒಳಗಡೆಯೇ ಮುಚ್ಚಿ ಹೋಗಿರತಕ್ಕಂಥವುಗಳು ಅನೇಕ ವಿಚಾರಗಳು ಹೊರಗಡೆ ಬರಬೇಕಾಗಿದೆ, ಆದುದರಿಂದ ಸದನ ಸಮಿತಿಯಿಂದ ಆ ಬಗ್ಗೆ ತನಿಖೆಯನ್ನು ಮಾಡಿಸಿ.

ಸದನ ಸಮಿತಿಯಿಂದ ತನಿಖೆ ಮಾಡಿಸಿ, ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಅವರು ನಮ್ಮ ಮಕ್ಕಳನ್ನು ತೋರಿಸಿ ಈ ದೇಶದಲ್ಲಿ ಮತ್ತು ಹೊರದೇಶದಲ್ಲಿ ಸುಳ್ಳು ಹೇಳಿ ಡೊನೇಷನ್ ತೆಗೆದುಕೊಳ್ಳುವುದನ್ನು ತಪ್ಪಿಸಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ ಅವರಿಗೆ ಬೇಕಾದಷ್ಟು ಸಹಾಯ ಮಾಡಿದೆ. ಆಮೇಲೆ ಬಂದಂತಹ ಸರ್ಕಾರ, ಮಾನ್ಯ ಎಸ್.ಎಂ. ಕೃಷ್ಣ ಸರ್ಕಾರ ಕೂಡ ಬೇಕಾದಷ್ಟು ಸಹಾಯ ಮಾಡಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದಾಗ ಅಲ್ಲಿ ಅವರಿಗೆ ಆ ಜಾಗವನ್ನು ಕೊಟ್ಟಿದ್ದು. ಅದನ್ನು ತೆಗೆದುಕೊಂಡು ಅವರು ಧಾರ್ಮಿಕ ಕೆಲಸಗಳನ್ನು ಮಾಡುವುದು ಬಿಟ್ಟು ಈ ಕೆಲಸಕ್ಕೆ ಏಕೆ ಬಂದರು? ನಮ್ಮ ಮಕ್ಕಳನ್ನು ತೋರಿಸಿ ಬಿಟ್ಟು ದುಡ್ಡು ತೆಗೆದುಕೊಂಡು ಸ್ವಾರ್ಥ ಮಾಡಿಕೊಳ್ಳುವುದಕ್ಕಾ? ಈ ಅಪರಾಧ ಇದೆಯಲ್ಲ ಈ ಅಪರಾಧಕ್ಕೆ ಶಿಕ್ಷೆ ಆಗಲೇಬೇಕು. ಆ ಶಿಕ್ಷೆ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು ಮತ್ತು ಸದನ ಸಮಿತಿಯಿಂದ ತನಿಖೆಯನ್ನು ಕೂಡ ಮಾಡಿಸಬೇಕು. ಇದರ ಬಗ್ಗೆ ಸದನ ಸಮಿತಿ ಮಾಡಿ, ಆ ಸಮಿತಿ ಇದರ ಬಗ್ಗೆ ಆಳವಾಗಿ ತನಿಖೆ ಮಾಡಿ ವರದಿ ಕೊಡುವಂತಹ ಕೆಲಸವನ್ನು ಮಾಡಬೇಕು. ಆಮೇಲೆ ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ ಎನ್ನುವುದನ್ನು ಒತ್ತಾಯ ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ನರೇಂದ್ರಬಾಬುರವರೇ ತಾವು ಮಾತನಾಡುತ್ತೀರಾ? ನಿಮ್ಮ ನಾಯಕರು ಮಾತನಾಡಿದ್ದೀರಲ್ಲ ಸಾಕು ಬಿಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತೇನೆ.

ಅಧ್ಯಕ್ಷರು: ನೋಡಿ ಜಯಚಂದ್ರರವರೇ ಎಲ್ಲರೂ ಮಾತನಾಡಿದರೆ ಹೇಗೆ? ನನ್ನ ಮನವಿ ಏನೆಂದರೆ ಇವತ್ತಿನವರೆಗೂ ಬಜೆಟ್ ಮೇಲೆ ಚರ್ಚೆ ಪ್ರಾರಂಭವಾಗಿಲ್ಲ. ಈಗ ಎಲ್ಲಾ ನಾಯಕರು ಮಾತನಾಡಿದರೆ ಹೇಗೆ? ಎಲ್ಲಾ

ಮಾತನಾಡಿ, ಆದರೆ ಬಜೆಟ್ ಮೇಲೆ ಚರ್ಚೆ ಬೇಡ ಎಂದರೆ ಬಿಟ್ಟುಬಿಡೋಣ. ಇನ್ನೂ ನಿಯಮ 69ರಲ್ಲಿ ಎರಡು ವಿಷಯಗಳು ಇವೆ. ಅವುಗಳು ಮುಗಿಯಬೇಕು.

ಶ್ರೀ ಟಿ.ಬಿ. ಜಯಚಂದ್ರ: ಇವತ್ತು 9.00 ಗಂಟೆಯವರೆಗೂ ಚರ್ಚೆ ಮಾಡೋಣ.

ಅಧ್ಯಕ್ಷರು: ಮಾಡಿ, ಆದರೆ ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಲಿಲ್ಲವಲ್ಲ. ಇನ್ನು ನಿಯಮ 69ರಲ್ಲಿ ಎರಡು ವಿಷಯಗಳು ಇವೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್‌ರವರು ಸಾಕಷ್ಟು ರೀತಿಯಲ್ಲಿ ಅಧ್ಯಯನ ಮಾಡಿ ತಮ್ಮ ಮನಸ್ಸನ್ನು ಒಲಿಸಿದ್ದಾರೆ ಮತ್ತು ಸರ್ಕಾರವನ್ನು ಒಲಿಸುವಂತಹ ಪ್ರಯತ್ನವನ್ನು ಕೂಡ ಮಾಡಿದ್ದಾರೆ. ನಾನು ಇದರ ಬಗ್ಗೆ ಹೆಚ್ಚು ವಿಚಾರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಾರ್ವಜನಿಕವಾಗಿ ಇಸ್ಕಾನ್ ಎಂದರೆ ಎಲ್ಲರಿಗೂ ಗೊತ್ತಿರುವುದು ಏನೆಂದರೆ, ಅದು ಒಂದು ಧಾರ್ಮಿಕವಾಗಿರುವಂತಹ ಒಂದು ಸಂಸ್ಥೆ, ಧಾರ್ಮಿಕವಾದಂತಹ ವಿಚಾರದಲ್ಲಿ ದೇವಸ್ಥಾನ ಕಟ್ಟತಕ್ಕಂಥಾದ್ದಿರಬಹುದು. ಇಸ್ಕಾನ್ ದೇವಸ್ಥಾನ ಇಲ್ಲಿಯೇ ಅಲ್ಲ, ಅವರು ಯಾವುದೇ ದೇವಸ್ಥಾನದ ಜೊತೆಗೆ ಚಟುವಟಿಕೆಗಳು ಯಾವುದೇ ಅದರೂ ಕೂಡ ಧಾರ್ಮಿಕ ಭಾವನೆಯನ್ನು ತರುವಂತಹ ರೀತಿಯಲ್ಲಿ ಚಟುವಟಿಕೆಯನ್ನು ಮಾಡುತ್ತಾರೆ ಎನ್ನುವ ಭಾವನೆ ಇತ್ತು. ಈಗ ಏನಾಗಿದೆ ಎಂದರೆ ಈ ನಿಲುವಳಿ ಸೂಚನೆ ಮುಖೇನ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಮಾನ್ಯ ಶಿವಕುಮಾರ್‌ರವರು ಪ್ರಯತ್ನ ಪಟ್ಟರು ಕೆಲವು ಸತ್ಯಾಂಶ ಮಾಧ್ಯಮಗಳ ಮೂಲಕ ಹೊರಗಡೆ ಹೋಗುತ್ತದೆ. ಅದರಿಂದ ಯಾರಿಗೂ ಕೂಡ ನಷ್ಟವಾಗಬಾರದು, ಸತ್ಯಾಂಶ ಈಚೆ ಬರಬೇಕು. ಇದರಲ್ಲಿ ಏನಾಗಿದೆ ಎಂದು ಹೇಳಿದರೆ ಸರ್ಕಾರ ಒಂದು ಮಹತ್ತರವಾದ ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ರೂ. 2.32 ಪೈಸೆಯನ್ನು ಪ್ರತಿಯೊಬ್ಬರಿಗೂ ಕೊಡುತ್ತದೆ. ಅದು ಅದಮ್ಯ ಚೇತನ ಆಗಬಹುದು, NGO ಆಗಬಹುದು ಅಥವಾ ISKCON ಆಗಬಹುದು, ಯಾರಿಗಾದರೂ ಕೂಡ ಒಂದೇ ಬೆಲೆಗೆ ಕೊಡುವಂತಾದ್ದಿದೆ. ಆದರೆ ವಾಸ್ತವಿಕವಾಗಿ ಸರ್ಕಾರದ ನಿಯಮ ಏನಿದೆ, ಆ ಪ್ರಕಾರ ಆಹಾರದಲ್ಲಿ 400 ಕ್ಯಾಲೊರಿ ಮಾತ್ರ ಇರಬೇಕು ಎಂದಿದೆ, ಅದಕ್ಕಿಂತ ಜಾಸ್ತಿ ಕ್ಯಾಲೊರಿ ಕೊಡುತ್ತೇವೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ, ಅವರು ಆ ರೀತಿ ಕೊಡುತ್ತಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಗೆ ಉತ್ತರ

ಬಂದಿರುವುದು ಒಬ್ಬ ವಿದ್ಯಾರ್ಥಿಗೆ ಮಧ್ಯಾಹ್ನದ ಬಿಸಿಯೂಟಕ್ಕೆ ಎಷ್ಟು ಖರ್ಚು ಬರುತ್ತದೆಯೆಂದರೆ 4.50 ಪೈಸೆ ಎಂದಿದೆ. ಸರ್ಕಾರ 2.32 ಪೈಸೆ ಮಹಾನಗರ ಪಾಲಿಕೆಯವರು 4.50 ಪೈಸೆ ಕೊಡುತ್ತಿದ್ದಾರೆ. ಏಕೆ ಈ ವ್ಯತ್ಯಾಸ ಎಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಲಿ. ಒಂದು ವಿಚಾರ ನನ್ನ ಮನಸ್ಸಿಗೆ ಬಹಳ ಬೇಜಾರಾಗಿತ್ತು ಎಂದರೆ ಇಂತಹ ಕಾರ್ಯಕ್ರಮವನ್ನು ಮಾಡಬೇಕಾದಾಗ ಸ್ವಲ್ಪ ಮಟ್ಟಿಗೆ out of the way ಮಾಡಿದ್ದಾರೆ ಎಂದು ಅಲ್ಲ. ಕೇಂದ್ರ ಸರ್ಕಾರದಲ್ಲಿ ಒಂದು ಅವಕಾಶ ಇದೆ. ಈ ಕಾರ್ಯಕ್ರಮಗಳನ್ನು ಮಾಡಬೇಕೆಂದರೆ NGOಗಳಿಗೆ ಕೊಡಿ. ಆದರೆ ಎಂತಹ NGO ಎಂದರೆ Non Profit Organization ಎಂದಿದೆ. ನಾವು ಇಲ್ಲಿಯವರೆಗೆ ಇಸ್ಕಾನ್ Non Profit Organization ಎಂದು ತಿಳಿದುಕೊಂಡಿದ್ದೆವು. ಆದರೆ ಇವತ್ತು ಏನಾಗಿದೆ? ಇವತ್ತು ಅವರು ಮಾಡುತ್ತಿರುವುದು ಏನೆಂದರೆ ಕೇವಲ ಇದು ನಮ್ಮ ದೇಶದೊಳಗೆ ಅಲ್ಲ, ಹೊರದೇಶದಲ್ಲೂ ಕೂಡ ನಮ್ಮ ಬಗ್ಗೆ ಅನುಮಾನ ಮಾಡುವಂತಹ ರೀತಿಯಲ್ಲಿ ಕಾರ್ಯಕ್ರಮವನ್ನು ಮಾಡಿ, ಆ ಕಾರ್ಯಕ್ರಮದ ಮುಖೇನ ಬಿಂಬಿಸುತ್ತಿದ್ದಾರೆ ಎಂದು ಹೇಳುವುದಾದರೆ ಇದಕ್ಕೆ ನಾವು ಸುಮ್ಮನೆ ಇರಬೇಕೇ? ಈಗಾಗಲೇ ಒಂದು palmphlet ಅನ್ನು ಕೊಟ್ಟರು, ಅದು ಯಾವುದೆಂದರೆ 'Vision of Akshaya Patra Foundation', ಅದರ ಕೆಳಗೆ 'I hav wished to die soon'. ಅದರಲ್ಲಿರುವುದು ಭಾರತೀಯ ಹೆಣ್ಣು ಮಗು, ನಮ್ಮ ಹಳ್ಳಿಯಲ್ಲಿ ಹೇಳುತ್ತಾರಲ್ಲ ಲೋಲಾಕು ಎಂದು ಅದು ಆ ಮಗುವಿನ ಕಿವಿಯಲ್ಲಿ ಇದೆ. ಬೇರೆ ದೇಶದಲ್ಲಿ ಯಾರೂ ಕೂಡ ಕಿವಿಯಲ್ಲಿ ಲೋಲಾಕು ಹಾಕಿಕೊಳ್ಳುವುದಿಲ್ಲ. ಇದನ್ನು ಹಾಕಿಕೊಂಡಿರುವುದನ್ನು ತೋರಿಸಿದಾಗ ಯಾರೂ ಬೇಕಾದರೂ ಭಾರತೀಯ ಹೆಣ್ಣುಮಗಳು ಎಂದು ಕಂಡುಹಿಡಿಯಬಹುದು. ಅದರ ಜೊತೆಗೆ ಅಕ್ಷಯ ಪಾತ್ರೆಯ ಬಗ್ಗೆ ಕ್ಯಾಸೆಟ್‌ನಲ್ಲಿ 'Unlimited food for education. Feeding a hungry child is not a charity, it is our social responsibility.' ಈ pamphlet ನಲ್ಲಿ ಇರುವುದಕ್ಕೂ ಈ cassette ನಲ್ಲಿ ಇರುವುದಕ್ಕೂ ಎಷ್ಟು ವ್ಯತ್ಯಾಸ ಇದೆ ಎನ್ನುವುದನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಡಿ.ಕೆ. ಶಿವಕುಮಾರ್: ಆ ಸಿಡಿಯಲ್ಲಿ ಇರುವಂತಹ first photoನೇ ಇದು.

ಶ್ರೀ ಟಿ.ಬಿ. ಜಯಚಂದ್ರ: ಸಿಡಿ ನೋಡಿದ ಮೇಲೆ ಗೊತ್ತಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್: ಎಲ್ಲೂ ಸರ್ಕಾರದ ಹೆಸರಿಲ್ಲ, Central Government, State Government, ಹೆಸರಿಲ್ಲ, the first photo of the CD is that photo.

ಶ್ರೀ ಟಿ.ಬಿ. ಜಯಚಂದ್ರ: ಇದು ಏನಾಗಿದೆ ಎಂದರೆ ಇಸ್ಕಾನ್ ಸಂಸ್ಥೆ ಧಾರ್ಮಿಕವಾದಂತಹ ವಿಚಾರಗಳನ್ನು ಬಿಟ್ಟು ದುಡ್ಡು ಮಾಡುವುದಕ್ಕೆ ಹೊರಡಿದೆ ಎನ್ನುವ ಬಗ್ಗೆ ಸಾಕಷ್ಟು ಮಾಹಿತಿಯನ್ನು ಕೊಟ್ಟಿದ್ದಾರೆ. ಅಪಾರ್ಟ್‌ಮೆಂಟ್‌ಗಳಲ್ಲಿ invest ಮಾಡಿದ್ದಾರೆ, real estate ದಂಧೆಯಲ್ಲಿ invest ಮಾಡಿದ್ದಾರೆ. ಆದರೆ ಒಂದು Charitable Trust ಆಗಿ ಇವತ್ತು ಒಂದು ಸಾರ್ವಜನಿಕ ಉದ್ದೇಶಕ್ಕೆ ಹಣವನ್ನು collect ಮಾಡಿ ಈ ರೀತಿ commercial activityಗೆ ಕೊಡುವುದಕ್ಕೆ ಸಾಧ್ಯವೇ ಎನ್ನುವಂತಾದ್ದು ಕೂಡ ಬಹಳ ಮಹತ್ವವಾದಂತಹ ಹಾಗೂ ಮುಖ್ಯವಾದಂತಹ ವಿಚಾರ. ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗದೆ ಇದರ ಬಗ್ಗೆ ಒಂದು ತಪ್ಪು ಗ್ರಹಿಕೆ ಆಗಬಾರದು. ಇವತ್ತು ಇಸ್ಕಾನ್ ಸಂಸ್ಥೆ ದೇವರ ಹೆಸರಿನಲ್ಲಿ ದುಡ್ಡು ಮಾಡುವುದಕ್ಕೆ ಹೊರಟಿದೆ. ದೇವರ ಹೆಸರಿನಲ್ಲಿ ರಾಜಕೀಯ ಮಾಡುತ್ತಾರೆ, ದುಡ್ಡು ಮಾಡುತ್ತಾರೆ. ಇವರು ದುಡ್ಡು ಮಾಡುತ್ತಿದ್ದಾರೆ. ಇವರು ಇನ್ನು ರಾಜಕೀಯಕ್ಕೆ ಬಂದಿಲ್ಲ. ನಾನು ಹೇಳುವುದು ಏನೆಂದರೆ ಇದಕ್ಕೆ ಒಂದು ಸದನದ ಸಮಿತಿಯನ್ನು ಮಾಡಿ ಸತ್ಯಾಸತ್ಯತೆಯನ್ನು ಕಂಡು ಹಿಡಿಯುವುದು ಮತ್ತು ಜನಗಳಿಗೂ ಕೂಡ ಯಾವುದೋ ಒಂದು ಸಂಸ್ಥೆಯ ಮೇಲೆ ಆರೋಪ ಬರುವ ಹಾಗೆ ಆಗಬಾರದು. ಅದನ್ನು ಕಂಡು ಹಿಡಿಯುವುದಕ್ಕೋಸ್ಕರ ಸದನದ ಸಮಿತಿಯನ್ನು ಮಾಡಿ, ಸಂಪೂರ್ಣವಾದ ಮಾಹಿತಿಯನ್ನು ತಂದು ಅದರ ಮೇಲೆ ಏನು ಅವ್ಯವಹಾರವಾಗಿದೆ, ನಮ್ಮ ದೇಶಕ್ಕೆ ಎಷ್ಟು ಅವಮಾನ ಮಾಡಿದ್ದಾರೆ? Income Tax exemption ನಿಂದ ಯಾವ ರೀತಿ ದುರುಪಯೋಗ ಮಾಡಿದ್ದಾರೆ ಎನ್ನುವುದನ್ನು ಸಮಿತಿಯ ವರದಿ ಬಂದ ನಂತರ ಅವರ ಮೇಲೆ action institute ಮಾಡುವುದು ಒಳ್ಳೆಯದಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಹೆಚ್.ಪಿ. ಮಂಜುನಾಥ್ (ಹುಣಸೂರು): ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯ ನಾಯಕರು ಇಸ್ಕಾನ್ ಸಂಸ್ಥೆ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ, ಇದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಈ ಸಂಸ್ಥೆ 1985ರಲ್ಲಿ ಅಂದಿನ ಮುಖ್ಯಮಂತ್ರಿಗಳಾದಂತಹ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು 20

ಎಕರೆ ಜಮೀನನ್ನು ಮಂಜೂರಾತಿ ಮಾಡುತ್ತಾರೆ. ಅಂದು ಪ್ರಾರಂಭವಾದಂತಹ ಈ ಸಂಸ್ಥೆ ಸುಮಾರು 200 ಎಕರೆಗಿಂತ ಹೆಚ್ಚು ಜಮೀನನ್ನು ಸರ್ಕಾರದ ಗೋಮಾಳ ಪ್ರದೇಶದ ವ್ಯಾಪ್ತಿಯಲ್ಲಿ ಆ ಸಂಸ್ಥೆಯನ್ನು ಅವರು ಅಭಿವೃದ್ಧಿ ಪಡಿಸಿದ್ದಾರೆ. ಅದು ಕಾವೇರಿ ನದಿ ದಡದಲ್ಲಿದೆ. ಮೈಸೂರಿಗೆ ಕೇವಳ ಎಂಟು ಅಥವಾ ಒಂಬತ್ತು ಕಿಲೋಮೀಟರ್ ದೂರದಲ್ಲಿದೆ. ಅದು ಅತ್ಯಂತ ಪ್ರಶಸ್ಥವಾದ ಸ್ಥಳ. ಅದನ್ನೇ ನಂಬಿಕೊಂಡು ಸುಮಾರು 200–300 ಕುಟುಂಬಗಳು ಏನು ಜೀವನ ಮಾಡುತ್ತಿದ್ದವು ಮಹದೇವಪುರ ಮತ್ತು ಸುತ್ತಮುತ್ತಲ ಗ್ರಾಮದ ಜನರನ್ನು ಅವರು ಒಕ್ಕಲೆಬ್ಬಿಸಿ ಸುಮಾರು 200 ಎಕರೆ ಬೌಂಡರಿಗೆ fence ಹಾಕಿಕೊಂಡಿದ್ದಾರೆ. ದಯಮಾಡಿ ಸರ್ಕಾರದ ಗೋಮಾಳ ಜಮೀನು ಏನಿದೆ, ಅದನ್ನು ಬಿಡಿಸಿಕೊಳ್ಳಬೇಕು. ಅಲ್ಲಿ ರೈತರು ಏನು ಆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಅದನ್ನು ಅವರಿಂದ ವಾಪಸ್ಸು ಕೊಡಿಸಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಇದರ ಜೊತೆಗೆ ಹಿಂದಿನ ಸರ್ಕಾರದವರು ವಿದ್ಯುತ್ ಉತ್ಪಾದನೆಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಇವತ್ತು ಆ ಸಂಸ್ಥೆಯವರು ವಿದ್ಯುತ್ ಅನ್ನು ಉತ್ಪಾದನೆಯನ್ನು ಮಾಡಬಾರದೆಂದು objection ಹಾಕಿದ್ದಾರೆ. ಈ ಬಗ್ಗೆ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ದಯಮಾಡಿ ನಮ್ಮ ಭಾಗದ ರೈತರಿಗೆ ಏನು ಅನ್ಯಾಯವಾಗಿದೆ. ಅಲ್ಲಿ ಬಹಳಷ್ಟು ಚಳುವಳಿಯ ಮುಖಾಂತರ ಹೋರಾಟದ ದಿಕ್ಕಿನಲ್ಲಿ ಹೆಜ್ಜೆಯನ್ನು ಹಾಕಿದ್ದಾರೆ. ಸುಮಾರು ರೈತ ಪರ ಸಂಘಟನೆಗಳು ಈ ಹಿಂದೆ ಸರ್ಕಾರದ ಗಮನಕ್ಕೆ ತಂದಿದೆ. ದಯಮಾಡಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಯ ಮಾಡುವುದೇನೆಂದರೆ ಈ ಸರ್ಕಾರದ ಗೋಮಾಳ ಜಮೀನನ್ನು ವಾಪಸ್ಸು ಪಡೆದುಕೊಂಡು ಅದನ್ನು ರೈತರಿಗೆ ವಾಪಸ್ಸು ಕೊಡುವ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರು ರೈತರ ಪರ ಸರ್ಕಾರವೆಂದು ಏನು ಪದೇ ಪದೇ ಹೇಳುತ್ತಾರೋ, ಆ ದಿಕ್ಕಿನಲ್ಲಿ ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಂಬ ಆಶಾಭಾವನೆಯಿಂದ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ನಿಯಮ 60ರ ಅಡಿಯಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಇಸ್ಕಾನ್ ಸಂಸ್ಥೆಯವರು ಅಕ್ಷಯ ಪಾತ್ರೆ ಯೋಜನೆ ಅಡಿಯಲ್ಲಿ ಈ ಯೋಜನೆಯನ್ನು ಹೇಗೆ ಅನುಷ್ಠಾನಗೊಳಿಸುತ್ತಿದ್ದಾರೆ. ಇದರಿಂದ ಯಾವ್ಯಾವ ರೀತಿಯ ತೊಂದರೆಗಳು, ತೊಡಕುಗಳು

ಆಗಿವೆಯೆಂಬುದನ್ನು ವಿಸ್ತಾರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಡಿ.ಕೆ. ಶಿವಕುಮಾರ್‌ರವರು ಮತ್ತು ಇನ್ನು ಕೆಲವು ಸದಸ್ಯರೆಲ್ಲರೂ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ವಿಸ್ತಾರವಾಗಿ, ವಿವರವಾಗಿ ಮಾತನಾಡುವುದಕ್ಕೆ ಬಯಸುವುದಿಲ್ಲ. ತಾವು ಸಾಕಷ್ಟು ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಕುರಿತಂತೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಹ ಕೆಲವು ವಿಷಯಗಳನ್ನು ಪ್ರಸ್ತಾಪಿಸುವವರಿದ್ದಾರೆ. ಅದರೆ ಒಂದು ಮಾತನ್ನು ಈ ಸದನದಲ್ಲಿ ತರಬಯಸುವುದೇನೆಂದರೆ 2001ರಲ್ಲಿ ಸುಪ್ರೀಂ ಕೋರ್ಟ್ ಒಂದು ಆದೇಶವನ್ನು ಕೊಟ್ಟು ನಂತರ ಅವತ್ತಿನ ಕೇಂದ್ರದಲ್ಲಿದ್ದಂಥ ಎನ್.ಡಿ.ಎ. ಸರ್ಕಾರದಲ್ಲಿ ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಈ ಯೋಜನೆಗೆ ಒಂದು ಚಾಲನೆ ದೊರೆಯಿತು. ಅನೇಕ ರಾಜ್ಯಗಳು ಈ ಆದೇಶವನ್ನು ಪಾಲಿಸುವುದಕ್ಕೆ ಪ್ರಾರಂಭಿಸಿರಲಿಲ್ಲ. ನಮ್ಮ ಕರ್ನಾಟಕ ರಾಜ್ಯ ಮೊದಲಾಗಿ 2002–03ರಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಆಡಳಿತವನ್ನು ನಡೆಸುತ್ತಿರುವ ಸಂದರ್ಭದಲ್ಲಿ ನಮ್ಮ ರಾಜ್ಯದ 7 ಈಶಾನ್ಯ ಜಿಲ್ಲೆಗಳಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಮೊದಲನೇ ವರ್ಷ ಈ ಊಟದ ಯೋಜನೆ ಪ್ರಾರಂಭವಾಯಿತು. ಕೇಂದ್ರ ಸರ್ಕಾರ ಮೇಲಿಂದ ಮೇಲೆ ಈ ಯೋಜನೆಯನ್ನು ವಿಸ್ತಾರಗೊಳಿಸಬೇಕೆಂಬ ಆಗ್ರಹವನ್ನು ಮಾಡುತ್ತಾ ಇದ್ದಾಗ, 2003–04ರಲ್ಲಿ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಎಲ್ಲಾ ಸರ್ಕಾರಿ ಶಾಲೆಗಳಲ್ಲೂ ಈ ಬಿಸಿ ಊಟದ ಯೋಜನೆಯನ್ನು ಪ್ರಾರಂಭ ಮಾಡಿದೆವು. ಆನಂತರ ಸೆಪ್ಟೆಂಬರ್ 4ರಂದು ಮತ್ತೊಮ್ಮೆ ಸುಪ್ರೀಂ ಕೋರ್ಟ್ ಇದನ್ನು ಕಡ್ಡಾಯವಾಗಿ ಜಾರಿಗೊಳಿಸದೇ ಹೋದರೆ ರಾಜ್ಯ ಸರ್ಕಾರಗಳ ಮೇಲೆ ಕಠಿಣವಾದ ಕ್ರಮಗಳನ್ನು ಸೂಚಿಸಬೇಕಾಗುತ್ತದೆಂಬ ಮಾತನ್ನು ಹೇಳಿತು. ಆಗ ದೇಶದ ಎಲ್ಲಾ ರಾಜ್ಯಗಳು ಇದನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಿದವು. ಇದರಿಂದಾಗಿ 2004–05ರಲ್ಲಿ ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳಲ್ಲಿ 1ನೇ ತರಗತಿಯಿಂದ 7ನೇ ತರಗತಿಯವರೆಗೆ ಎಲ್ಲಾ ಮಕ್ಕಳಿಗೆ ಬಿಸಿ ಊಟವನ್ನು ಕೊಡುವುದಕ್ಕೆ ಪ್ರಾರಂಭ ಆಯಿತು. ನಂತರ 2007–08ನೇ ಸಾಲಿನಲ್ಲಿ ನಮ್ಮ ರಾಜ್ಯ ಸರ್ಕಾರದಲ್ಲಿ ನಾವು ಎಲ್ಲಾ ಹೈಸ್ಕೂಲಿನ ಮಕ್ಕಳಿಗೂ ಈ ಊಟವನ್ನು ಕೊಡುವುದಕ್ಕೆ ಪ್ರಾರಂಭಿಸಿದೆವು. ಇವತ್ತು ನಮಗೆ ಕೇಂದ್ರ ಸರ್ಕಾರ ಕೇವಲ 8ನೇ ತರಗತಿಯವರೆಗೆ ಮಾತ್ರ ಸಹಾಯ ಮಾಡುತ್ತಿರುವಂಥಾದ್ದು, ನಾವು ರಾಜ್ಯ ಸರ್ಕಾರದಿಂದ 9 ಮತ್ತು

10ನೇ ತರಗತಿಯವರೆಗೆ ಹಣವನ್ನು ಭರಿಸಿಕೊಂಡು ಬಿಸಿ ಊಟದ ಯೋಜನೆಯನ್ನು ನಡೆಸುತ್ತಿರುವಂಥಾದ್ದು ನಮಗೆಲ್ಲರೂ ಗೊತ್ತಿರುವಂಥ ಸಂಗತಿಯಾಗಿದೆ. ಇದು ಬಹಳ ದೊಡ್ಡ ಯೋಜನೆಯಾಗಿದೆ. ನಮಗೆಲ್ಲಾ ಗೊತ್ತಿರುವಂತೆ ಬಹಳ ವಿಸ್ತಾರವಾದಂಥ ಯೋಜನೆಯು ಇದೆ. ಇದು ಸುಮಾರು 69,26,000 ಮಕ್ಕಳು ಪ್ರತಿ ನಿತ್ಯ ಈ ಬಿಸಿಯೂಟವನ್ನು ಮಾಡುತ್ತಿದ್ದಾರೆ. ಇವತ್ತು 40,271 ಶಾಲಾ ಕೇಂದ್ರಗಳಲ್ಲಿ ಈ ಬಿಸಿಯೂಟ ನಡೆಯುತ್ತಿದೆ. ಅಡಿಗೆ ಮಾಡುವವರು 1,03,000ಕ್ಕಿಂತ ಹೆಚ್ಚು ಜನರು ಈ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಿಸಿಯೂಟದ ಯೋಜನೆಯನ್ನು ಬಹಳ ಪರಿಣಾಮಕಾರಿಯಾಗಿ, ಬಹಳ ಫಲಪ್ರದವಾಗಿ ಅನುಷ್ಠಾನಗೊಳಿಸುತ್ತಿದ್ದೇವೆ. ಇದರಿಂದಾಗಿ ಸರ್ಕಾರದ ಮೂಲ ಉದ್ದೇಶ ಏನು ಇದೆ ಅಥವಾ ಸುಪ್ರೀಂ ಕೋರ್ಟಿನ ನಿರ್ದೇಶನ ಏನು ಇದೆ. ನಾವು ಈ ಬಿಸಿ ಊಟವನ್ನು ಜಾರಿಗೆ ತರುವುದರಿಂದ ಮಕ್ಕಳ ಹಾಜರಾತಿಯಲ್ಲಿ, ದಾಖಲಾತಿಯಲ್ಲಿ ಉತ್ತಮವಾಗುತ್ತದೆ. ಶಾಲೆಯನ್ನು ಮಧ್ಯಂತರದಲ್ಲಿ ಬಿಡುವುದಕ್ಕೆ ತೊಂದರೆಯಾಗುತ್ತದೆ, ಪೌಷ್ಠಿಕಾಂಶವನ್ನು ಹೆಚ್ಚಿಸುವುದಕ್ಕೆ ಅನುಕೂಲವಾಗುತ್ತದೆ, ಕಲಿಕಾ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಚೆನ್ನಾಗಿ ಆಗುತ್ತದೆ, ಇತ್ಯಾದಿಗಳು ಮುಖ್ಯ ಅಂಶಗಳು ಏನು ಇದೆ. ಇದನ್ನು ಈಡೇರಿಸುವುದಕ್ಕೆ ನಮಗೆ ಒಂದು ಪ್ರಮುಖವಾದ ಸಾಧನ ಈ ಬಿಸಿಯೂಟದ ಯೋಜನೆ ಆಗಿದೆ. ಇದು ಬಹಳ ಚೆನ್ನಾಗಿ ನಡೆಯುತ್ತಿದೆ. ರಾಜ್ಯದ ಬಿಸಿಯೂಟದ ಯೋಜನೆ ಬಗ್ಗೆ ಇಡೀ ದೇಶದಲ್ಲೇ ಹೆಮ್ಮೆ ಪಡುವಂಥ ಸಂದರ್ಭ, ಒಂದು ಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನಮ್ಮ 111 ಎನ್.ಜಿ.ಒ.ಗಳು ನಮ್ಮ ರಾಜ್ಯದಲ್ಲಿ ಒಟ್ಟು ಹನ್ನೊಂದು ಲಕ್ಷ ಮಕ್ಕಳಿಗೆ ಊಟವನ್ನು ಕೊಡುತ್ತಿವೆ. ಅದರಲ್ಲಿ ಇಸ್ಕಾನ್ 3,67,000 ಮಕ್ಕಳಿಗೆ ಊಟವನ್ನು ಕೊಡುತ್ತಿದೆ. ಈ ಅಕ್ಷಯ ಪಾತ್ರೆ ಯೋಜನೆ ಏನು ಇದೆ. ಇದು ದೇಶದಲ್ಲಿ ಅನೇಕ ರಾಜ್ಯಗಳಲ್ಲಿ ಮತ್ತು ಅನೇಕ ಜಿಲ್ಲೆಗಳಲ್ಲಿ ಇಸ್ಕಾನ್‌ನವರು ನಡೆಸುತ್ತಿರುವಂಥ ಒಂದು ಯೋಜನೆಯಾಗಿದೆ. ನಮ್ಮ ರಾಜ್ಯದಲ್ಲೂ ಇಸ್ಕಾನ್‌ನವರು ಜೊತೆಯಲ್ಲಿ ನಮ್ಮ ಯೋಜನೆಯನ್ನು ಅವರು ಅನುಷ್ಠಾನಗೊಳಿಸುವಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅವರು ದೇಶದ ಅನೇಕ ಕಡೆಗಳಲ್ಲಿ ಅಕ್ಷಯ ಪಾತ್ರೆ ಯೋಜನೆಯನ್ನು ಅನುಷ್ಠಾನ ಗೊಳಿಸುತ್ತಿದ್ದಾರೆ. ನಾವು ಬಿಸಿಯೂಟಕ್ಕೆ ಎಷ್ಟು ಕೊಡುತ್ತಿದ್ದೇವೆಂಬ ಬಗ್ಗೆ ಎಲ್ಲವೂ ಚರ್ಚೆಯಾಗಿದೆ. ಎಲ್ಲರೂ ಈ ವಿಷಯವನ್ನು ಹೇಳಿದ್ದಾರೆ. ಅದರೆ ನಾವು ಈ

ಎನ್.ಜಿ.ಓ.ಗಳಿಗೆ 2 ರೂ. 20 ಪೈಸೆಯಂತೆ ಹೈಸ್ಕೂಲಿನ 9 ಮತ್ತು 10ನೇ ತರಗತಿಯ ಮಕ್ಕಳಿಗೆ ಕೊಡುತ್ತಿದ್ದೇವೆ ಮತ್ತು 150 ಗ್ರಾಂ ಅಕ್ಕಿಯನ್ನು ಕೊಡುತ್ತಿದ್ದೇವೆ. ಅದಕ್ಕಿಂತ ಮೊದಲು 1ನೇ ತರಗತಿಯಿಂದ 7ನೇ ತರಗತಿಯವರೆಗಿನ ಮಕ್ಕಳಿಗೆ ಎನ್.ಜಿ.ಓಗಳಿಗೆ 1 ರೂ. 80 ಪೈಸೆಯಂತೆ ಕೊಡುತ್ತಿದ್ದೇವೆ ಮತ್ತು 1ನೇ ತರಗತಿಯಿಂದ 5ನೇ ತರಗತಿಯವರೆಗೆ 100 ಗ್ರಾಂ ಅಕ್ಕಿ, 6 ರಿಂದ 8ನೇ ತರಗತಿಯವರೆಗೆ 150 ಗ್ರಾಂ ಅಕ್ಕಿ, ಈ ರೀತಿಯಲ್ಲಿ ಕೊಡುತ್ತಿದೆ. ಇದರಲ್ಲಿ 2 ರೂ. 20 ಪೈಸೆ ಮತ್ತು 150 ಗ್ರಾಂ ಅಕ್ಕಿಯನ್ನು ಸಾಮಾನ್ಯವಾಗಿ ಹೈಸ್ಕೂಲ್ ಮಕ್ಕಳಿಗೆ ನಾವು ಕೊಡುತ್ತಿದ್ದೇವೆಂಬ ಮಾಹಿತಿ ನಮ್ಮೆಲ್ಲದ ಹತ್ತಿರ ಇದೆ. ಇದು ಬಹಳ ದೊಡ್ಡ ಯೋಜನೆ ಇರುವುದರಿಂದ ಕೇಂದ್ರ ಸರ್ಕಾರದಿಂದ 217 ಕೋಟಿ ರೂಪಾಯಿಗಳು ಮತ್ತು ರಾಜ್ಯ ಸರ್ಕಾರದಿಂದ 162 ಕೋಟಿ ರೂಪಾಯಿಗಳು ಒಟ್ಟು 379 ಕೋಟಿ ರೂಪಾಯಿಗಳ ಬಿಸಿ ಊಟದ ಯೋಜನೆಗಾಗಿ ನಾವು ಖರ್ಚು ಮಾಡುತ್ತಿದ್ದೇವೆ. ಈಗಾಗಲೇ ಈ ಬಿಸಿಯೂಟದ ಯೋಜನೆ ಬಗ್ಗೆ ಹಿಂದಿನ ಸದನದಲ್ಲೂ ಸಹ ಒಂದು ಚರ್ಚೆಯಾಗಿತ್ತು. ಇದು ನಮಗೆಲ್ಲರಿಗೂ ಗೊತ್ತಿದೆ. ಅದು ಆದ ನಂತರದಲ್ಲಿ ಇಸ್ಕಾನ್ ನಡೆಸುತ್ತಿರುವಂಥ ಅಕ್ಷಯ ಪಾತ್ರೆ ಪ್ರತಿಷ್ಠಾನದಲ್ಲಿ ಅವ್ಯವಹಾರ ಆದಂಥ ಸಂದರ್ಭದಲ್ಲಿ ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷರಾದ ಶ್ರೀಯುತ ವೆಂಕಟಸ್ವಾಮಿಯವರು ಒಂದು ದೂರನ್ನು ನೀಡಿದರು. ಆ ದೂರನ್ನು ತನಿಖೆ ಮಾಡಿದ ವರದಿಯೂ ಇದೆ. ಅಲ್ಲದೇ ನಮ್ಮ ಇಲಾಖೆಯ ಒಂದು ಅಭಿಪ್ರಾಯದಂತೆ ಇಸ್ಕಾನ್ ಬಿಸಿ ಊಟದ ಯೋಜನೆಯಲ್ಲಿ ನಮ್ಮ ಸರ್ಕಾರದ ಹಣವನ್ನು ಸದುಪಯೋಗ ಪಡಿಸಿಕೊಂಡಿರುವುದರ ಬಗ್ಗೆ ಸ್ಪಷ್ಟತೆ ಇದೆ. ನಮಗೆ ಅದು ಎಲ್ಲೂ ದುರುಪಯೋಗ ಆಗಿದೆಯೆಂಬ ಬಗ್ಗೆ ತಾವು ಮಾತನಾಡುವಾಗ ಯಾರು ಹೇಳಲಿಲ್ಲ, ನಾವು ಯಾರು ಆ ಅಭಿಪ್ರಾಯವನ್ನು ಹೊಂದಿಲ್ಲ. ಈಗ ಪ್ರಶ್ನೆ ಇರುವಂಥಾದ್ದು ನಮ್ಮ ಈ ಬಿಸಿಯೂಟದ ಯೋಜನೆಯನ್ನು ಬೇರೆ ಬೇರೆ ರೀತಿಯಲ್ಲಿ ಚಿತ್ರೀಕರಿಸಿ ವಿದೇಶದಿಂದ ಹಣವನ್ನು ಸಂಗ್ರಹ ಮಾಡಿ ಆ ಹಣವನ್ನು ಬೇರೆ ರೀತಿಯಲ್ಲಿ investment ಮಾಡುತ್ತಿದ್ದಾರೆನ್ನುವಂಥಾದ್ದು ಮುಖ್ಯವಾದ ವಿಷಯವಿದೆ. ಈ ಕುರಿತಂತೆ ಕೇವಲ ಶಿಕ್ಷಣ ಇಲಾಖೆ ಮಾತ್ರ ಉತ್ತರ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಉಳಿದ ಎಲ್ಲಾ ಇಲಾಖೆಗಳು ಇದರೊಳಗೆ ಕೇಂದ್ರ ಸರ್ಕಾರವೂ ಯಾವ ರೀತಿಯಾಗಿ ಹಣ ಸಂಗ್ರಹಕ್ಕೆ ಅವಕಾಶವನ್ನು ಮಾಡಿಕೊಟ್ಟಿದೆ. ನಾವು ಯಾವ್ಯಾವ ನಿಯಮಗಳಡಿಯಲ್ಲಿ, ಯಾವ್ಯಾವ ಕಾನೂನಿನಡಿಯಲ್ಲಿ

ಇತ್ಯಾದಿಗಳೆಲ್ಲವನ್ನು ನೋಡಬೇಕಾದಂಥ ಅಗತ್ಯತೆ ಇದೆ. ಅದರೆ ಬಿಸಿ ಊಟದ ಯೋಜನೆಯನ್ನು ಕುರಿತಂತೆ 2007ರಲ್ಲಿ ಈ ವರದಿ ಬಂದಿದೆ. ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಸಹ ದಿನಾಂಕ 14–11–2007ರಲ್ಲಿ ಒಂದು ಪತ್ರವನ್ನು ಬರೆದು, ಅಕ್ಷಯ ಪಾತ್ರೆ ಯೋಜನೆ ಹೇಗೆ ನಡೆಯುತ್ತಿದೆಯೆಂಬ ಬಗ್ಗೆ ನಮ್ಮ ರಾಜ್ಯ ಸರ್ಕಾರದ ನಿಲುವನ್ನು ಆಗ ಕೇಂದ್ರ ಸರ್ಕಾರಕ್ಕೂ ಸಹ ತಿಳಿಸಿದ್ದೇವೆ. ಇದೆಲ್ಲವೂ ಒಂದು ಭಾಗವಾಗಿದೆ. ನಾನು ಇನ್ನೂ ಅನೇಕ ಸಂಗತಿಗಳು ಇದ್ದರೂ ಸಹ ಯಾವುದನ್ನೂ ಪ್ರಸ್ತಾಪಿಸುವುದಕ್ಕೆ ಹೋಗದೆ, ಉಲ್ಲೇಖಿಸುವುದಕ್ಕೆ ಹೋಗದೆ, ಒಂದು ಮಾತನ್ನು ಸ್ಪಷ್ಟವಾಗಿ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ನಮ್ಮ ಈ ಸರ್ಕಾರದ ಪ್ರತಿಷ್ಠಿತ ಯೋಜನೆಯನ್ನು ನಾವು ಬೇರೆ ಬೇರೆಯವರ ಸಹಯೋಗದಲ್ಲಿ ಏನು ನಡೆಸುತ್ತಿದ್ದೇವೆ. ಈ ಯೋಜನೆಯನ್ನು ಚೆನ್ನಾಗಿ ನಡೆಸುತ್ತಿರುವಂಥವರು ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ, ಅವರು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಈ ಯೋಜನೆ ಫಲಪ್ರದವಾಗಿ ಅನುಷ್ಠಾನಗೊಳ್ಳಲೇಬೇಕು. ಅದರ ಬಗ್ಗೆ ಹಿಂದೆ ಹೋಗುವ ಪ್ರಶ್ನೆ ಇಲ್ಲ. ಅದರೆ ಈ ಯೋಜನೆಯ ಹೆಸರಿನಲ್ಲಿ ಬೇರೆ ಬೇರೆ ರೀತಿಯ ಜಾಹಿರಾತುಗಳನ್ನು ಭಾರತಕ್ಕೆ ಅವಮಾನವಾಗುವ ರೀತಿಯಲ್ಲಿ, ನಾವೆಲ್ಲರೂ ತಲೆ ತಗ್ಗಿಸುವಂಥ ರೀತಿಯಲ್ಲಿ, ಜಾಹಿರಾತುಗಳನ್ನು ಕೊಟ್ಟು ಸಿ.ಡಿ. ಗಳನ್ನು ಮಾಡುವಂಥ ಪ್ರವೃತ್ತಿಯನ್ನು ಸರ್ಕಾರ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ನಮಗೆ ಸ್ವಾಭಿಮಾನ ಇದೆ, ರಾಷ್ಟ್ರಾಭಿಮಾನ ಇದೆ, ನಮ್ಮ ಶಿಕ್ಷಣ ಕ್ಷೇತ್ರದ ಬಗ್ಗೆ, ನಾವು ಕೊಡುತ್ತಿರುವಂಥ ಎಲ್ಲ ಚಟುವಟಿಕೆಗಳ ಬಗ್ಗೆ ನಮಗೆ ಹೆಮ್ಮೆ ಇದೆ. ನಮ್ಮ ಈ ರೀತಿಯ ಒಳ್ಳೆಯತನವನ್ನು ದೌರ್ಬಲ್ಯವನ್ನಾಗಿ ಭಾವಿಸುವಂಥ ಅಥವಾ ತಲೆತಗ್ಗಿಸುವಂಥ ರೀತಿಯಲ್ಲಿ ಯಾರೂ ಅರ್ಥೈಸುವುದಕ್ಕೆ ಶಿಕ್ಷಣ ಇಲಾಖೆಯ ವತಿಯಿಂದ ನಾವು ಬಿಡುವುದಿಲ್ಲ ಎನ್ನುವಂಥ ಮಾತನ್ನು ಸಹ ಸ್ಪಷ್ಟಗೊಳಿಸುತ್ತೇವೆ. ಈ ಯೋಜನೆಯನ್ನು ಇನ್ನೂ ಚೆನ್ನಾಗಿ ಅನುಷ್ಠಾನ ಗೊಳಿಸುವುದಕ್ಕೆ ನಾವು ಎಲ್ಲರ ಸಲಹೆ ಸೂಚನೆಗಳ ಮೇಲೆ ನಮ್ಮದೇ ಆದಂಥ ಒಂದು ಪ್ರಯತ್ನವನ್ನು ಮಾಡುತ್ತೇವೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮುಂದಿನ ವಿವರಗಳನ್ನು ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ವಿಷಯದ ಕುರಿತಂತೆ ತಮ್ಮ ಮಾತುಗಳನ್ನು

ಹೇಳಬೇಕು ಎಂದು ಕೇಳಿಕೊಂಡು, ಈ ಅವಕಾಶಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಪ್ರಾಯಶಃ ಇತ್ತೀಚಿನ ದಿನಗಳಲ್ಲಿ ಬಹಳ ಒಂದು ಒಳ್ಳೆಯ ಚರ್ಚೆ ಇವತ್ತು ಆಗಿದೆ. ಬಹಳ ವಿವರವಾಗಿ ನಡೆದ ಈ ಒಂದು ಚರ್ಚೆಯಲ್ಲಿ ಅನೇಕ ವಿವರಗಳನ್ನು ತಿಳಿಸಿದ ಶ್ರೀ ಡಿ.ಕೆ. ಶಿವಕುಮಾರ್ ರವರ ವಾದ ಸರಣಿಯನ್ನು ಎಲ್ಲರು ಮೆಚ್ಚಿದ್ದಾರೆ. ಇಡೀ ಸದನದ ಎಲ್ಲರೂ ಕೂಡ ನನ್ನ ಧ್ವನಿ ಜೊತೆ ತಮ್ಮ ಧ್ವನಿಗೂಡಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಬಹಳ ಚೆನ್ನಾಗಿ ತಾವು ವಿಚಾರವನ್ನು ಮಂಡಿಸಿದ್ದೀರಿ. ವಿಷಯದ ಕುರಿತು ತಾವು ವಿವರಗಳನ್ನು ಚೆನ್ನಾಗಿ ಹೇಳಿರುವುದಷ್ಟೇ ಅಲ್ಲದೇ, ಬಹಳ ಚೆನ್ನಾಗಿ ಅಧ್ಯಯನ ಮಾಡಿಕೊಂಡು ಬಂದು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಭಗವದ್ಗೀತೆಯಿಂದ ಹಿಡಿದು Bush ವರೆಗೂ ಅನೇಕ ವಿಚಾರಗಳನ್ನು ತಾವು ಇವತ್ತು ತಿಳಿಸಿ, ಒಂದು ರೀತಿಯಲ್ಲಿ ಬೇರೆಯವರೂ ಕೂಡ ಯಾವ ರೀತಿಯಲ್ಲಿ debate ಮಾಡಬೇಕು ಎನ್ನುವುದಕ್ಕೆ ಪ್ರಚೋದನೆಯನ್ನೋ, ಪ್ರೇರಣೆಯನ್ನೋ ಇವತ್ತು ಕೊಟ್ಟಿದ್ದೀರಿ.

ಇವತ್ತು ನಿಯಮ 60ರ ಅಡಿಯಲ್ಲಿ ತಾವು ಒಂದು ಗಂಭೀರ ವಿಚಾರವನ್ನು ಇಲ್ಲಿ ತಂದಿದ್ದು, ಇದು ಬಹಳ ವಿಶೇಷವಾದ ಒಂದು ನಿರ್ಣಯ. ಏಕೆಂದರೆ, ಅನೇಕ ವಿಚಾರಗಳನ್ನು ಇದರಲ್ಲಿ ಸೇರಿಸಿದ್ದೀರಿ. ಇದರಲ್ಲಿ ಖಾಸಗೀಕರಣದ ಕುರಿತು ಇದೆ, ತುಳಿತಕ್ಕೊಳಗಾದ ಹೆಣ್ಣು ಮಕ್ಕಳು ಉದ್ಯೋಗ ವಂಚಿತರಾಗಿರುವುದನ್ನು ಹೇಳಿದ್ದೀರಿ, ಈ ಕುರಿತು ಸಾರ್ವಜನಿಕರ ಪ್ರತಿಭಟನೆ ಆಗುತ್ತಿರುವುದರ ಬಗ್ಗೆ mention ಮಾಡಿದ್ದೀರಿ. ವಿಶೇಷವಾಗಿ ಈ ಒಂದು ಫೋಟೋವನ್ನು ತೋರಿಸಿದ್ದೀರಿ. ಅದರಲ್ಲಿ ಅಳುತ್ತಾ ಇರುವ ಒಬ್ಬ ಮುಗ್ಧ ಬಾಲಕಿ ಒಂದು ರೀತಿ ಭಾರತದ ಪ್ರತೀಕ. ಆಕೆಯ ಫೋಟೋವನ್ನು ವಿದೇಶಗಳಲ್ಲೆಲ್ಲ ತೋರಿಸಿ, ಆ ಮೂಲಕ ಕೋಟ್ಯಾಂತರ ರೂಪಾಯಿಗಳ ದೇಣಿಗೆಯನ್ನು ಪಡೆಯುತ್ತಿರುವ ಬಗ್ಗೆ ಹೇಳಿದ್ದೀರಿ. ಇದರ ಮುಖಾಂತರ ನಮ್ಮ ದೇಶದ, ನಮ್ಮ ರಾಜ್ಯದ ಸ್ವಾಭಿಮಾನವನ್ನು ಹೇಗೆ ಹರಾಜಿಗೆ ಇಡಲಾಗುತ್ತಿದೆ ಎನ್ನುವ ವಿಚಾರವನ್ನು ಹೇಳಿದ್ದೀರಿ. ಹಣಕಾಸಿನ ಅವ್ಯವಹಾರ, real estate ಈ ರೀತಿ ಅನೇಕ ಹತ್ತು ಹಲವು ವಿಚಾರಗಳನ್ನು ಒಂದು ನಿರ್ಣಯದಲ್ಲಿ ತರಲಿಕ್ಕೆ ತಾವು ಶ್ರಮಿಸಿದ್ದೀರಿ ಮತ್ತು ಗಂಭೀರವಾಗಿ ಹೇಳಿದ್ದೀರಿ. ಗೆಳೆಯ ವಿಶ್ವೇಶ್ವರ

ಹೆಗಡೆಯವರು ಹೇಳಿದ ಹಾಗೆ, ಇಲ್ಲಿ ಆಗುತ್ತಿರುವ ವ್ಯವಹಾರ ಅಥವಾ ಅವ್ಯವಹಾರದ ಜೊತೆಗೆ ಅಕ್ಷರ ದಾಸೋಹವನ್ನು ನಾವು ಬೆರೆಸುವುದು ಅಷ್ಟು ಸರಿ ಹೋಗುವುದಿಲ್ಲ. ಅಕ್ಷರ ದಾಸೋಹ ಒಂದು ಬಹಳ ಒಳ್ಳೆಯ ಯೋಜನೆ. "We should not throw the baby along with the tub water"ಎಂದು ಹೇಳುತ್ತಾರಲ್ಲ, ಹಾಗೆ, stubನಲ್ಲಿರುವ bath water ಅನ್ನು ತಳ್ಳುವಾಗ ಮಗುವನ್ನೂ ಕೂಡ ಆಚೆ ಹಾಕಿ ಬಿಡಬಾರದು. ವಿಶ್ವೇಶ್ವರ ಹೆಗಡೆಯವರು ಹೇಳಿದ ಹಾಗೆ, ಈ ಯೋಜನೆಯನ್ನು ಇನ್ನುಷ್ಟು ಗಟ್ಟಿ ಮಾಡುವುದು ಹೇಗೆ, ಸಿದ್ಧರಾಮಯ್ಯನವರು ಹೇಳಿದ ಹಾಗೆ, ನಮ್ಮ ಮಕ್ಕಳಿಗೆ ಇನ್ನಷ್ಟು ಪೌಷ್ಠಿಕಾಂಶ ಕೊಟ್ಟು ಅವರನ್ನು ಶಕ್ತಿವಂತ, ಬುದ್ಧಿವಂತ ನಾಗರೀಕರನ್ನಾಗಿ ಮಾಡುವುದು ಹೇಗೆ ಎನ್ನುವ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇವತ್ತು ಅನೇಕ ವಿಚಾರಗಳನ್ನು ತಾವು ಇಲ್ಲಿ ಪ್ರಸ್ತಾಪ ಮಾಡಿ, ಕೆಲವೊಂದು ವಿಚಾರಗಳ ಮೂಲಕ ಒಂದು ರೀತಿಯಲ್ಲಿ ಈ ಸದನ ಬೆಚ್ಚಿ ಬೆರಗಾಗುವ ಹಾಗೆ ಮಾಡಿದ್ದೀರಿ, ಬೆಳಕನ್ನು ಚೆಲ್ಲಿದ್ದೀರಿ. ಈ ಕುರಿತು ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲೂ ಮಾತನಾಡಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಈ ರೀತಿ ನಮ್ಮ ಅಸಹಾಯಕ ಧ್ವನಿ ಇಲ್ಲದಿರುವ ಮಕ್ಕಳನ್ನು ಫೋಟೋ ದುರುಪಯೋಗ ಪಡಿಸಿಕೊಂಡು, ವಿದೇಶಗಳಲ್ಲಿ ಕೋಟ್ಯಾಂತರ ರೂಪಾಯಿ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಇದರಿಂದ ರಾಜ್ಯಕ್ಕೆ ಮತ್ತು ದೇಶಕ್ಕೆ ಅವಮಾನವಾಗುತ್ತಿರುವುದು, ನಮ್ಮ ಸ್ವಾಭಿಮಾನಕ್ಕೆ ಪೆಟ್ಟು ಬೀಳುತ್ತಿರುವ ಸಂಗತಿ ಮತ್ತು ಬೇರೆ ಎಲ್ಲ ವಿಚಾರಗಳನ್ನು ಹೇಳಿದ್ದೀರಿ. ಈ ಕುರಿತು ಸಮಗ್ರವಾದ ಒಂದು ತನಿಖೆಯಾಗಬೇಕು. ಆ ಸಮಗ್ರವಾದ ತನಿಖೆಯನ್ನು ಮಾಡಲಿಕ್ಕೆ ಸರ್ಕಾರ ಸಂಪೂರ್ಣವಾಗಿ ತನ್ನ ಒಪ್ಪಿಗೆಯನ್ನು ನೀಡುತ್ತಾ, ಈ ಕುರಿತು ತನಿಖೆ ಮಾಡಿಸಿ ಸತ್ಯಾಂಶವನ್ನು ಹೊರಗಡೆ ತಂದು ಅಗತ್ಯವಾದ ಕ್ರಮವನ್ನು ಜರುಗಿಸಲಿಕ್ಕೆ ಸದನ ಸಮಿತಿ ಮಾಡಬೇಕು ಎಂದು ಇವತ್ತು ತೀರ್ಮಾನ ತೆಗೆದುಕೊಂಡು, ನಾನು ಸಭಾಧ್ಯಕ್ಷರಿಗೆ ಮತ್ತು ಸಭಾಧ್ಯಕ್ಷರ ಮೂಲಕ ಸಭೆಗೆ ತಿಳಿಸುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ಇದನ್ನು ಒಪ್ಪಿ ಸದನ ಸಮಿತಿಗೆ ಒಪ್ಪಿಗೆ ಸೂಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಇದು ನಮ್ಮ ಮಕ್ಕಳ ಭವಿಷ್ಯ, ಈ ದೇಶದ ಭವಿಷ್ಯ ಮತ್ತು ಈ ರಾಷ್ಟ್ರದ ಗೌರವದ ವಿಚಾರ. ಆದ್ದರಿಂದ ಅವರಿಗೆ ನಾನು ವಿರೋಧ

ಪಕ್ಷದ ನಮ್ಮ ಎಲ್ಲ ಸದಸ್ಯರ ಪರವಾಗಿ ಈ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು: ನಿಮ್ಮ ವಾದಸರಣಿಯನ್ನು ಅವರು ಒಪ್ಪಿಕೊಂಡರು.

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ಶ್ರೀಕಾಂತ್ ಕುಲಕರ್ಣಿಯವರೇ ತಾವು ಪ್ರಾರಂಭ ಮಾಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಇವತ್ತು ರೆವಿನ್ಯೂ ಮಿನಿಸ್ಟರ್‌ರವರಿಂದ ಒಂದು ಸ್ಟೇಟ್‌ಮೆಂಟ್ ಕೊಡಿಸುತ್ತೇನೆ ಎಂದು ನಿನ್ನೆ ಹೇಳಿದ್ದಿರಿ.

ಶ್ರೀ ಎಸ್. ಸುರೇಶ್ ಕುಮಾರ್: ನಾಳೆ ಕೊಡುತ್ತಾರೆ.

ಅಧ್ಯಕ್ಷರು: ನಾಳೆ ಕೊಡುತ್ತಾರಂತೆ.

ಶ್ರೀ ಹೆಚ್.ಡಿ. ರೇವಣ್ಣ: ಬಾಲಕೃಷ್ಣರವರ ಒಂದು ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡಿಸಬೇಕಿತ್ತು. ಈಗ ಇಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿದ್ದಾರೆ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಇದ್ದಾರೆ. ದಯಮಾಡಿ ಒಂದು ಹೇಳಿಕೆ ಕೊಡಿಸಬೇಕು. ಇವತ್ತು ಹೇಳಿಕೆ ಕೊಡಿಸುತ್ತೇನೆಂದು ನಿನ್ನೆ ಹೇಳಿದ್ದಿರಿ.

ಅಧ್ಯಕ್ಷರು: ನಿಯಮ 69ರ ಚರ್ಚೆಯಾದ ನಂತರ zero hour ತೆಗೆದುಕೊಂಡು ಆಗ ನಿಮಗೆ ಕೊಡಿಸುತ್ತೇನೆ.

5. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ

ವಿಷಯ: ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಆಗುತ್ತಿರುವ ಅವ್ಯವಸ್ಥೆಯ ಬಗ್ಗೆ

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಮಾನ್ಯ ಅಧ್ಯಕ್ಷರೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ವಿದ್ಯುತ್ ಸಮಸ್ಯೆ ಬಗ್ಗೆ ಚರ್ಚೆ ಮಾಡಲು ತಾವು ನಿಯಮ 69ರ ಮೇರೆಗೆ ನಮಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕಳೆದ ವರ್ಷ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ತಿನ ಭಾರಿ ಅಭಾವವಾಗಿ ವಿಶೇಷವಾದಂಥ ಸಮಸ್ಯೆಯಾಗಿತ್ತು. ಕರ್ನಾಟಕದಲ್ಲಿ ಮಳೆ ಆಗದೇ ಇದ್ದಾಗ ಜಲಾಧಾರಿತ ವಿದ್ಯುತ್ ಉತ್ಪಾದನೆ ನಿಂತು ಹೋದಂಥ ಸಂದರ್ಭದಲ್ಲಿ, ರಾಜ್ಯದ ಸಮಸ್ತ ಅಭಿವೃದ್ಧಿಯ ಚಿಂತನೆ ಇದ್ದಾಗ, ಸನ್ಮಾನ್ಯ ಯಡಿಯೂರಪ್ಪನವರು ಮತ್ತು ಸನ್ಮಾನ್ಯ ಈಶ್ವರಪ್ಪನವರು ವಿಶೇಷವಾದಂತೆ ಒಂದು ಸಾಹಸವನ್ನು ಮಾಡಿ, ಸುಮಾರು ಮೂರು ಸಾವಿರ